ಶನಿವಾರ, ಮೇ 17, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

RERA NO: PRM/KA/RERA/1251/309/PR/070525/007719
FOR MORE DETAILS VISIT WWW.RERA.KARNATAKA.GOV.IN

140 UNITS SOLD IN 3 DAYS

Don't miss out!

Your last chance to own a home @ just ₹**7199/sft.** in **Yelahanka**

CASAGRAND PROMENADE

Luxuriously Crafted. Perfectly Located.

THE BEST OF LUXURY & CONNECTIVITY

- **65+** PREMIUM AMENITIES
- **13000** SFT GRAND CLUBHOUSE
- **2.6** ACRES LUSH GREENERY
- **32000** SFT CENTRAL COURTYARD
- MALL OF ASIA (10 MINS)
- MANYATA TECH PARK (15 MINS)
- HEBBAL FLYOVER (15 MINS)
- INTERNATIONAL AIRPORT (20 MINS)

SPACIOUS 3 & 4 BHK RESIDENCES FROM ₹**1.3CR** - ₹**1.9CR***

T&C Apply*

OFFER PRICE VALID TILL 18TH MAY



CREDAI

93840 54982

EXCLUSIVE SITE VISIT AVAILABLE
VISIT MODEL HOUSE AT SITE

SCAN TO EXPERIENCE THE VIRTUAL WALK-THROUGH

CASAGRAND
building aspirations

RERA NO: PRM/KA/RERA/1251/446/PR/280324/006768
FOR MORE DETAILS VISIT WWW.RERA.KARNATAKA.GOV.IN

CLOSE TO PRIME LOCATIONS
CLOSER TO THE RIGHT PRICE

HOMES JUST 5 MINS FROM MANYATA TECH PARK @ JUST ₹5999/SFT.

LAUNCHING
CASAGRAND REGAL
NEAR
NAGAVARA JN.

Indiranagar ₹12,000/sft
HRBR Layout ₹8,000/sft
Banaswadi ₹8,000/sft
Hebbal ₹9,000/sft
Hennur ₹8,000/sft
Kasturi Nagar ₹8,000/sft

T&C Apply*

NAGAVARA JUNCTION PRICE	CASAGRAND LAUNCH PRICE	CASAGRAND EARLY BIRD PRICE	SUPERIOR 3 BHK APARTMENTS
~~₹8000/SFT.~~	~~₹6299/SFT.~~	₹5999/SFT. (For first 15 units only)	₹1.09 Cr - ₹1.47 Cr

CENTRALLY LOCATED

- 2 mins Nagavara Metro Stn.
- 2 mins Elements Mall
- 5 mins Manyata Tech Park
- 10 mins Hebbal Flyover

INCREDIBLY PRICED

TYPE & SIZE	LAUNCH PRICE	EARLY BIRD PRICE
3 BHK (1678 - 2317 SFT.)	~~₹1.12 Cr - ₹1.52 Cr~~	₹1.09 Cr - ₹1.47 Cr

TOTAL UNITS: 72 | UNITS SOLD: 10

PROJECT HIGHLIGHTS

- 40 lifestyle amenities
- 5500 sft. grand clubhouse
- 1300 sft. rooftop swimming pool
- 55% open space with lush greenery
- 100% Vaastu compliant homes
- Handover in 20 months

WHY CASAGRAND?

- **20 years** of real estate excellence
- **160+** landmark projects
- **55,000+** happy families
- **2023** rigorous quality checks
- **87%** on-time delivery
- **7 cities** Chennai, Bengaluru, Hyderabad, Coimbatore, Pune, Delhi & Dubai
- **2 months** of rental assurance
- **6 months** of resale support
- **8 years** warranty & 10 years of community maintenance
- **75%** open area for 2x more light & ventilation
- **0%** space wastage planning for carpet area efficiency
- **23** global brands used in fittings and finishing materials

CREDAI
93848 88405
EXCLUSIVE SITE VISIT AVAILABLE
VISIT MODEL HOUSE AT SITE

SCAN TO EXPERIENCE THE VIRTUAL WALK-THROUGH

CASAGRAND
building aspirations

ಶನಿವಾರ, ಮೇ 17, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲ ಬೇಗೆ

ಜಮ್ಮುವಿನಲ್ಲಿ ಬಿಸಿಲ ಬೇಗೆ ಹೆಚ್ಚಿದ್ದು, ವ್ಯಕ್ತಿಯೊಬ್ಬ ತನ್ನ ತಲೆಯ ಮೇಲೆ ಪೈಪ್ ಮೂಲಕ ನೀರು ಸುರಿದುಕೊಂಡ ದೃಶ್ಯ ಶುಕ್ರವಾರ ಕಂಡುಬಂತು

ಯೋಜನೆ ವಿರೋಧಿಸಿದ ಬಿಜೆಪಿಯಿಂದಲೂ ನಮ್ಮದೇ 'ಗ್ಯಾರಂಟಿ' ನಕಲು: ಮುಖ್ಯಮಂತ್ರಿ ಸಿದ್ದರಾಮಯ್ಯ

'ದೇಶಕ್ಕೆ ಕರ್ನಾಟಕವೇ ಮಾದರಿ ರಾಜ್ಯ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಗ್ಯಾರಂಟಿ ಯೋಜನೆ ವಿರೋಧಿಸಿದ ಬಿಜೆಪಿಯವರು ಈಗ ನಮ್ಮನ್ನು ನಕಲು ಮಾಡುತ್ತಿದ್ದಾರೆ. ಗ್ಯಾರಂಟಿಗಳನ್ನು ನೀಡಿಯೂ ಅಭಿವೃದ್ಧಿ ಕಾರ್ಯ ನಡೆಸುತ್ತಿರುವ ಕರ್ನಾಟಕವೇ ಇಂದು ದೇಶಕ್ಕೆ ಮಾದರಿ ಆಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮೇ 20ರಂದು ನಡೆಯುವ ಸಮರ್ಪಣಾ ಸಾಧನಾ ಸಮಾವೇಶದ ಸಿದ್ಧತೆಯನ್ನು ಶುಕ್ರವಾರ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎರಡು ವರ್ಷದಲ್ಲಿ ₹ 90 ಸಾವಿರ ಕೋಟಿ ಹಣ ಗ್ಯಾರಂಟಿಗೆ ಮೀಸಲಿಟ್ಟಿದ್ದೇವೆ' ಎಂದರು.

'ಕಲ್ಯಾಣ ಕರ್ನಾಟಕದ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ₹5,000 ಕೋಟಿ ಕೊಟ್ಟಿದ್ದೇವೆ. ಚುನಾವಣೆ ವರ್ಷ ಇದೇ ಕೆಕೆಆರ್‌ಡಿಬಿಗೆ ಬೊಮ್ಮಾಯಿ ಅವರು ₹3,000 ಕೋಟಿ ನೀಡುವುದಾಗಿ ಘೋಷಿಸಿದರೆ ಹೊರತು ಬಿಡುಗಡೆ ಮಾಡಲಿಲ್ಲ. ಕಲ್ಯಾಣ ಕರ್ನಾಟಕ ಭಾಗಕ್ಕೆ ಕೇಂದ್ರ ಸರ್ಕಾರವೂ ಬಿಡಿಗಾಸು ನೀಡಿಲ್ಲ' ಎಂದರು.

ಮನೆ ನೀಡಿರಲಿಲ್ಲ: 'ಬಿಜೆಪಿ ತನ್ನ ನಾಲ್ಕು ವರ್ಷದ ಅವಧಿಯಲ್ಲಿ ಒಂದೇ ಒಂದು ಮನೆ ನೀಡಲಿಲ್ಲ. ಆದರೆ, ನಾವು ಈಗಾಗಲೇ ಸಾವಿರಾರು ಮನೆಗಳನ್ನು ನೀಡಿದ್ದೇವೆ. ತಾಂಡಾ, ಹಟ್ಟಿ, ಕ್ಯಾಂಪ್‌ಗಳ ಒಂದು ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡುತ್ತಿದ್ದೇವೆ. ಸೇಡಂಗೆ ಬಂದ ಪ್ರಧಾನಿ ಮೋದಿ ಅವರು 50 ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ಕೊಡುತ್ತೇವೆ ಎಂದರು. ಆದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ' ಎಂದರು.

3 ಲಕ್ಷ ಮಂದಿ ಸೇರುವ ನಿರೀಕ್ಷೆ: ಇದು ಸರ್ಕಾರದ ಸಮರ್ಪಣಾ ಸಾಧನಾ ಸಮಾವೇಶವೇ ಹೊರತು ಪಕ್ಷದ ಕಾರ್ಯಕ್ರಮವಲ್ಲ. ಇದರಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಮೂರು ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ವಿರೋಧ ಪಕ್ಷದ ನಾಯಕರು ಸೇರಿ ಎಲ್ಲಾ ಶಾಸಕರನ್ನೂ ಆಹ್ವಾನಿಸಿದ್ದೇವೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸಹಿತ ಎಐಸಿಸಿಯ ಹಲವು ನಾಯಕರು, ರಾಜ್ಯದ ಎಲ್ಲಾ ಸಚಿವರು ಪಾಲ್ಗೊಳ್ಳುವರು' ಎಂದರು.

ಸಚಿವ ಸ್ಥಾನ: 'ಬಿ.ನಾಗೇಂದ್ರ ಅವರು ಪುನಃ ಸಚಿವರಾಗಲು ಕಾಲ ಕೂಡಿ ಬರಬೇಕು' ಎಂದು ಸಿದ್ದರಾಮಯ್ಯ ಹೇಳಿದರು. 'ಸಚಿವ ಸ್ಥಾನಕ್ಕೆ ನಾಗೇಂದ್ರ ಅರ್ಹರು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಸಚಿವರಾದ ಎಚ್‌.ಕೆ.ಪಾಟೀಲ, ಕೃಷ್ಣ ಬೈರೇಗೌಡ, ಜಮೀರ್ ಅಹಮದ್ ಖಾನ್, ಚೆಲುವರಾಯಸ್ವಾಮಿ, ಬೈರತಿ ಸುರೇಶ್, ಬೋಸರಾಜು, ಶಿವರಾಜ್ ತಂಗಡಗಿ ಇದ್ದರು.



ರಾಜ್ಯ ಸರ್ಕಾರದ ಸಮರ್ಪಣಾ ಸಾಧನಾ ಸಮಾವೇಶದ ಸಿದ್ಧತೆ ಕುರಿತು ಬಿ.ನಾಗೇಂದ್ರ, ಜಮೀರ್ ಅಹಮದ್ ಖಾನ್, ಸಿದ್ದರಾಮಯ್ಯ, ಎಚ್‌ಕೆ.ಪಾಟೀಲ, ಡಿ.ಕೆ.ಶಿವಕುಮಾರ್ ಹೊಸಪೇಟೆಯಲ್ಲಿ ಶುಕ್ರವಾರ ಮಾಹಿತಿ ಪಡೆದರು–ಪ್ರಜಾವಾಣಿ ಚಿತ್ರ

ತುಂಗಭದ್ರಾ: ಈ ವರ್ಷ 32 ಗೇಟ್ ಅಳವಡಿಕೆ ಇಲ್ಲ: ಡಿ.ಕೆ.ಶಿವಕುಮಾರ್

'ತುಂಗಭದ್ರಾ ಅಣೆಕಟ್ಟಿನ ಎಲ್ಲಾ 33 ಗೇಟ್‌ಗಳ ಬದಲಾವಣೆಯನ್ನು ಮೂರೂ ರಾಜ್ಯದವರು ಸೇರಿ ಮಾಡುತ್ತೇವೆ. ಆದರೆ, ಈ ವರ್ಷವಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ತುಂಗಭದ್ರಾ ಜಲಾಶಯಕ್ಕೆ ನವಿಲೆಯಲ್ಲಿ ಸಮತೋಲಿತ ಜಲಾಶಯ ನಿರ್ಮಿಸುವ ಬಗ್ಗೆ ನಾವು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದೇವೆ. ನಾನು ಆಂಧ್ರಪ್ರದೇಶ ಮುಖ್ಯಮಂತ್ರಿ ಜತೆ ಮಾತನಾಡಿದ್ದೇನೆ. ತಾಂತ್ರಿಕ ತಂಡ ಬಂದು ಪರಿಶೀಲಿಸಿದೆ. ನೀರು ಉಳಿಸಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡುತ್ತೇವೆ. ಬಸವಸಾಗರ ಜಲಾಶಯಕ್ಕೆ ನೀರು ಹರಿಸುವ ಚಿಂತನೆಯಿದೆ' ಎಂದು ಅವರು ತಿಳಿಸಿದರು.

'ಕಳಸಾ ಬಂಡೂರಿ ವಿಷಯದಲ್ಲಿ ನಾನು ನಾಲ್ವರು ಕೇಂದ್ರ ಸಚಿವರ ಜೊತೆ ಮಾತನಾಡಿದ್ದೇನೆ. ಪ್ರತ್ಯೇಕ ಸಭೆ ನಡೆಸುವ ಕುರಿತು ಅವರಿಂದ ಭರವಸೆ ಸಿಕ್ಕಿದೆ' ಎಂದರು.

> **ಗ್ಯಾರಂಟಿ ಯೋಜನೆಗಳಿಂದ ರಾಜ್ಯವು ದಿವಾಳಿ ಆಗಿದ್ದರೆ ಮತ್ತು ಬೊಕ್ಕಸದಲ್ಲಿ ಹಣ ಇಲ್ಲದಿದ್ದರೆ, ಇಷ್ಟೆಲ್ಲ ಅಭಿವೃದ್ಧಿ ಸಾಧ್ಯವಾಗುತ್ತಿತ್ತೇ? ಈ ಸಲ ಬಜೆಟ್ ಗಾತ್ರ ₹ 38 ಸಾವಿರ ಕೋಟಿಯಷ್ಟು ಹೆಚ್ಚಳವಾಗಿದ್ದು ಹೇಗೆ?**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಸುದ್ದಿ 2 ನಿಮಿಷ

ಬೆಂಗಳೂರು–ಮಂಗಳೂರು ಕೆಲವು ರೈಲು ಸಂಚಾರ ರದ್ದು

ಬೆಂಗಳೂರು: ಸಕಲೇಶಪುರ – ಸುಬ್ರಹ್ಮಣ್ಯ ಮಾರ್ಗದಲ್ಲಿ ಜೂನ್ 1 ರಿಂದ ನವೆಂಬರ್ 1ರ ವರೆಗೆ ಸುರಕ್ಷತೆ ಮತ್ತು ರೈಲ್ವೆ ವಿದ್ಯುದ್ದೀಕರಣ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕೆಲವು ರೈಲುಗಳ ಸಂಚಾರ ತಾತ್ಕಾಲಿಕವಾಗಿ ರದ್ದಾಗಲಿದೆ.

ಪ್ರತಿ ಶನಿವಾರ ಸಂಚರಿಸುವ ಯಶವಂತಪುರ-ಮಂಗಳೂರು ಜಂಕ್ಷನ್ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಮತ್ತು ಪ್ರತಿ ಭಾನುವಾರ ಮಂಗಳೂರು ಜಂಕ್ಷನ್-ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ರದ್ದಾಗಲಿದೆ.

ಮಂಗಳವಾರ, ಗುರುವಾರ ಮತ್ತು ಭಾನುವಾರ ಸಂಚರಿಸುವ ಯಶವಂತಪುರ-ಮಂಗಳೂರು ಜಂಕ್ಷನ್ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್, ಸೋಮವಾರ, ಬುಧವಾರ ಮತ್ತು ಶುಕ್ರವಾರ ಸಂಚರಿಸುವ ಮಂಗಳೂರು-ಯಶವಂತಪುರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ ರದ್ದಾಗಲಿದೆ.

ಸೋಮವಾರ, ಬುಧವಾರ ಮತ್ತು ಶುಕ್ರವಾರ ಸಂಚರಿಸುವ ಯಶವಂತಪುರ-ಕಾರವಾರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್, ಮಂಗಳವಾರ, ಗುರುವಾರ ಮತ್ತು ಶನಿವಾರ ಸಂಚರಿಸುವ ಕಾರವಾರ-ಯಶವಂತಪುರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ ರೈಲುಗಳ ಸಂಚಾರ ಕೂಡ ರದ್ದಾಗಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮಂತ್ರಿ ಸ್ಥಾನದ ಆಸೆ ಬಿಚ್ಚಿಟ್ಟ ಶಾಸಕ ಶಿವಲಿಂಗೇಗೌಡ

ಹಾಸನ : 'ಮಂತ್ರಿ ಸ್ಥಾನ ಕೊಡ್ತೀವಿ ಅಂತ ವಚನ ನೀಡಿ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಕರೆದುಕೊಂಡು ಬಂದರು, ಅದರಲ್ಲಿ ಏನೂ ಮುಚ್ಚು ಮರೆ ಇಲ್ಲ. ಸಿದ್ದರಾಮಯ್ಯ ಅವರೇ ಸಚಿವ ಸ್ಥಾನ ಕೊಡ್ತೀನಿ ಅಂತ ಹೇಳಿದ್ದರು' ಎಂದು ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ತಿಳಿಸಿದರು.

ಜಿಲ್ಲೆಯ ಅರಸೀಕೆರೆಯಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಸ್ಥಾನದ ಆಸೆ ಬಿಚ್ಚಿಟ್ಟ ಅವರು, 'ಸರ್ಕಾರ ಎರಡು ವರ್ಷ ತುಂಬಿ ಸುಭದ್ರವಾಗಿ ಉಳಿದಿದೆ. ಯಾರು ಏನೇ ಬೊಮ್ಮಡಿ ಹೊಡೆದುಕೊಂಡರೂ ತಲೆ ಕೆಡಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಈಗಲೂ ಎರಡೂವರೆ ವರ್ಷ ಆದ ಮೇಲೆ ಸಚಿವ ಸ್ಥಾನ ಕೊಡ್ತೀವಿ ಅಂತ ಎಲ್ಲರ ಮುಂದೆ, ಸಾರ್ವಜನಿಕ ಭಾಷಣದಲ್ಲೇ ಹೇಳಿದ್ದಾರೆ' ಎಂದರು.

'ಸಚಿವ ಸಂಪುಟ ಇನ್ನೂ ಪುನರ್ ರಚನೆ ಆಗಿಲ್ಲ. ಅದು ಆದಾಗ ಕೊಡುತ್ತಾರೆ ಅನ್ನುವ ಭಾವನೆ ನನಗೂ ಇದೆ. ನಮ್ಮ ಜನರಿಗೂ ಇದೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಗೆದ್ದಿರುವ ಒಬ್ಬನೇ ಶಾಸಕ ಪಕ್ಷವನ್ನು ಬಲಪಡಿಸಬೇಕು ಎಂದರೆ ಮಂತ್ರಿ ಸ್ಥಾನ ಕೊಡಬೇಕು ಎನ್ನುವುದು ರಾಜಕೀಯ ಲೆಕ್ಕಾಚಾರ. ಹೈಕಮಾಂಡ್ ಯಾವಾಗ ಸಂಪುಟ ಪುನರ್ ರಚನೆ ಮಾಡುತ್ತದೆ, ಆಗ ಕೊಡಬಹುದು ಎನ್ನುವುದು ನನ್ನ ಅನಿಸಿಕೆ' ಎಂದು ಹೇಳಿದರು.

ಹಂಪನಾಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 'ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿಗೆ ಸಾಹಿತಿ ಹಂಪ ನಾಗರಾಜಯ್ಯ ಆಯ್ಕೆಯಾಗಿದ್ದಾರೆ.



ಹಂಪ ನಾಗರಾಜಯ್ಯ

ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಕಂಚಿನ ಫಲಕ ಒಳಗೊಂಡಿದೆ. ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ಜೂನ್ 11ರಂದು ಇಲ್ಲಿನ ಕನ್ನಡ ಭವನದಲ್ಲಿರುವ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ. ಕವಿ ಪಿ. ಮಲ್ಲಿಕಾರ್ಜುನಪ್ಪ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಕುರ್‌ಆನ್ ದಹನ: ಮುಸ್ಲಿಮರಿಂದ ಪ್ರತಿಭಟನೆ

ಸ್ವಯಂ ಪ್ರೇರಣೆಯಿಂದ ಅಂಗಡಿ ಮುಂಗಟ್ಟು ಬಂದ್ ಮಾಡಿದ ವರ್ತಕರು, ಬಿಗಿ ಬಂದೋಬಸ್ತ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಸಂತಿಬಸ್ತವಾಡ ಗ್ರಾಮದಲ್ಲಿ ಈಚೆಗೆ ಕುರ್‌ಆನ್ ಗ್ರಂಥ ಸುಟ್ಟು ಹಾಕಿದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ, ನಗರದಲ್ಲಿ ಶುಕ್ರವಾರ ಮುಸ್ಲಿಮರು ಬೃಹತ್ ಪ್ರತಿಭಟನೆ ನಡೆಸಿದರು.

ರಾಣಿ ಚನ್ನಮ್ಮ ವೃತ್ತದಲ್ಲಿ 10 ಸಾವಿರಕ್ಕೂ ಹೆಚ್ಚು ಜನ ಸಮಾವೇಶಗೊಂಡರು. ವೃತ್ತದ ನಾಲ್ಕೂ ದಿಕ್ಕುಗಳ ವಾಹನ ಸಂಚಾರ ಎರಡು ಗಂಟೆ ಸಂಪೂರ್ಣ ಬಂದ್ ಆಯಿತು. ಜಿಲ್ಲಾಧಿಕಾರಿ ಕಚೇರಿಯವರೆಗೆ ರಸ್ತೆಯ ಇಕ್ಕೆಲಗಳಲ್ಲೂ ಪ್ರತಿಭಟನಕಾರರು ಕಿಕ್ಕಿರಿದು ಸೇರಿದರು. ಬಿಳಿ ಜುಬ್ಬಾ, ಟೋಪಿಗಳನ್ನು ಧರಿಸಿದವರು ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡರು. ಮತ್ತೆ ಕಲವರು ಕಪ್ಪು ಬಟ್ಟೆಗಳನ್ನೇ ಧರಿಸಿದ್ದರು.

ನಾರೇ ತಕ್ದೀರ್ ಅಲ್ಲಾಹು ಅಕ್ಬರ್, ಇಸ್ಲಾಂ ಜಿಂದಾಬಾದ್, ಹಿಂದೂಸ್ತಾನ್ ಜಿಂದಾಬಾದ್ ಘೋಷಣೆಗಳು ನಿರಂತರ ಮೊಳಗಿದವು. ಅಲ್ಲಲ್ಲಿ ಗುಂಪುಗಳಾಗಿ ಸೇರಿದ ಯುವಕರು ಉರ್ದು, ಅರಬ್ಬಿ, ಪರ್ಷಿಯನ್ ಭಾಷೆಗಳಲ್ಲೂ ಧಿಕ್ಕಾರ ಕೂಗಿದರು. 'ಲಪೆಟ್– ಲಪೆಟ್ (ಮುನ್ನುಗ್ಗಿ– ಮುನ್ನುಗ್ಗಿ)', 'ಫಾಸಿ ದೋ– ಫಾಸಿ ದೋ (ಗಲ್ಲಿಗೇರಿಸಿ– ಗಲ್ಲಿಗೇರಿಸಿ)', ತೇರಿ ಮೇರಿ ರಿಶ್ತಾ ಕ್ಯಾ? ಲಾ ಇಲಾಹ ಇಲ್ಲಲ್ಲಾಹ್ (ನನ್ನ ನಿನ್ನ ಸಂಬಂಧವೇನು? ಅಲ್ಲಾಹ್ ಬಿಟ್ಟು ಬೇರೆ ದೇವರಿಲ್ಲ)' ಎಂದು ಕೂಗುತ್ತ ಹೆಜ್ಜೆ ಹಾಕಿದರು.

ಇಸ್ಲಾಂ ಧರ್ಮದ ಧ್ವಜಗಳನ್ನು ನಿರಂತರ ಬೀಸಿದರು. ಜಿಲ್ಲಾಧಿಕಾರಿ ಕಚೇರಿಯವರೆಗೆ ಸಾಗಿದ ಪ್ರತಿಭಟನಕಾರರು, ಅಲ್ಲಿಯೂ ಅರ್ಧ ಗಂಟೆ ಗುಂಪು ಸೇರಿದರು. ಕೆಲ ಮುಖಂಡರು ಜಿಲ್ಲಾಡಳಿತದ ಕಚೇರಿಗೆ ತೆರಳಿ, ಜಿಲ್ಲಾಧಿಕಾರಿಗೆ ಮನವಿ ನೀಡಿದರು.

'ಆರೋಪಿಗಳನ್ನು ಬಂಧಿಸಲು ಐದು ದಿನ ಕಾಲಾವಕಾಶ ಬೇಕೆಂದು ಜಿಲ್ಲಾಧಿಕಾರಿ ಕೋರಿದ್ದಾರೆ. ಪ್ರತಿಭಟನೆ ಕೈ ಬಿಡೋಣ' ಎಂದು ಮುಖಂಡರು ಹೇಳಿದರು. ಇದಕ್ಕೆ ಕೆಲವರು ಒಪ್ಪಿದರೆ, ಮತ್ತೆ ಕೆಲವರು ಪಟ್ಟು ಹಿಡಿದು ಕೂತರು. ಇದರಿಂದ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಪೊಲೀಸರು ಎಲ್ಲರನ್ನೂ ಚದುರಿಸಿದರು.

ಖಡೇಬಜಾರ್, ಮಾರುತಿ ಗಲ್ಲಿ, ಮಾಧ್ವ ರಸ್ತೆಯಲ್ಲಿರುವ ಮುಸ್ಲಿಂ ವ್ಯಾಪಾರಿಗಳು ಸ್ವಯಂ ಪ್ರೇರಣೆಯಿಂದ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ, ಬೆಂಬಲ ಸೂಚಿಸಿದರು.

ಸಮರ್ಥವಾಗಿ ನಿಭಾಯಿಸಿದ ಪೊಲೀಸರು: ಏಕಾಏಕಿ ಅಪಾರ ಸಂಖ್ಯೆಯ ಯುವಜನರು ಒಂದೇ ಕಡೆ ಸೇರಿದ್ದರಿಂದ ವಾತಾವರಣ ಬಿಗುವಿನಿಂದ ಕೂಡಿತು. 3,000 ಪೊಲೀಸರು ಬಿಗಿ ಬಂದೋಬಸ್ತ್ ಮಾಡಿ ಪರಿಸ್ಥಿತಿ ನಿಭಾಯಿಸಿದರು. ಮುಂಜಾಗ್ರತಾ ಕ್ರಮವಾಗಿ ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಬೆಳಗಾವಿ ತಾಲ್ಲೂಕಿನಾದ್ಯಂತ ಶುಕ್ರವಾರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12ರವರೆಗೂ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಮುಖಂಡರ ಭಾಷಣಕ್ಕೆ ಅವಕಾಶ ನೀಡದೇ, ಶಾಂತಿಯುತ ಮೆರವಣಿಗೆ ನಡೆಯುವಂತೆ ನೋಡಿಕೊಂಡರು.

ಕುರ್‌ಆನ್, ಹದೀಸ್ ಸುಟ್ಟ ಕಿಡಿಗೇಡಿಗಳು

ಸಂತಿಬಸ್ತವಾಡ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಮಸೀದಿಯ ಕೆಳಗೆ ಕುರ್‌ಆನ್ ಮತ್ತು ಎರಡು ಹದೀಸ್‌ಗಳನ್ನು ಇಡಲಾಗಿತ್ತು. ಮೇ 12ರ ಬೆಳಿಗ್ಗೆ ನಮಾಜ್‌ಗೆ ಬಂದಾಗ ಕುರ್‌ಆನ್ ಮತ್ತು ಹದೀಸ್‌ಗಳು ಕಾಣಿಸಲಿಲ್ಲ. ಹತ್ತಿರದಲ್ಲೇ ಅವುಗಳನ್ನು ಸುಟ್ಟುಹಾಕಿದ ಜಾಗ ಪತ್ತೆಯಾಯಿತು. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಅದೇ ದಿನ ಸಂಜೆ ಮುಸ್ಲಿಮರು ರಾಣಿ ಚನ್ನಮ್ಮ ವೃತ್ತದಲ್ಲಿ ಹಠಾತ್ ಪ್ರತಿಭಟನೆ ನಡೆಸಿದರು.

'ಮೂರು ದಿನಗಳಲ್ಲಿ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಶಾಸಕ ಆಸಿಫ್ ಸೇಠ್ ಮತ್ತು ಪೊಲೀಸರು ಭರವಸೆ ನೀಡಿದರು. ಆದರೆ, ಐದು ದಿನಗಳಾದರೂ ಆರೋಪಿಗಳು ಪತ್ತೆಯಾಗದ ಕಾರಣ, ಶುಕ್ರವಾರ ಮತ್ತೆ ಅವರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

'ಮಸೀದಿ ನಿರ್ಮಾಣ ಕಾಮಗಾರಿ ಕಾರಣ ಸಿಸಿಟಿವಿ ಕ್ಯಾಮೆರಾಗಳನ್ನು ಮೇ 11ರಂದು ತೆರವು ಮಾಡಲಾಗಿತ್ತು. ಹೀಗಾಗಿ, ಆರೋಪಿಗಳ ಪತ್ತೆ ಸವಾಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇನ್‌ಸ್ಪೆಕ್ಟರ್ ಅಮಾನತು

ಮಂಜುನಾಥ ಹಿರೇಮಠ

'ಸಂತಿಬಸ್ತ ವಾಡ ಗ್ರಾಮದಲ್ಲಿ ಕುರ್‌ಆನ್ ಹಾಗೂ ಹದೀಸ್ ಗಳನ್ನು ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಗ್ರಾಮೀಣ ಠಾಣೆಯ ಇನ್‌ಸ್ಪೆಕ್ಟರ್ ಮಂಜುನಾಥ ಹಿರೇಮಠ ಅವರನ್ನು ಅಮಾನತು ಮಾಡಲಾಗಿದೆ' ಎಂದು ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ತಿಳಿಸಿದ್ದಾರೆ.

'ಇದೇ ಗ್ರಾಮದಲ್ಲಿ ಏಪ್ರಿಲ್ 12ರಂದು ಕೂಡ ಈದ್ಗಾ ಮೈದಾನದ ಮೀನಾರ್‌ಗಳಿಗೆ ಧಕ್ಕೆ ಮಾಡಲಾಗಿತ್ತು. ಆ ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಲಾಗಿದೆ. ಅದರಲ್ಲೂ ಇನ್‌ಸ್ಪೆಕ್ಟರ್ ಕರ್ತವ್ಯಲೋಪ ಕಂಡುಬಂದಿದ್ದರಿಂದ ಅಮಾನತು ಮಾಡಿದ್ದೇನೆ' ಎಂದು ತಿಳಿಸಿದ್ದಾರೆ.

ವಿಜ್ಞಾನ ಅಕಾಡೆಮಿಗೆ ರಾಜಾಸಾಬ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷರನ್ನಾಗಿ ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ರಾಜಾಸಾಬ್ ಅವರನ್ನು ನೇಮಕ ಮಾಡಲಾಗಿದೆ.

ಸದಸ್ಯರನ್ನಾಗಿ ಹುಲಿಕಲ್ ನಟರಾಜ್, ಕೃಷ್ಣಮೂರ್ತಿ ಮಂಜುನಾಥ್, ಎಚ್. ಎಸ್.ನಾಗರಾಜ್, ಎಸ್.ಬಿ.ದಂಡಿನ, ಚಂದ್ರಶೇಖರ್ ಬಿರಾದಾರ, ಎಚ್. ಹೊನ್ನೇಗೌಡ, ವಸುಂಧರಾ ಭೂಪತಿ, ಅಶೋಕ ಎಸ್ ಆಲೂರು, ಎಚ್. ನಾಗನಗೌಡ, ಎಂ.ಸಿ .ನಾಯ್ಕ, ಎಚ್.ಎನ್.ಜಗನ್ನಾಥ ರೆಡ್ಡಿ, ಎಸ್. ರಾಜೇಂದ್ರ ಪ್ರಸಾದ್, ಪ್ರಭಾಕರ್ ಸಂಗೂರಮಠ ಅವರನ್ನು ನೇಮಕ ಮಾಡಲಾಗಿದೆ.

'ಭದ್ರತೆ': ಕೈ–ಕಮಲ ಮಾತಿನ ಸಂಘರ್ಷ

'ಕದನ ವಿರಾಮಕ್ಕೆ ಕಾರಣಗಳೇನು?'

ಬೆಂಗಳೂರು: 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯು ದೇಶದ ಸೈನಿಕರ ಮೇಲೆ ಭಾರತೀಯರ ವಿಶ್ವಾಸ, ಗೌರವವನ್ನು ಹೆಚ್ಚಿಸಿದೆ. ಆದರೆ, ಕೇಂದ್ರ ಸರ್ಕಾರದ ವಿದೇಶಾಂಗ ನೀತಿಯ ವೈಫಲ್ಯ ದೇಶದ ಸಾರ್ವಭೌಮತೆಗೆ ಧಕ್ಕೆ ತಂದಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ದೂರಿದ್ದಾರೆ.

ಬಿಜೆಪಿ ಮುಂದೆ ಹಲವು ಪ್ರಶ್ನೆಗಳನ್ನು ಇಟ್ಟಿರುವ ಅವರು, ಪಕ್ಷ ನಡೆಸುತ್ತಿರುವ ತಿರಂಗಾ ಯಾತ್ರೆಯಲ್ಲಿ ದೇಶದ ಜನರಿಗೆ ಉತ್ತರ ನೀಡುವಂತೆ ಒತ್ತಾಯಿಸಿದ್ದಾರೆ.

'ಭಾರತ–ಪಾಕಿಸ್ತಾನದ ನಡುವೆ ಕದನ ವಿರಾಮವು ನನ್ನಿಂದಲೇ ಆಗಿದ್ದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಲವು ಬಾರಿ ಹೇಳಿದ್ದಾರೆ. ಅವರ ಮಾತು ನಿಜವೇ? ಪ್ರಧಾನಮಂತ್ರಿ ಮೋದಿ ಇದುವರೆಗೂ ಏಕೆ ಸ್ಪಷ್ಟನೆ ನೀಡಿಲ್ಲ?. ಭಾರತದ ವಿದೇಶಾಂಗ ನೀತಿ ನಿರ್ವಹಿಸಲು, ದೇಶದ ಭದ್ರತೆಯ ವಿಚಾರಗಳನ್ನು ನಿರ್ಧರಿಸುವ ಹಕ್ಕನ್ನು ಬೇರೆ ದೇಶಕ್ಕೆ ಗುತ್ತಿಗೆ ನೀಡಲಾಗಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಪಾಕಿಸ್ತಾನಕ್ಕೆ ₹20 ಸಾವಿರ ಕೋಟಿ ಸಾಲ ನೀಡುವಾಗ ಭಾರತ ಬಿಟ್ಟು ಇತರೆ ಎಲ್ಲ ದೇಶಗಳೂ ಬೆಂಬಲ ನೀಡಿವೆ. ಇದು ಸ್ವಯಂ ಘೋಷಿತ ವಿಶ್ವಗುರುವಿನ ವೈಫಲ್ಯವೇ? ಇತರೆ ದೇಶಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ವಿಫಲರಾದರೇ? ಸರ್ವ ಪಕ್ಷ ಸಭೆಗಳಿಗೆ ಪ್ರಧಾನ ಮಂತ್ರಿ ಹಾಜರಾಗಲಿಲ್ಲ ಏಕೆ? ಆಪರೇಷನ್ ಸಿಂಧೂರದ ಯಶಸ್ಸಿನ ಕುರಿತು ಸಂಸತ್ ಅಧಿವೇಶನ ಕರೆಯಲು ಹಿಂಜರಿಯುತ್ತಿರುವುದು ಏಕೆ ಎಂದು ಪ್ರಶ್ನಿಸಿದ್ದಾರೆ.

ಕದನ- ವಿರಾಮಕ್ಕೆ ಕಾರಣಗಳೇನು? ಆಗಿರುವ ಒಪ್ಪಂದಗಳೇನು? ದೇಶಕ್ಕಾದ ನಷ್ಟದ ಲೆಕ್ಕವೇನು? ಪಹಲ್ಗಾಮ್ ದಾಳಿಯ ಉಗ್ರರು ಎಲ್ಲಿ ಹೋದರು? ಉಗ್ರರು ಗಡಿಯಿಂದ ಸುಮಾರು 250 ಕಿಲೋ ಮೀಟರ್ ಒಳಗೆ ಬಂದು ದಾಳಿ ಮಾಡಿದ್ದರೂ ಅವರನ್ನು ಹುಡುಕಲು ಏಕೆ ಸಾಧ್ಯವಾಗಲಿಲ್ಲ? ವಾಪಸ್ ಗಡಿ ದಾಟಿ ಹೋಗಿದ್ದಾರೆಯೇ? ಅಥವಾ ದೇಶದ ಒಳಗೆಯೇ ಇದ್ದಾರೆಯೇ? ಭಾರತದ ಸಾರ್ವಭೌಮತೆಗೆ ಧಕ್ಕೆ ತಂದು, ಸೈನ್ಯದ ಸಾಧನೆಯನ್ನು ತಮ್ಮದೆಂದು ಬಿಂಬಿಸಿಕೊಳ್ಳಲು ಹವಣಿಸುತ್ತಿರುವ ಬಿಜೆಪಿ ಜನರ ಪ್ರಶ್ನೆಗಳಿಗೆ ಉತ್ತರಿಸಲಿ ಎಂದು ಪ್ರಿಯಾಂಕ್ ಖರ್ಗೆ ಸವಾಲು ಹಾಕಿದ್ದಾರೆ.

'ಭಟ್ಟಂಗಿಗಳ ಮೂರ್ಖತನದ ಮಾತು'

ಬೆಂಗಳೂರು: ಕಾಶ್ಮೀರ ಸಮಸ್ಯೆ ಇಂದಿಗೂ ಜೀವಂತವಾಗಿ ಉಳಿಯಲು ಕಾಂಗ್ರೆಸ್ ಮತ್ತು ಅದರ ಸ್ವಾರ್ಥ ಆಡಳಿತವೇ ಕಾರಣ ಎಂಬುದು ಜಗತ್ತಿಗೇ ತಿಳಿದ ಸತ್ಯ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಪ್ರಜಾಪ್ರಭುತ್ವದಲ್ಲಿ ಗುಲಾಮಿ ಪದ್ಧತಿಯನ್ನು ನೆನಪಿಸುವ ರೀತಿಯಲ್ಲಿ ಇಂದಿಗೂ ನೆಹರು ಮನೆತನದವರೇ 'ಸುಪ್ರೀಂ' ಎಂದು ಭಾವಿಸುವ ಭಟ್ಟಂಗಿಗಳ ಗರಡಿಯಿಂದ ಬಂದ ಸಚಿವ ಸಂತೋಷ್ ಲಾಡ್ ಮೂರ್ಖರಂತೆ ಮಾತನಾಡುತ್ತಿದ್ದಾರೆ' ಎಂದು 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

'ಕಾಶ್ಮೀರವನ್ನು ಅಸ್ಥಿರಗೊಳಿಸಿದ್ದು ಯಾರು? ಕೊಲೆ, ಅತ್ಯಾಚಾರದ ದೌರ್ಜನ್ಯಗಳನ್ನು ಅನುಭವಿಸಿದ ಪಂಡಿತರ ಕುಟುಂಬಗಳು ಕಾಶ್ಮೀರ ತೊರೆಯುವಂತಾಗಲು ಕಾರಣರಾದವರು ಯಾರು? ಕಾಶ್ಮೀರದ ಒಂದು ಭಾಗವನ್ನು (ಪಿಒಕೆ) ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟವರು ಯಾರು? ಅವಕಾಶವಿದ್ದರೂ ಪಿಒಕೆ ಮರಳಿ ಪಡೆಯದೇ ಕೈಚೆಲ್ಲಿದವರು ಯಾರು ಎಂಬುದಕ್ಕೆ ಅವರು ಉತ್ತರ ಕೊಡಲಿ' ಎಂದು ವಿಜಯೇಂದ್ರ ಹೇಳಿದ್ದಾರೆ.

'ಭಾರತದ ಸಾರ್ವಭೌಮತೆಯ ಶಕ್ತಿ ಮತ್ತು ಘನತೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿ ಹಿಡಿದಿರುವ ಪ್ರಧಾನಿಯವರ ಯೋಗ್ಯತೆ ಅವರಿಗೆ ಇದೆಯೇ? ಲಾಡ್ ಅವರದು ಮೂರ್ಖತನದ ವರ್ತನೆ' ಎಂದಿದ್ದಾರೆ.

'ಪಾಕಿಸ್ತಾನದ ಮೇಲೆ ಯುದ್ಧವೇ ಬೇಡ ಎಂದು ಹೇಳಿ ಪಾಕಿಸ್ತಾನಿ ಮಾಧ್ಯಮಗಳಿಂದ ಬೆನ್ನು ತಟ್ಟಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಸ್ಥಾನ ವಿದ್ವಾನ್ ರೀತಿ ಲಾಡ್ ಮಾತನಾಡುತ್ತಿದ್ದಾರೆ. ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಕೂಗಿಸುತ್ತಾರೆ. ಈಗ ಯಾವ ಮುಖ ಇಟ್ಟುಕೊಂಡು ತಿರಂಗಾ ಯಾತ್ರೆ ಮತ್ತು ಯುದ್ಧದ ಕುರಿತು ಮಾತನಾಡುತ್ತಿದ್ದಾರೆ' ಎಂದು ಅವರು ಪ್ರಶ್ನಿಸಿದ್ದಾರೆ.



'ಅಭಿವೃದ್ಧಿ ಶೂನ್ಯ; ನಾನೂ ಬೀದಿಗಿಳಿದು ಹೋರಾಡುವೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಈ ಭ್ರಷ್ಟ ಹಾಗೂ ಬೇಜವಾಬ್ದಾರಿ ಸರ್ಕಾರದ ವಿರುದ್ಧ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಈಗಾಗಲೇ ಹೋರಾಟ ನಡೆಸುತ್ತಿದ್ದಾರೆ. ಮುಂದಿನ ವಾರದಿಂದ ನಾನೂ ಬೀದಿಗಿಳಿದು ಹೋರಾಡುವೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಬಿ.ಎಸ್ ಯಡಿಯೂರಪ್ಪ

'ರಾಜ್ಯದಲ್ಲಿ ಒಂದೇ ಒಂದು ಅಭಿವೃದ್ಧಿ ಕಾಮಗಾರಿ ನಡೆಯುತ್ತಿಲ್ಲ. ಹಣ ಇಲ್ಲದೇ ರಸ್ತೆಯ ಸಣ್ಣ ಗುಂಡಿಯನ್ನೂ ಮುಚ್ಚಲು ಆಗುತ್ತಿಲ್ಲ. ಹೀಗಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾರಿ ಅಭಿವೃದ್ಧಿ ಮಾಡುತ್ತಿರುವುದಾಗಿ ಬೊಬ್ಬೆ ಹೊಡೆಯುತ್ತಿದ್ದಾರೆ' ಎಂದು ಶುಕ್ರವಾರ ಸುದ್ದಿಗಾರರ ಎದುರು ಆಕ್ರೋಶ ವ್ಯಕ್ತಪಡಿಸಿದರು.

ಗಂಗಾವತಿ ಕ್ಷೇತ್ರದ ಉಪಚುನಾವಣೆಯಲ್ಲಿ ಜನಾರ್ದನ ರೆಡ್ಡಿ ಪತ್ನಿ ಅರುಣಾ ಅವರು ಬಿಜೆಪಿ ಅಭ್ಯರ್ಥಿಯೇ ಎಂಬ ಪ್ರಶ್ನೆಗೆ, 'ಆ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದರು.

ಸಿವಿಲ್, ಮೆಕ್ಯಾನಿಕಲ್‌ಗೆ ಬೇಡಿಕೆ ಹೆಚ್ಚಳ

ಬೆಂಗಳೂರು: ಕೆಲ ವರ್ಷಗಳಿಂದ ಬೇಡಿಕೆ ಕಳೆದುಕೊಂಡಿದ್ದ ಸಿವಿಲ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಮರಳಿ ಬೇಡಿಕೆ ಬಂದಿದ್ದು, ಬಹುತೇಕ ಕಾಲೇಜುಗಳಲ್ಲಿ ಆಡಳಿತ ಮಂಡಳಿ ಕೋಟಾದ ಸೀಟುಗಳು ಭರ್ತಿಯಾಗಿವೆ.

ಕೋವಿಡ್ ನಂತರ ಎರಡೂ ಕೋರ್ಸ್‌ಗಳ ಬೇಡಿಕೆ ಕುಸಿದು, ಸೀಟುಗಳು ಖಾಲಿ ಉಳಿಯುತ್ತಿದ್ದವು. ಕೆಲ ಕಾಲೇಜುಗಳಲ್ಲಿ ಕೋರ್ಸ್‌ಗಳನ್ನೇ ಮುಚ್ಚಲಾಗಿತ್ತು. ಈ ಬಾರಿ ಆಡಳಿತ ಮಂಡಳಿ ಕೋಟಾದ ಸೀಟುಗಳ ಶುಲ್ಕವನ್ನು ₹20 ಲಕ್ಷದಿಂದ ₹30 ಲಕ್ಷದವರೆಗೆ ನಿಗದಿ ಮಾಡಿದ್ದರೂ, ಎಲ್ಲ ಸೀಟುಗಳು ಭರ್ತಿಯಾಗಿವೆ. ಇನ್ನೂ ಬೇಡಿಕೆ ಬರುತ್ತಿವೆ ಎಂದು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಹೇಳಿವೆ.

'ಖಾಸಗಿ ಕಾಲೇಜುಗಳ ಜತೆಗೆ ಸರ್ಕಾರಿ ಕಾಲೇಜು ಹಾಗೂ ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೂ ಬೇಡಿಕೆ ಬರುತ್ತಿದ್ದು, ಸಿಇಟಿ ರ‍್ಯಾಂಕಿಂಗ್ ಪ್ರಕಟವಾದ ನಂತರ ಸಿವಿಲ್, ಮೆಕ್ಯಾನಿಕಲ್ ವಿಭಾಗಗಳ ಎಲ್ಲ ಸೀಟುಗಳು ಭರ್ತಿಯಾಗಬಹುದು. ನಿರ್ಮಾಣ ಕ್ಷೇತ್ರದ ಚೇತರಿಕೆ, ತಯಾರಿಕಾ ಉದ್ಯಮ, ರಕ್ಷಣಾ ವಲಯ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ನಿರ್ವಹಣಾ ಕೋಟಾದಡಿಯಲ್ಲಿ ಯಾಂತ್ರಿಕ ಶಾಖೆಗಳಿಗೆ ಪ್ರವೇಶ ಸುಧಾರಿಸಿರುವುದು ಬೇಡಿಕೆ ಹೆಚ್ಚಳಕ್ಕೆ ಕಾರಣ ಇರಬಹುದು' ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ರಾಜ್ಯ ಪತ್ರಿಕಾ ವಿತರಕರ ಮಕ್ಕಳು, ಏಜೆಂಟರ ಮಕ್ಕಳು ಮತ್ತು ಪತ್ರಿಕೆ ವಿತರಿಸುವವರಿಗೆ ಪ್ರತಿಭಾ ಪುರಸ್ಕಾರ ನೀಡುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹರು ಅಗತ್ಯ ದಾಖಲೆಗಳೊಂದಿಗೆ ಜೂನ್ 10ರ ಒಳಗೆ ನಂ.2288, ಸಿ.ಹೆಚ್.45, 10ನೇ ಕ್ರಾಸ್, ಅಶೋಕಪುರಂ, ಮೈಸೂರು-8 ಇಲ್ಲಿಗೆ ಅರ್ಜಿ ಸಲ್ಲಿಸಬಹುದು ಎಂದು ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ ಶಂಭುಲಿಂಗ ತಿಳಿಸಿದ್ದಾರೆ.

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮತ್ತು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಜಂಟಿಯಾಗಿ ಮೈಸೂರಿನಲ್ಲಿ ಹಮ್ಮಿಕೊಂಡಿರುವ 5ನೇ ರಾಜ್ಯ ಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಮಾಹಿತಿಗೆ ಮೊಬೈಲ್: 9972534666, 7411447086 ಸಂಪರ್ಕಿಸಬಹುದು.

ನಾಲ್ವರಿಗೆ 'ಗೊರುಚ ದತ್ತಿ ಪ್ರಶಸ್ತಿ'

ಬೆಂಗಳೂರು: ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು 'ಗೊರುಚ ದತ್ತಿ ನಿಧಿ ಪ್ರಶಸ್ತಿ'ಗಳನ್ನು ಪ್ರಕಟಿಸಿದ್ದು, 'ಗೊರುಚ ಶರಣ ಪ್ರಶಸ್ತಿ'ಗೆ ಶಾಂತಾ ಇಮ್ರಾಪುರ ಆಯ್ಕೆಯಾಗಿದ್ದಾರೆ.

'ಗೊರುಚ ಜಾನಪದ ಪ್ರಶಸ್ತಿ'ಗೆ ಜಗನ್ನಾಥ ಹೆಬ್ಬಾಳೆ ಭಾಜನರಾಗಿದ್ದಾರೆ. 'ಶರಣ ಸಾಹಿತ್ಯ ಗ್ರಂಥ ಪ್ರಶಸ್ತಿ'ಗೆ ಚಂದ್ರಶೇಖರಯ್ಯ ಅವರು ರಚಿಸಿರುವ 'ಬಸವ ಪ್ರಣೀತ ಲಿಂಗಾಯತ ಧರ್ಮ' ಕೃತಿ, 'ಜನಪದ ಸಾಹಿತ್ಯ ಗ್ರಂಥ ಪ್ರಶಸ್ತಿ'ಗೆ ಮೊಗಳ್ಳಿ ಗಣೇಶ್ ಅವರ 'ದಲಿತ ಜನಪದ' ಕೃತಿ ಆಯ್ಕೆಯಾಗಿದೆ.

ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. 'ಗೊರುಚ ಶರಣ ಪ್ರಶಸ್ತಿ' ಹಾಗೂ 'ಗೊರುಚ ಜಾನಪದ ಪ್ರಶಸ್ತಿ' ತಲಾ ₹ 25 ಸಾವಿರ ಮತ್ತು ಗ್ರಂಥ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ.

ಇದೇ 18ರಂದು ಬೆಳಿಗ್ಗೆ 10.30ಕ್ಕೆ ಹಾಸನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ದತ್ತಿ ದಾನಿ ಗೊ.ರು. ಚನ್ನಬಸಪ್ಪ ಅವರು ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ವೈದ್ಯಕೀಯ ವಿದ್ಯಾರ್ಥಿಗಳ ದಾಖಲೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವೇಶ ಪಡೆಯುವ ವೈದ್ಯಕೀಯ ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ಸಂಗ್ರಹಿಸಲು ಖಾಸಗಿ ಕಾಲೇಜುಗಳಿಗೆ ಸೂಚಿಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೈದ್ಯಕೀಯ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳು ಸರ್ಕಾರಿ ಹಾಗೂ ಆಡಳಿತ ಮಂಡಳಿ ಕೋಟಾದ ಅಡಿ ಪ್ರವೇಶ ನೀಡುವ ಎಲ್ಲ ವಿದ್ಯಾರ್ಥಿಗಳ ದಾಖಲೆಗಳನ್ನು ಸಂಗ್ರಹಿಸುವ ಕುರಿತು ಒಪ್ಪಂದದಲ್ಲೇ ಷರತ್ತು ವಿಧಿಸಬೇಕು ಎಂದು ಪ್ರಾಧಿಕಾರ ಕೋರಿದೆ.

ನಾಪೋಕ್ಲು, ದಾವಣಗೆರೆಯಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ದಾವಣಗೆರೆ: ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಹೋಬಳಿ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ, ಮಳವಳ್ಳಿ ಸುತ್ತಮುತ್ತ ಶುಕ್ರವಾರ ಬಿರುಸಿನ ಮಳೆಯಾಯಿತು. ಮೈಸೂರು ನಗರ, ಎಚ್‌.ಡಿ.ಕೋಟೆ, ಶ್ರೀರಂಗಪಟ್ಟಣ, ಹಲಗೂರು, ಕೆ.ಆರ್. ಪೇಟೆಗಳಲ್ಲಿ ಸೋನೆ ಮಳೆ ಸುರಿಯಿತು.

ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಳೆ ಸುರಿಯಿತು. ನಗರದಲ್ಲಿ ಬೆಳಿಗ್ಗೆಯಿಂದಲೇ ಪ್ರಖರ ಬಿಸಿಲಿನ ವಾತಾವರಣ ಇತ್ತು. ಸಂಜೆ 4 ಗಂಟೆಗೆ ಶುರುವಾದ ಮಳೆ ಅರ್ಧ ಗಂಟೆಗೂ ಹೆಚ್ಚು ಹೊತ್ತು ರಭಸವಾಗಿ ಸುರಿಯಿತು.ನ್ಯಾಮತಿ, ಚನ್ನಗಿರಿ, ಮಲೇಬೆನ್ನೂರು ಭಾಗದಲ್ಲೂ ಮಳೆ ಸುರಿಯಿತು. ಮಳೆಯಿಂದಾಗಿ ಜಿಲ್ಲೆಯ ಕೆಲವೆಡೆ ಭತ್ತದ ಕಟಾವಿಗೆ ತೊಂದರೆಯಾಗಿದೆ.ಶಿವಮೊಗ್ಗ ನಗರ ಹಾಗೂ ಭದ್ರಾವತಿ, ಚಿತ್ರದುರ್ಗದ ಧರ್ಮಪುರದಲ್ಲಿ ಜೋರು ಮಳೆ ಸುರಿಯಿತು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದ ಮಡಹಳ್ಳಿ ವೃತ್ತದಲ್ಲಿ ಶುಕ್ರವಾರ ಮಳೆ ನೀರು ಆವರಿಸಿತ್ತು.

ಹಲವೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಾದ್ಯಂತ ಮುಂಗಾರು ಪೂರ್ವ ಮಳೆ ಚುರುಕುಗೊಂಡಿದ್ದು, ಭಾರಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂದಿನ ನಾಲ್ಕು ದಿನ ಎಲ್ಲಾ ಜಿಲ್ಲೆಗಳಿಗೂ ಯೆಲ್ಲೊ ಅಲರ್ಟ್ ಘೋಷಿಸಿದೆ.

ಬೀದರ್, ಕಲಬುರ್ಗಿ, ರಾಯಚೂರು, ವಿಜಯಪುರ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ ಮತ್ತು ಕೊಪ್ಪಳ ಜಿಲ್ಲೆಯ ಹಲವೆಡೆ ಶನಿವಾರ, ಬಿರುಗಾಳಿ, ಗುಡುಗು ಸಹಿತ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಕೌಶಲಾಭಿವೃದ್ಧಿ ಇಲಾಖೆ: ಮಾರ್ಗಸೂಚಿ ರೂಪಿಸಲು ಸಚಿವರ ಸೂಚನೆ

'ಶಿಫಾರಸು ಆಧಾರಿತ ವರ್ಗಾವಣೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೌಶಲಾಭಿವೃದ್ಧಿ ಇಲಾಖೆಯಲ್ಲಿ ಶಿಫಾರಸು ಆಧಾರಿತ ವರ್ಗಾವಣೆಯನ್ನು ನಿಲ್ಲಿಸಲಾಗುವುದು. ಕೌನ್ಸೆಲಿಂಗ್ ಆಧಾರದಲ್ಲಿ ಮಾತ್ರ ವರ್ಗಾವಣೆ ಮಾಡಲಾಗುವುದು' ಎಂದು ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ಅವರು ಹೇಳಿದರು.

ವಿಕಾಸಸೌಧದಲ್ಲಿ ಶುಕ್ರವಾರ ನಡೆದ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಪ್ರಭಾವ ಮತ್ತು ಶಿಫಾರಸು ಬಳಸಿ ಮಾಡಿಸಿಕೊಳ್ಳಲಾದ ವರ್ಗಾವಣೆಗಳಿಂದ ಇಲಾಖೆಯ ಕೆಲಸಗಳು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಈ ಪದ್ಧತಿಗೆ ಕಡಿವಾಣ ಹಾಕಬೇಕಿದೆ. ಸಿಬ್ಬಂದಿಗೆ ಆದ್ಯತೆಯ ಸ್ಥಳಗಳಲ್ಲಿ ಹುದ್ದೆ ಪಡೆಯಲು ಅನುವು ಮಾಡಿಕೊಡುವುದರಿಂದ ಕೆಲಸ ಪರಿಣಾಮಕಾರಿಯಾಗಲಿದೆ' ಎಂದರು.

ಕೌಶಲಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಜತೆಗೆ ಸಚಿವ ಶರಣಪ್ರಕಾಶ ಪಾಟೀಲ ಶುಕ್ರವಾರ ಸಭೆ ನಡೆಸಿದರು

'ಜೂನ್ 16ರ ಒಳಗೆ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ. ಕೌನ್ಸೆಲಿಂಗ್ ಆಧಾರಿತ ವರ್ಗಾವಣೆಗೆ ಅಗತ್ಯ ಮಾರ್ಗಸೂಚಿಗಳನ್ನು ತಕ್ಷಣವೇ ರೂಪಿಸಿ' ಎಂದು ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್ ಅವರಿಗೆ ಸೂಚಿಸಿದರು.

'ಪದವಿಗಳನ್ನು ಪಡೆದಿದ್ದರೂ ಹಲವರಿಗೆ ಕೌಶಲ್ಯದ ಕೊರತೆಯ ಕಾರಣದಿಂದ ಉದ್ಯೋಗ ಸಿಗುತ್ತಿಲ್ಲ. ಉದ್ಯೋಗ ಮೇಳಗಳಲ್ಲಿ ಆದ ನೇಮಕಾತಿಗಳ ದತ್ತಾಂಶ ಮತ್ತು ವರದಿಗಳು ಇದನ್ನೇ ಹೇಳುತ್ತವೆ. ಕೌಶಲಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರದೇ ಇರುವುದೇ ಇದು ಕಾರಣ. ಪದವಿ ಮತ್ತು ಕೌಶಲದ ನಡುವಣ ಈ ಅಂತರವನ್ನು ಇಲ್ಲವಾಗಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರದೇ ಇರುವ ಅಧಿಕಾರಿಗಳನ್ನು ಸಚಿವರು ಸಭೆಯಲ್ಲಿ ತರಾಟೆಗೆ ತೆಗೆದುಕೊಂಡರು. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳಿಗೆ ನೋಟಿಸ್ ನೀಡಿ, ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸಿದರು.

ಪ್ರಗತಿ ಪರಿಶೀಲನೆ: ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನೆಗೆ ಪ್ರತ್ಯೇಕ ಸಭೆ ನಡೆಸಿದ ಸಚಿವ ಶರಣಪ್ರಕಾಶ ಪಾಟೀಲ, 'ವೈದ್ಯಕೀಯ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು ಮತ್ತು ಹಿರಿಯ ನಿವಾಸಿ ಹುದ್ದೆಗಳ ಭರ್ತಿಯನ್ನು ತ್ವರಿತವಾಗಿ ನಡೆಸಬೇಕು' ಎಂದು ವೈದ್ಯಕೀಯ ಕಾಲೇಜುಗಳ ನಿರ್ದೇಶಕರಿಗೆ ಸೂಚಿಸಿದರು.

ಶನಿವಾರ, ಮೇ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 136 | ಪುಟ 24
• www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜ್ಞಾನಪೀಠ ಪ್ರದಾನ

ನವದೆಹಲಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸ್ಕೃತ ವಿದ್ವಾಂಸ ಜಗದ್ಗುರು ರಾಮಭದ್ರಾಚಾರ್ಯ ಅವರಿಗೆ ಜ್ಞಾನಪೀಠ ಪ್ರಶಸ್ತಿ ಪ್ರದಾನ ಮಾಡಿದರು

ಚಿದಂಬರಂ ಹೇಳಿಕೆ ಉಲ್ಲೇಖಿಸಿ ಕುಟುಕಿದ ಬಿಜೆಪಿ

‘ಕಾಂಗ್ರೆಸ್‌ಗೆ ಭವಿಷ್ಯ ಇಲ್ಲ’ 7

ಸೆನ್ಸೆಕ್ಸ್	ನಿಫ್ಟಿ	₹/$
82,33	25,019	85.57

ಮದ್ಯ ತಯಾರಿಕೆ, ಮಾರಾಟ ಸನ್ನದು ಶುಲ್ಕ ಶೇ 100ರಷ್ಟು ಹೆಚ್ಚಳಕ್ಕೆ ಕರಡು ಅಧಿಸೂಚನೆ

ಅಬಕಾರಿ: ಶುಲ್ಕ ಏರಿಕೆ ಬರೋಬ್ಬರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ತಯಾರಿಕೆ, ಬಾಟ್ಲಿಂಗ್ ಮತ್ತು ಮಾರಾಟ ಮಳಿಗೆಗಳು ಸೇರಿ ಎಲ್ಲ ಸ್ವರೂಪದ ಶುಲ್ಕಗಳನ್ನು ಶೇ 100ರಷ್ಟು ಏರಿಕೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಸಂಬಂಧ ಅಬಕಾರಿ ಕಾನೂನುಗಳಿಗೆ ತಿದ್ದುಪಡಿ ಮಾಡಿದ್ದು, ಕರಡು ನಿಯಮಗಳ ಅಧಿಸೂಚನೆಯನ್ನು ಗುರುವಾರ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಆಕ್ಷೇಪಣೆಗೆ ಏಳು ದಿನಗಳ ಅವಕಾಶ ನೀಡಿದೆ. ಜುಲೈ 1ರಿಂದ ಪರಿಷ್ಕೃತ ಶುಲ್ಕ ಜಾರಿಗೆ ಬರಲಿದೆ.

ಬ್ರುವರಿ ಸನ್ನದು ಶುಲ್ಕ ₹27 ಲಕ್ಷದಿಂದ ₹54 ಲಕ್ಷಕ್ಕೆ, ಡಿಸ್ಟಿಲರಿ ಮತ್ತು ವೇರ್‌ಹೌಸ್ ಸನ್ನದು ಶುಲ್ಕವು ₹45 ಲಕ್ಷದಿಂದ ₹90 ಲಕ್ಷಕ್ಕೆ ಏರಿಕೆಯಾಗಲಿದೆ. ಡಿಸ್ಟಿಲರಿ ಮತ್ತು ಬ್ರುವರಿಗಳ ಬಾಟ್ಲಿಂಗ್ ಸನ್ನದು ಶುಲ್ಕವನ್ನು ₹1 ಲಕ್ಷದಿಂದ ₹2 ಲಕ್ಷಕ್ಕೆ, ಬಲ್ಕ್ ಬಿಯರ್ ಮಾರಾಟ ಗುತ್ತಿಗೆ ವಾರ್ಷಿಕ ಶುಲ್ಕವು ₹1 ಲಕ್ಷದಿಂದ ₹2 ಲಕ್ಷಕ್ಕೆ, ಬಾಟಲ್ ಬಿಯರ್ ಚಿಲ್ಲರೆ ಮಾರಾಟ ಹಕ್ಕಿನ ಗುತ್ತಿಗೆ ವಾರ್ಷಿಕ ಶುಲ್ಕವು ₹10,000ಕ್ಕೆ ಹೆಚ್ಚಾಗಲಿದೆ.

ಸಿಎಲ್‌-1, ಸಿಎಲ್‌-2, ಸಿಎಲ್‌-7 ಮತ್ತು ಸಿಎಲ್‌-9 ಸನ್ನದುಗಳನ್ನು ಒಬ್ಬರಿಂದ ಮತ್ತೊಬ್ಬರ ಹೆಸರಿಗೆ ವರ್ಗಾವಣೆ ಮಾಡಲು ಈಗ ವಾರ್ಷಿಕ ಸನ್ನದು ಶುಲ್ಕದ, ಎರಡು ಪಟ್ಟು ಶುಲ್ಕ ವಿಧಿಸಲಾಗುತ್ತಿದೆ. ಅದನ್ನು ಮೂರು ಪಟ್ಟಿಗೆ ಹೆಚ್ಚಿಸಲು ಕರಡು ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿದೆ. ಜತೆಗೆ ಯಾವುದೇ ಮಳಿಗೆಯ ಸ್ಥಳ ಬದಲಾವಣೆಗೆ ಈಗ ಸನ್ನದು ಶುಲ್ಕದ, ಶೇ 50ರಷ್ಟು ಶುಲ್ಕ ವಿಧಿಸಲಾಗುತ್ತಿದೆ. ಅದನ್ನು ಶೇ 100ರಷ್ಟಕ್ಕೆ ಹೆಚ್ಚಿಸಲಾಗುತ್ತಿದೆ.

6ನೇ ಪುಟ ನೋಡಿ



‘ನಾವೆಲ್ಲ ಸಾಯಬೇಕು’

‘ಶುಲ್ಕವನ್ನು ಒಂದುಪಟ್ಟು ಏರಿಕೆ ಮಾಡುವ ಸರ್ಕಾರದ ಈ ನಡೆಯಿಂದ ನೂರಾರು ಮದ್ಯ ಮಾರಾಟಗಾರರು ಸಾಯುವ ಸ್ಥಿತಿ ಎದುರಾಗಲಿದೆ’ ಎಂದು ಮದ್ಯ ಮಾರಾಟಗಾರರ ಸಂಘದ ಪದಾಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಿಯರ್ ಮೇಲಿನ ಸುಂಕವನ್ನು ಪದೇ–ಪದೇ ಏರಿಕೆ ಮಾಡಿದ ಕಾರಣಕ್ಕೆ, ಅದರ ಮಾರಾಟ ಕುಸಿದಿತ್ತು. ಈಗ ಸನ್ನದು ಶುಲ್ಕ ಏರಿಕೆಯೂ ಪ್ರತಿಕೂಲ ಪರಿಣಾಮ ಬೀರಲಿದೆ. ಮದ್ಯ ಮಾರಾಟಗಾರರ ಸಂಘಗಳ ಒಕ್ಕೂಟದಿಂದ ಶುಕ್ರವಾರ ಸಭೆ ನಡೆಸಲಾಯಿತು. ಎಲ್ಲ ಸಂಘಗಳು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಸಲ್ಲಿಸಬೇಕು ಮತ್ತು ಅದನ್ನು ಸೋಮವಾರ ಸರ್ಕಾರದ ಗಮನಕ್ಕೆ ತರುತ್ತೇವೆ’ ಎಂದರು.

ರಾಜನಾಥ ಸಿಂಗ್ ಅವರು ಭುಜ್‌ನಲ್ಲಿ ಶುಕ್ರವಾರ ಸಶಸ್ತ್ರ ಪಡೆಗಳ ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಐಎಂಎಫ್‌ಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಒತ್ತಾಯ

ಪಾಕ್‌ಗೆ ನೆರವು: ಮರುಪರಿಶೀಲಿಸಿ

ಭುಜ್ (ಪಿಟಿಐ): ಪಾಕಿಸ್ತಾನಕ್ಕೆ 1 ಬಿಲಿಯನ್ ಡಾಲರ್ (ಸುಮಾರು ₹8,550 ಕೋಟಿ) ಹಣಕಾಸಿನ ನೆರವು ನೀಡುವ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕು ಎಂದು ಭಾರತವು ಶುಕ್ರವಾರ ಅಂತರರಾಷ್ಟ್ರೀಯ ಹಣಕಾಸು ನಿಧಿಗೆ (ಐಎಂಎಫ್) ಒತ್ತಾಯ ಮಾಡಿದೆ.

‘ಪಾಕಿಸ್ತಾನಕ್ಕೆ ಹಣಕಾಸಿನ ನೆರವು ನೀಡುವ ನಿರ್ಧಾರವನ್ನು ಐಎಂಎಫ್ ಮರುಪರಿಶೀಲಿಸಬೇಕು ಮತ್ತು ಭವಿಷ್ಯದಲ್ಲಿ ಆ ದೇಶಕ್ಕೆ ಯಾವುದೇ ರೀತಿಯ ಸಹಾಯ ನೀಡಬಾರದು ಎಂದು ಭಾರತವು ಬಯಸುತ್ತದೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಇಲ್ಲಿ ಸೇನಾ ಸಿಬ್ಬಂದಿಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ.

ಭಾರತವು ಐಎಂಎಫ್‌ಗೆ ನೀಡುವ ಹಣ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪಾಕಿಸ್ತಾನ ಅಥವಾ ಇತರ ಯಾವುದೇ ದೇಶದಲ್ಲಿ ಭಯೋತ್ಪಾದನೆಗೆ ಬಳಕೆಯಾಗುವುದನ್ನು ಬಯಸುವುದಿಲ್ಲ ಎಂದು ಹೇಳಿದರು.

7ನೇ ಪುಟ ನೋಡಿ

‘ಉಗ್ರರಿಗೆ ಪಾಕ್ ಸರ್ಕಾರದಿಂದ ಹಣ’

ಭಾರತದ ದಾಳಿಯಲ್ಲಿ ನಾಶವಾಗಿರುವ ಭಯೋತ್ಪಾದನಾ ಮೂಲಸೌಕರ್ಯಗಳನ್ನು ಪಾಕಿಸ್ತಾನ ಮರು ನಿರ್ಮಾಣ ಮಾಡುವ ಕೆಲಸ ಆರಂಭಿಸಿದೆ ಎಂದು ಅವರು ಟೀಕಿಸಿದರು.

ಜೈಷ್ ಎ ಮೊಹಮ್ಮದ್ (ಜೆಇಎಂ) ಮುಖ್ಯಸ್ಥ ಮತ್ತು ಜಾಗತಿಕ ಭಯೋತ್ಪಾದಕ ಮಸೂದ್ ಅಜರ್‌ಗೆ ನೆರವಾಗಲು ಪಾಕ್ ಸರ್ಕಾರ ಅಲ್ಲಿನ ನಾಗರಿಕರಿಂದ ತೆರಿಗೆ ರೂಪದಲ್ಲಿ ಹಣ ಸಂಗ್ರಹಿಸಿದೆ. ₹14 ಕೋಟಿ ಸಂಗ್ರಹಿಸಿ ಅಜರ್‌ಗೆ ನೀಡಲು ಮುಂದಾಗಿದೆ. ಮುರೀದ್ಕೆ ಮತ್ತು ಬಹಾವಲ್ಪುರದಲ್ಲಿರುವ ಲಷ್ಕರ್ ಎ ತಯಬಾ ಹಾಗೂ ಜೆಇಎಂನ ಭಯೋತ್ಪಾದಕ ಮೂಲಸೌಕರ್ಯಗಳನ್ನು ಪುನರ್ ನಿರ್ಮಿಸಲು ಸರ್ಕಾರ ಆರ್ಥಿಕ ನೆರವು ಘೋಷಿಸಿದೆ ಎಂದು ದೂರಿದರು.

7ನೇ ಪುಟ ನೋಡಿ

‘ಆಪರೇಷನ್ ಸಿಂಧೂರ ಇನ್ನೂ ಮುಗಿದಿಲ್ಲ’

‘ಆಪರೇಷನ್ ಸಿಂಧೂರ ಇನ್ನೂ ಮುಗಿದಿಲ್ಲ. ಇದುವರೆಗೆ ನಡೆದಿರುವುದು ಟ್ರೇಲರ್ ಮಾತ್ರ. ಅಗತ್ಯಬಿದ್ದರೆ ಪೂರ್ಣ ಸಿನಿಮಾವನ್ನು ಜಗತ್ತಿಗೆ ತೋರಿಸುತ್ತೇವೆ. ಭಯೋತ್ಪಾದಕರ ವಿರುದ್ಧ ಹೋರಾಟ ಮತ್ತು ಭಯೋತ್ಪಾದನೆಯ ನಿರ್ಮೂಲನೆಯು ನವ ಭಾರತದ ಹೊಸ ಸಂಕಲ್ಪವಾಗಿದೆ’ ಎಂದು ರಾಜನಾಥ ಸಿಂಗ್ ಹೇಳಿದರು.

‘ಪಾಕಿಸ್ತಾನ ತನ್ನ ನಡವಳಿಕೆಯನ್ನು ಸುಧಾರಿಸಿದರೆ, ಆ ದೇಶಕ್ಕೆ ಒಳ್ಳೆಯದು. ನಡವಳಿಕೆ ಸರಿಪಡಿಸದಿದ್ದರೆ ಕಠಿಣ ಶಿಕ್ಷೆಗೆ ಗುರಿಪಡಿಸುವೆವು’ ಎಂದು ಎಚ್ಚರಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಚಂದಿರನ ಅಂಗಳದ ಅಧ್ಯಯನಕ್ಕೆ ಮಾನವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನ ಅಂಗಳಕ್ಕೆ ಗಗನ ಯಾತ್ರಿಗಳನ್ನು ಕಳುಹಿಸಿ ವೈಜ್ಞಾನಿಕ ಅಧ್ಯಯನ ನಡೆಸುವ ಉದ್ದೇಶದ ಭಾರತ– ಜಪಾನ್ ಜಂಟಿ ಸಹಭಾಗಿತ್ವದ ‘ಚಂದ್ರಯಾನ–5’ರ ಕುರಿತು ಉಭಯ ದೇಶಗಳ ವಿಜ್ಞಾನಿಗಳ ಉನ್ನತಮಟ್ಟದ ಮೂರನೇ ತಾಂತ್ರಿಕ ಸಭೆ ಬೆಂಗಳೂರಿನಲ್ಲಿ ನಡೆಯಿತು.

ಈ ಯಾನಕ್ಕೆ ಚಂದ್ರಯಾನ–5/ಲುಪೆಕ್ಸ್ ಮಿಷನ್ ಎಂಬ ಹೆಸರನ್ನು ಇಡಲಾಗಿದೆ. 2040ರಲ್ಲಿ ಬಾಹ್ಯಾಕಾಶ ನೌಕೆಯ ಉಡಾವಣೆ ನಡೆಯಲಿದೆ.

ತಾಂತ್ರಿಕ ಸಭೆಯಲ್ಲಿ ಇಸ್ರೊ ಮತ್ತು ಜಪಾನಿನ ಜಾಕ್ಸಾ ಹಾಗೂ ಮಿತ್ಸುಬಿಷಿ ಹೆವಿ ಇಂಡಸ್ಟ್ರೀಸ್‌ನ (ಎಂಎಚ್‌ಐ) ಹಿರಿಯ ಅಧಿಕಾರಿಗಳು ಚಂದ್ರನ ಮೇಲೆ ಹೊತ್ತೊಯ್ಯುವ ಉಪಕರಣಗಳು ಮತ್ತು ಅದಕ್ಕೆ ಅಗತ್ಯವಿರುವ ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆ ಕುರಿತು ತಾಂತ್ರಿಕ ವಿಚಾರಗಳನ್ನು ವಿವರವಾಗಿ ಚರ್ಚಿಸಿದರು ಎಂದು ಇಸ್ರೊ ತಿಳಿಸಿದೆ.

ಚಂದ್ರಯಾನ–4ಕ್ಕೆ ಭಾರತ ಈಗಾಗಲೇ ಸಿದ್ಧತೆ ನಡೆಸಿದ್ದು, ಆ ಯಾನದ ಮೂಲಕ ಚಂದ್ರನ ಅಂಗಳದ ಕಲ್ಲು, ಮಣ್ಣು ಮತ್ತು ಖನಿಜಗಳ ಮಾದರಿಗಳನ್ನು ಅಧ್ಯಯನಕ್ಕಾಗಿ ಹೊತ್ತು ತರಲಿದೆ. ಚಂದ್ರಯಾನ–5ರಲ್ಲಿ ಚಂದ್ರನ ದಕ್ಷಿಣ ಧ್ರುವದಲ್ಲಿ ಕಾಯಂ ನೆರಳಿನ ಭಾಗದಲ್ಲಿರುವ ನೀರು ಸೇರಿದಂತೆ ಆವಿ ಸ್ಥಿತಿಯಲ್ಲಿರುವ ವಸ್ತುಗಳ ಅಧ್ಯಯನ ನಡೆಸಲಾಗುವುದು. ಇದಕ್ಕೆ ಅಗತ್ಯವಿರುವ ಆಧುನಿಕ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಕುರಿತು ವಿಚಾರ ವಿನಿಮಯ ನಡೆಯಿತು.

ಇಡೀ ಯೋಜನೆಗೆ ಅಗತ್ಯವಿರುವ ತಂತ್ರಜ್ಞಾನವನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದರ ಜತೆಗೆ ಬಾಹ್ಯಾಕಾಶ ನೌಕೆಯನ್ನು ನಿಖರವಾಗಿ ಯಾವ ಜಾಗದಲ್ಲಿ ಇಳಿಸಬೇಕು ಎಂಬ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು ಎಂದು ಇಸ್ರೊ ತಿಳಿಸಿದೆ.

6ನೇ ಪುಟ ನೋಡಿ

ಭವಿಷ್ಯದ 2 ಪ್ರಮುಖ ಯೋಜನೆಗಳು

- 2035ರಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಭಾರತವು ಪೂರ್ಣ ಪ್ರಮಾಣದ ನಿಲ್ದಾಣವನ್ನು ಸ್ಥಾಪಿಸಲಿದೆ
- 2047ರಲ್ಲಿ ಭಾರತ ಸ್ವಾತಂತ್ರ್ಯ ಪಡೆದು 100 ವರ್ಷ ತುಂಬುವ ಕಾರಣ ಚಂದ್ರನ ಮೇಲೆ ನೆಲೆಯೊಂದನ್ನು ಸ್ಥಾಪಿಸಲು ಇಸ್ರೊ ಯೋಜನೆ ರೂಪಿಸಿದೆ

ವಜ್ರಗಳ ಹೊಳಪಿನಿಂದ ಹಿಡಿದು ಚಿನ್ನ, ಜೆಮ್‌ಸ್ಟೋನ್ ಮತ್ತು ಅದಕ್ಕೂ ಮೀರಿದ ವೈಭವದವರೆಗೆ. ಬ್ರೈಡ್ಸ್ ಆಫ್ ಇಂಡಿಯಾ ಭಾರತದ ವೈವಿಧ್ಯಮಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಉತ್ತಮವಾಗಿ ರಚಿಸಲಾದ ಅತ್ಯದ್ಭುತ ಮತ್ತು ಆಕರ್ಷಕ ಸಂಗ್ರಹಗಳನ್ನು ಒಳಗೊಂಡಿದೆ.

ಮುಂಗಡವಾಗಿ 10% ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ. ಚಾಲ್ತಿಯಲ್ಲಿರುವ ಬೆಲೆ ಅಥವಾ ಕಾಯ್ದಿರಿಸಿದ ಬೆಲೆ ಇದರಲ್ಲಿ ಕಡಿಮೆ ಇರುವ ಬೆಲೆಯಲ್ಲಿ ಆಭರಣಗಳನ್ನು ಖರೀದಿಸಿ*

ಕರ್ನಾಟಕದಲ್ಲಿರುವ ಶೋರೂಂಗಳು: ಎಂ.ಜಿ ರೋಡ್ | ಡಿಕೆನ್‌ಸನ್ ರಸ್ತೆ | ಜಯನಗರ | ರಾಜಾಜಿನಗರ | ಕೋರಮಂಗಲ | ಫಿನಿಕ್ಸ್ ಮಾರ್ಕೆಟ್‌ಸಿಟಿ ಮಾರತ್ತಹಳ್ಳಿ | ಬನ್ನೇರುಘಟ್ಟ ರಸ್ತೆ | ಕಮ್ಮನಹಳ್ಳಿ | ಮಲ್ಲೇಶ್ವರಂ | ಹೆಚ್‌ಎಸ್‌ಆರ್ ಲೇಔಟ್ | ಬನಶಂಕರಿ | ಯಲಹಂಕ | ಫೋರಮ್ ಸೌತ್ ಬೆಂಗಳೂರು | ಆರ್‌ಆರ್ ನಗರ | ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ | ವೈಟ್‌ಫೀಲ್ಡ್ | ಸರ್ಜಾಪುರ ರಸ್ತೆ | ಹೆಸರಘಟ್ಟ ಮುಖ್ಯ ರಸ್ತೆ | ಹೆಣ್ಣೂರು ಮುಖ್ಯ ರಸ್ತೆ | ನಾಗರಭಾವಿ | ಮೈಸೂರು | ಮಂಡ್ಯ | ಹಾಸನ | ಚಿಕ್ಕಮಗಳೂರು | ಮಂಗಳೂರು ಉಡುಪಿ | ಬೆಳಗಾವಿ | ಹುಬ್ಬಳ್ಳಿ | ಧಾರವಾಡ | ವಿಜಯಪುರ | ಕಲಬುರಗಿ | ಬೀದರ್ | ಬಳ್ಳಾರಿ | ದಾವಣಗೆರೆ | ಶಿವಮೊಗ್ಗ | ತುಮಕೂರು | ರಾಯಚೂರು | ಕೋಲಾರ | ಹೊಸಪೇಟೆ ಚಿತ್ರದುರ್ಗ | ಬಾಗಲಕೋಟೆ

09562 916 916 | BUY ONLINE AT: malabargoldanddiamonds.com | OVER 400 SHOWROOMS ACROSS 13 COUNTRIES | Follow us on @malabargoldanddiamonds

collegedunia.com ಪ್ರಸ್ತುತಪಡಿಸುತ್ತದೆ

ಭಾರತದ ಅತಿ ದೊಡ್ಡ
ಶಿಕ್ಷಣ ಮೇಳ

17ನೇ ಮತ್ತು 18ನೇ ಮೇ 2025 | ಗಾಯತ್ರಿ ವಿಹಾರ್, ಅರಮನೆ ಮೈದಾನ, ಬೆಂಗಳೂರು

ವಿಶೇಷ ಆಕರ್ಷಣೆ

- 100 ವಿಶ್ವವಿದ್ಯಾಲಯಗಳನ್ನು ಭೇಟಿ ಮಾಡಿ
- ಮುಖಾಮುಖಿ ಕೌನ್ಸೆಲಿಂಗ್
- ಉಚಿತ ಸೈಕೋಮೆಟ್ರಿಕ್ ಪರೀಕ್ಷೆ
- ಸ್ಥಳದಲ್ಲೇ ಕಾಲೇಜು ದಾಖಲಾತಿ
- 100 ಕೋಟಿ ಮೌಲ್ಯದ ವಿದ್ಯಾರ್ಥಿವೇತನವನ್ನು ಪಡೆಯಿರಿ.

MEGA CAREER CARNIVAL 2025

ಕಾಲೇಜ್‌ದುನಿಯಾ ಕಾರ್ನಿವಲ್‌ನಲ್ಲಿ
ನಿಮ್ಮ ಎಲ್ಲಾ ಉತ್ತರಗಳನ್ನು ಪಡೆಯಿರಿ

17ನೇ ಮತ್ತು 18ನೇ ಮೇ 2025
ಗಾಯತ್ರಿ ವಿಹಾರ್, ಅರಮನೆ ಮೈದಾನ, ಬೆಂಗಳೂರು

ಪಾಲುದಾರರು

AMITY UNIVERSITY BENGALURU | SAPTHAGIRI NPS UNIVERSITY | JGi JAIN | RV UNIVERSITY | S.E.A GROUP OF INSTITUTIONS | WOXSEN UNIVERSITY | EMVERSITY | HKBK GROUP OF INSTITUTIONS www.hkbk.edu.in

ಸ್ಕ್ಯಾನ್ ಮಾಡಿ ಮತ್ತು ನೋಂದಾಯಿಸಿ

ನೋಂದಣಿಗೆ ಭೇಟಿ ನೀಡಿ

www.Collegeduniacarnival.com

ನಿಮ್ಮ ಮಾಹಿತಿಯನ್ನು ಭರ್ತಿ ಮಾಡಿ ಮತ್ತು ಉಚಿತವಾಗಿ ನೋಂದಾಯಿಸಿ

ಪ್ರಶ್ನೆಗಳಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ: career.carnival@collegedunia.com

ಟಿ ಮತ್ತು ಸಿ ಅನ್ವಯಿಸಿ:
ಯಾವುದೇ ಸಮಯದಲ್ಲಿ ಪೂರ್ವ ಸೂಚನೆಯಿಲ್ಲದೆ ಈವೆಂಟ್ ಅನ್ನು ಮಾರ್ಪಡಿಸಲು, ರದ್ದುಗೊಳಿಸಲು ಅಥವಾ ಮುಂದೂಡಲು ಸಂಘಟಕರಿಗೆ ಹಕ್ಕಿದೆ. ಕಾರ್ಯಕ್ರಮದ ಸಮಯದಲ್ಲಿ ಅಭ್ಯರ್ಥಿಗಳ ವೈಯಕ್ತಿಕ ಆಸ್ತಿಗೆ ಯಾವುದೇ ನಷ್ಟ ಅಥವಾ ಹಾನಿಗೆ ಸಂಘಟಕರು ಜವಾಬ್ದಾರರಾಗಿರುವುದಿಲ್ಲ. ಈವೆಂಟ್‌ನ ಛಾಯಾಚಿತ್ರಗಳು ಮತ್ತು ವೀಡಿಯೊಗಳನ್ನು ತೆಗೆದುಕೊಳ್ಳುವ ಮತ್ತು ಪ್ರಚಾರದ ಉದ್ದೇಶಗಳಿಗಾಗಿ ಅವುಗಳನ್ನು ಬಳಸುವ ಹಕ್ಕನ್ನು ಸಂಘಟಕರು ಹೊಂದಿದ್ದಾರೆ. ಈವೆಂಟ್ ಭಾರತದ ಕಾನೂನುಗಳು ಮತ್ತು ಕರ್ನಾಟಕದ ನ್ಯಾಯಾಲಯಗಳ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈವೆಂಟ್‌ಗೆ ನೋಂದಾಯಿಸುವ ಮೂಲಕ, ಅಭ್ಯರ್ಥಿಗಳು ಮೇಲೆ ತಿಳಿಸಲಾದ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧರಾಗಲು ಒಪ್ಪುತ್ತಾರೆ.

ಅತ್ತಿಬೆಲೆ–ವಿಮಾನ ನಿಲ್ದಾಣಕ್ಕೆ 6 ಬಸ್

ಬೆಂಗಳೂರು: ಬಿಎಂಟಿಸಿ ಅತ್ತಿಬೆಲೆಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಸ ಮಾರ್ಗದಲ್ಲಿ ಮೇ 19ರಿಂದ 6 ಹವಾನಿಯಂತ್ರಿತ ಬಸ್‌ಗಳ ಸಂಚಾರ ಪ್ರಾರಂಭವಾಗಲಿದೆ.

ಬಿದರಗುಪ್ಪೆ, ಮೇಡಹಳ್ಳಿ, ಸರ್ಜಾಪುರ, ದೊಮ್ಮಸಂದ್ರ, ಕೊಡತಿ ಗೇಟ್, ಕೈಕೊಂಡರಹಳ್ಳಿ, ಬೆಳ್ಳಂದೂರು, ಕೆ.ಆರ್. ಪುರ ರೈಲ್ವೆ ನಿಲ್ದಾಣ, ಬಾಬುಸಾಪಾಳ್ಯ, ವೀರಣ್ಣನಪಾಳ್ಯ, ಹೆಬ್ಬಾಳ, ಕೋಗಿಲು ಕ್ರಾಸ್ ಮಾರ್ಗವಾಗಿ ಬಸ್ ಸಂಚರಿಸಲಿದೆ. ಅತ್ತಿಬೆಲೆಯಿಂದ ಬೆಳಿಗ್ಗೆ 5.30ಕ್ಕೆ ಮೊದಲ ಟ್ರಿಪ್, ರಾತ್ರಿ 10.20ಕ್ಕೆ ಕೊನೇ ಟ್ರಿಪ್ ಇರಲಿದೆ. ಕೆಐಎನಿಂದ ರಾತ್ರಿ 2ಕ್ಕೆ ಮೊದಲ ಟ್ರಿಪ್, ಸಂಜೆ 7ಕ್ಕೆ ಕೊನೆ ಟ್ರಿಪ್ ಇರಲಿದೆ.

‘ಬೆಂಗಳೂರು ಹಬ್ಬ’ಕ್ಕೆ ಇಂದು ವಿಧ್ಯುಕ್ತ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದ್ಯಾನಗಳಲ್ಲಿ ಹಮ್ಮಿಕೊಂಡಿರುವ ‘ಬೆಂಗಳೂರು ಹಬ್ಬ’ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಸವನಗುಡಿ ವ್ಯಾಪ್ತಿಯ ಬ್ಯೂಗಲ್ ರಾಕ್ ಉದ್ಯಾನದಲ್ಲಿ ಶನಿವಾರ ಸಂಜೆ 5ಕ್ಕೆ ವಿಧ್ಯುಕ್ತವಾಗಿ ಚಾಲನೆ ದೊರೆಯಲಿದೆ.

ಸ್ಥಳೀಯ ಶಾಸಕರು, ಪಾಲಿಕೆಯ ಆಡಳಿತಗಾರರು, ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು, ವಲಯ ಆಯುಕ್ತರು ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೂ ಮುನ್ನ ರಾಮಕೃಷ್ಣ ಮಠ ವೃತ್ತದಿಂದ ಬ್ಯೂಗಲ್ ರಾಕ್ ಉದ್ಯಾನದವರೆಗೆ ‘ಬೆಂಗಳೂರು ಹಬ್ಬ’ ಜಾಗೃತಿ ಜಾಥಾ ನಡೆಯಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಉದ್ಯಾನಗಳಲ್ಲಿ ವಾಯುವಿಹಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಪರಿಸರದ ಸಂರಕ್ಷಣೆ ಕುರಿತು ಅರಿವು ಮೂಡಿಸಲು, ಸಾಂಸ್ಕೃತಿಕ ಮತ್ತು ಇನ್ನಿತರ ಕಲಾ ಚಟುವಟಿಕೆಗಳನ್ನು ನಡೆಸಲು ‘ಬೆಂಗಳೂರು ಹಬ್ಬ’ ಆಯೋಜನೆ ಮಾಡಲಾಗಿದೆ. 1,287 ಉದ್ಯಾನಗಳನ್ನು ಅಭಿವೃದ್ಧಿಪಡಿಸಿ ಪಾಲಿಕೆಯು ನಿರ್ವಹಿಸುತ್ತಿದೆ. ಉದ್ಯಾನಗಳಿಗೆ ಬರುವವರಿಗೆ ಅನುಕೂಲವಾಗಲು ಉದ್ಯಾನಗಳಲ್ಲೇ ಬೆಂಗಳೂರು ಹಬ್ಬ ನಡೆಸಲಾಗುತ್ತಿದೆ. ಪಾಲಿಕೆ ವ್ಯಾಪ್ತಿಯ 27 ವಿಧಾನಸಭಾ ಕ್ಷೇತ್ರಗಳಲ್ಲಿ 2026ರ ಮಾರ್ಚ್‌ವರೆಗೆ ಬೆಂಗಳೂರು ಹಬ್ಬ ನಡೆಯಲಿದೆ.

ಐಪಿಎಲ್: ವಾಹನಗಳ ನಿಲುಗಡೆ ನಿಷೇಧ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ (ಮೇ 17) ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಕೋಲ್ಕತ್ತ ನೈಟ್ ರೈಡರ್ಸ್(ಕೆಕೆಆರ್) ತಂಡಗಳ ನಡುವೆ ಐಪಿಎಲ್ ಪಂದ್ಯ ನಡೆಯಲಿದೆ. ಮಧ್ಯಾಹ್ನ 3ರಿಂದ ರಾತ್ರಿ 11ರವರೆಗೆ ಕ್ರೀಡಾಂಗಣದ ಸುತ್ತಮುತ್ತ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ.

ನಿರ್ಬಂಧಿತ ರಸ್ತೆಗಳು: ಕ್ವೀನ್ಸ್ ರಸ್ತೆ: ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ರಸ್ತೆಯ ಎರಡೂ ಕಡೆ ಮಹಾತ್ಮ ಗಾಂಧಿ ರಸ್ತೆ: ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ರಸ್ತೆಯ ಎರಡೂ ಬದಿ ಲಿಂಕ್ ರಸ್ತೆ: ಮಹಾತ್ಮ ಗಾಂಧಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ ರಾಜಭವನ ರಸ್ತೆ: ಟಿ.ಚೌಡಯ್ಯ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆ ಸೇರಿ ಆಸುಪಾಸಿನ ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆಗೆ ನಿರ್ಬಂಧವಿದೆ.

ವಾಹನ ನಿಲುಗಡೆ ಸ್ಥಳಗಳು: ಪಂದ್ಯ ವೀಕ್ಷಿಸಲು ಬರುವ ಸಾರ್ವಜನಿಕರು ಕೆಳಗಿನ ಸ್ಥಳಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡಬಹುದಾಗಿದೆ

- ಸೇಂಟ್ ಜೋಸೆಫ್ಸ್ ಇಂಡಿಯನ್ ಪ್ರೌಢಶಾಲೆ ಮೈದಾನ ಮತ್ತು ಯುಬಿ ಸಿಟಿ ಆವರಣ
- ಶಿವಾಜಿನಗರ ಬಸ್ ನಿಲ್ದಾಣದ ಒಂದನೇ ಮಹಡಿ
- ಕೆಎಸ್‌ಸಿಎ ಸದಸ್ಯರ ವಾಹನಗಳನ್ನು ಸೇಂಟ್ ಜೋಸೆಫ್ಸ್ (ಯೂರೋಪಿಯನ್) ಬಾಲಕರ ಶಾಲೆ ಮೈದಾನ (ಮ್ಯೂಸಿಯಂ ರಸ್ತೆ)
- ಕ್ರೀಡಾಂಗಣದ ಸುತ್ತಮುತ್ತ ಸಂಚಾರ ದಟ್ಟಣೆ ತಪ್ಪಿಸಲು ಪ್ರೇಕ್ಷಕರು ಸಾರ್ವಜನಿಕ ಸಾರಿಗೆ (ಬಿಎಂಟಿಸಿ) ಹಾಗೂ ಮೆಟ್ರೊ ಸೇವೆ ಬಳಸಲು ಪೊಲೀಸರು ಕೋರಿದ್ದಾರೆ.

ಕರ್ತವ್ಯಕ್ಕೆ ನಿಯೋಜಿಸಿರುವ ಪೊಲೀಸ್ ಅಧಿಕಾರಿ/ಸಿಬ್ಬಂದಿ ವಾಹನಗಳನ್ನು ಕಬ್ಬನ್ ಪಾರ್ಕ್ ಒಳಭಾಗದ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ.

ಗ್ರಾ.ಪಂ. ಉಪಾಧ್ಯಕ್ಷ

ಯಲಹಂಕ: ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಆವಲಹಳ್ಳಿ ಜಿ.ಸಿ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿ.ಹೇಮಂತ್ ಕುಮಾರ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಿಗದಿ ಆಗಿತ್ತು. 23 ಸದಸ್ಯ ಬಲದ ಪಂಚಾಯಿತಿಯಲ್ಲಿ ಮಂಜುನಾಥ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಮಂಜುನಾಥ್

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ
ಬೆಂಗಳೂರು ವಲಯ ಘಟಕ
ಇ–ಮೇಲ್: blzu-ncb@nic.in

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋದಲ್ಲಿ ಗುತ್ತಿಗೆ ಆಧಾರದ ಮೇರೆಗೆ ಸೀನಿಯರ್ ಪಬ್ಲಿಕ್ ಪ್ರಾಸಿಕ್ಯೂಟರ್/ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕಾತಿ
(@ ಬೆಂಗಳೂರು ವಲಯ)

ಈ ಮೂಲಕ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋದಲ್ಲಿ ಗುತ್ತಿಗೆ ಆಧಾರದ ಮೇರೆಗೆ ಸೀನಿಯರ್ ಪಬ್ಲಿಕ್ ಪ್ರಾಸಿಕ್ಯೂಟರ್ (ಸೀ. ಪಿಪಿ) / ಪಬ್ಲಿಕ್ ಪ್ರಾಸಿಕ್ಯೂಟರ್ (ಪಿಪಿ) ನೇಮಕಾತಿ ಅರ್ಹ ವಕೀಲರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತಾ ಮಾನದಂಡಗಳು ಮತ್ತು ಇನ್ನಿತರ ವಿವರಗಳು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋದ www.narcoticsindia.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಅರ್ಹ ವಕೀಲರು ಈ ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳೊಳಗೆ blzu-ncb@nic.in ಮೂಲಕ ಅಗತ್ಯ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು.

ಸಹಿ/–
ವಲಯ ನಿರ್ದೇಶಕರು
ಎನ್‌ಸಿಬಿ ಬೆಂಗಳೂರು

CBC 19126/11/0008/2526

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ

ಸಂಖ್ಯೆ: ರೇಗೂಮಾ/ರಾಂ/ದಾ/ಎಚ್‌ಡಿಪಿಇ.ಕ್ರೇ.ಖ/118/2025–26 ದಿನಾಂಕ: 15–05–2025

ಟೆಂಡರ್ ಪ್ರಕಟಣೆ ಸಂಖ್ಯೆ: SD/2025-26/IND0092
PURCHASE OF HDPE PLASTIC CRATES FOR GCM RAMANAGARA
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ, ಇಲ್ಲಿಗೆ ಅವಶ್ಯಕವಿರುವ ರೇಷ್ಮೆ ಗೂಡು ತುಂಬುವ **HDPE PLASTIC CRATES** ಗಳನ್ನು ಖರೀದಿಸಲು ಅಂಗೀಕೃತ ಸಂಸ್ಥೆಯಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ. ವೆಬ್‌ಸೈಟ್ ಮುಖಾಂತರ ಟೆಂಡರ್ ಫಾರಂಗಳನ್ನು ದಿನಾಂಕ: 27–05–2025 ರಂದು ಸಂಜೆ 4:00 ಗಂಟೆಯೊಳಗೆ ಪಡೆದು ಸಲ್ಲಿಸಬಹುದಾಗಿದೆ. ವಿವರಗಳನ್ನು ವೆಬ್‌ಸೈಟ್ ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಕಚೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದಾಗಿದೆ.

ಸಹಿ/–
ರೇಷ್ಮೆ ಉಪನಿರ್ದೇಶಕರು,
ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ,
ರಾಮನಗರ

ವಾಸಾಸಂಇ/ರಾಮನಗರ/ಮಣಿಪಾಲ್/85/2025–26

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್ (ಭಾರತ ಸರ್ಕಾರದ ಅಧೀನ ಸಂಸ್ಥೆ)
ಸಿಐಎನ್: U15100MH1950GOI1008187 ವೆಬ್‌ಸೈಟ್: www.irel.co.in
ಐಎಸ್‌ಒ 9001:2015, ಐಎಸ್‌ಒ 140001:2015 & ಐಎಸ್‌ಒ 45001:2018 ಕಂಪನಿ
ಉಲ್ಲೇಖ: ಜಾಹೀರಾತು ಸಂ.25–26/3 **ಟೆಂಡರ್ ಪ್ರಕಟಣೆ** ದಿನಾಂಕ: 15.05.2025

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರಾ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗಾಗಿ ಬಿಡ್ ಆಹ್ವಾನಿಸಿದ್ದಾರೆ.

ಇವೆಂಟ್ ನಂ. (ಜಿಇಎಂ)	ಜಾಬ್/ಐಟಂ ವಿವರ
ಜಿಇಎಂ/2025/ಬಿ/6236263	ಎಕ್ಸ್‌ಕ್ಯಾವೇಟರ್‌ಗಳನ್ನು ಬಳಸಿಕೊಂಡು ಪೊಝಿ ಮೌಥ್ ಅಗಲೀಕರಣ/ ಆಳಗೊಳಿಸುವ ಮತ್ತು ಕತ್ತರಿಸುವ ಸಂದರ್ಭದಲ್ಲಿ ಸ್ಪಿಲ್‌ವೇ ಚಾನಲ್‌ನಲ್ಲಿನ ಮರಳು ತೆರವುಗೊಳಿಸುವುದು, ತೊಟ್ಟಪಲ್ಲಿ ಸ್ಪಿಲ್‌ವೇ ಚಾನಲ್‌ನ ದಕ್ಷಿಣ ಭಾಗದ ಪೊಝಿ ಮೌಥ್‌ಸೈಟ್ ನಿಂದ ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರ ಹಾಗೂ ಕೆಎಂ ಎಂಎಲ್ ಶಂಕರಮಂಗಲಂ–ಫೇಸ್ 6 ಆಪರೇಷನ್ಸ್‌ಗೆ ಟಿಪ್ಪರ್‌ಗಳಲ್ಲಿ (ರೇರ್ ಡಂಪ್ ಟ್ರಕ್ಸ್) ಖನಿಜ ಮರಳು ಸಂಗ್ರಹಣೆ, ಲೋಡಿಂಗ್, ಸಾಗಾಣಿಕೆ ಮತ್ತು ಖನಿಜ ಮರಳು ಸಾಗಾಣಿಕೆ

ಬಿಡ್‌ದಾರರು http://irel.co.in ಅಥವಾ http://gem.gov.in ವೆಬ್‌ಸೈಟ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಮೇಲ್ಕಂಡ ಟೆಂಡರ್‌ಗಳಿಗೆ ಯಾವುದೇ ತಿದ್ದುಪಡಿ/ ವಿಸ್ತರಣೆ ಉಂಟಾದಲ್ಲಿ, ಅಂತಹವುಗಳನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

CBC 48139/12/0003/2526 ಸಹಿ/– ಮುಖ್ಯಸ್ಥರು, ಚವಾರ

PUBLIC NOTICE

My client intends to purchase the property described in the SCHEDULE hereunder, from its owner Smt. Yeshoda G.S. W/o Late Gangappa, R/at. Ganga Nilaya, Prashanth Nagar, Devanahalli Town, Devanahalli Taluk, Bangalore Rural District. Any person/s/bank/society/firm or any other body having any right, title, interest, claim or charge over the schedule mentioned property or any part thereof is hereby notified to lodge their objections/claims if any, in writing with documentary proof regarding their manner of right, title, interest or charge over the schedule mentioned property with the office of the undersigned within Five days (5 days) from date of publication of this notice, after which period my client shall proceed to purchase the schedule mentioned property, on the basis that there are no objections / claims of whatsoever nature with regard to the schedule mentioned property.

SCHEDULE PROPERTY

All the piece and parcel of the Property being converted land bearing **Sy No. 25/2 (Old Sy No- 22/2)** Measuring **2-00 Acres, 0-01 Gunta,** Situated at Guttahalli Village, Kasaba Hobli, Devanahalli Taluk, Bangalore Rural District,(converted vide Official Memorandum dated 04-11-2004, No. ALN (DE) SR.85/2004-05 issued by the Deputy Commissioner, Bangalore Rural District) and bounded on by; **East by:** Sy No. 26/1 property belongs to K.S. Ramaswamy; **West by :** Sy No. 25/1 property belongs to Smt. Ambuja i.e. Purchaser, **North by:** Road, **South by:** Sy No. 111/2 i.e. property of Sri. Harish

Sd/- **A. V. NARASIMHA REDDY,** ADVOCATE
Office at No. 464, 20th Main, 26th Cross, Judicial Layout, G.K.V.K. Post, Yelahanaka New Town, Bangalore-560 065.
Moblie- 9480333221 / 6366168523

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು **ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ** ಈ ಕೆಳಕಂಡ ಬಿಡ್ ವಿಚಾರಣೆ ಸಂಖ್ಯೆ ಅನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ:

ಸಂ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-2/ಎಫ್-122(14)/25-26/480-82 **ದಿನಾಂಕ: 15.05.2025**

1) ಬಿಡ್ ವಿಚಾರಣೆ ಸಂಖ್ಯೆ: ಕವಿಪನಿನಿ/ಅಇಂವಿ/ಪ್ರ(ಕಾ)/ದ–ವೃತ್ತ/ಕಾನಿಇಂ(ಕ)/ಸಕಾನಿಇಂ–4/24–25/ಇಪಿಆರ್–88/ಕರೆ–2, ದಿನಾಂಕ: 24.02.2025 ಅನ್ವಯ ಶೇಕಡವಾರು ಆಧಾರದ ಮೇಲೆ 66/11 ಕೆವಿ, **ISRO** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, EMCO ತಯಾರಿಕೆಯ ಕ್ರಮ ಸಂಖ್ಯೆ: HT-1711/12708, 2007ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-1/ಎಫ್-122(16)/25-26/483-85 **ದಿನಾಂಕ: 15.05.2025**

2) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ಕಾ)/ದ–ವೃತ್ತ/ಕಾನಿಇಂ(ಕ)/ಸಕಾನಿಇಂ–4/24–25/ಇಪಿಆರ್–87/ಕರೆ–2, ದಿನಾಂಕ: 24.02.2025 ಅನ್ವಯ ಶೇಕಡವಾರು ಆಧಾರದ ಮೇಲೆ 66/11 ಕೆವಿ, **Hoody** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, T&R ತಯಾರಿಕೆಯ ಕ್ರಮ ಸಂಖ್ಯೆ: PC0300199, 2013 ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-1/ಎಫ್-122(17)/25-26/486-88 **ದಿನಾಂಕ: 15.05.2025**

3) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ಕಾ)/ದ–ವೃತ್ತ/ಕಾನಿಇಂ(ಕ)/ಸಕಾನಿಇಂ–4/24–25/ಇಪಿಆರ್–88/ಕರೆ–2, ದಿನಾಂಕ: 24.02.2025 ಅನ್ವಯ ಶೇಕಡವಾರು ಆಧಾರದ ಮೇಲೆ 66/11 ಕೆವಿ, **Brigade Metropolis** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, SPEC ತಯಾರಿಕೆಯ ಕ್ರಮ ಸಂಖ್ಯೆ: ST-37787, 2008 ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಎಫ್-122(27)/25-26/492-94 **ದಿನಾಂಕ: 15.05.2025**

4) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/22–23/ಇಪಿಆರ್–44/ಕರೆ–13 ದಿನಾಂಕ: 21.10.2022 ಅನ್ವಯ 66/11 ಕೆವಿ, **Prestige Shanthiniketan** ಉಪ ಕೇಂದ್ರದ ಕೆಟ್ಟುಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, **Victory** ತಯಾರಿಕೆಯ ಕ್ರಮ ಸಂಖ್ಯೆ:4-0012/5, 2009ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-2/ಎಫ್-122(25)/25-26/495-97 **ದಿನಾಂಕ: 15.05.2025**

5) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/24–25/ಇಪಿಆರ್–12/ಕರೆ–3 ದಿನಾಂಕ: 05.09.2024 ಅನ್ವಯ 66/11 ಕೆವಿ, **Cessna Business Park** ಉಪ ಕೇಂದ್ರದ ಕೆಟ್ಟುಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, **M/s Kirloskar Electric Make** ತಯಾರಿಕೆಯ ಕ್ರಮ ಸಂಖ್ಯೆ: 102XJ007/01, 2011 ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಎಫ್-122(29)/25-26/498-500 **ದಿನಾಂಕ: 15.05.2025**

6) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/23–24/ಇಪಿಆರ್–03/ಕರೆ–11 ದಿನಾಂಕ: 03.10.2023 ಅನ್ವಯ 66/11 ಕೆವಿ, **Sarakki** ಉಪಕೇಂದ್ರದ ಕೆಟ್ಟುಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, **BBL** ತಯಾರಿಕೆಯ ಕ್ರಮ ಸಂಖ್ಯೆ:4934/7, 2006ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಎಫ್-122(28)/25-26/501-03 **ದಿನಾಂಕ: 15.05.2025**

7) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/23–24/ಇಪಿಆರ್–02/ಕರೆ–11 ದಿನಾಂಕ: 03.10.2023 ಅನ್ವಯ 66/11 ಕೆವಿ, **Jayadeva** ಉಪ ಕೇಂದ್ರದ ಕೆಟ್ಟುಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, **BBL** ತಯಾರಿಕೆಯ ಕ್ರಮ ಸಂಖ್ಯೆ: 4934/1, 2006ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-2/ಎಫ್-122(19)/25-26/489-91 **ದಿನಾಂಕ: 15.05.2025**

8) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/24–25/ಇಪಿಆರ್–13/ಕರೆ–4 ದಿನಾಂಕ: 09.09.2024 ಅನ್ವಯ 66/11 ಕೆವಿ, **Leelaventure** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, **Andrew Yule Make** ತಯಾರಿಕೆಯ ಕ್ರಮ ಸಂಖ್ಯೆ: 13017, 2000ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಎಫ್-122(26)/25-26/526-28 **ದಿನಾಂಕ: 16.05.2025**

9) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/22–23/ಇಪಿಆರ್–23/ಕರೆ–02 ದಿನಾಂಕ:19.05.2022 ಅನ್ವಯ 66/11 ಕೆವಿ, **Khodays Glass Facotry** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, VoltAmp ತಯಾರಿಕೆಯ ಕ್ರಮ ಸಂಖ್ಯೆ: JN8012/7, 2001ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-2/ಎಫ್-122(33)/25-26/531-33 **ದಿನಾಂಕ: 16.05.2025**

10) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/23–24/ಇಪಿಆರ್–09/ಕರೆ–5 ದಿನಾಂಕ:28.08.2024 ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ 66/11 ಕೆವಿ, **B** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, Andrew Yule ತಯಾರಿಕೆಯ ಕ್ರಮ ಸಂಖ್ಯೆ: 13018, 2001ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಎಫ್-122(30)/25-26/534-36 **ದಿನಾಂಕ: 16.05.2025**

11) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/23–24/ಇಪಿಆರ್–04/ಕರೆ–11 ದಿನಾಂಕ:03.10.2023 ಅನ್ವಯ 66/11 ಕೆವಿ, **Leela Venture** ಉಪ ಕೇಂದ್ರದ ಕೆಟ್ಟುಹೋದ 20ಎಂ.ವಿ.ಎ, 66/11 ಕೆವಿ ಶ್ರೇಣಿಯ, **NGEF** ತಯಾರಿಕೆಯ ಕ್ರಮ ಸಂಖ್ಯೆ: 2800060083, 2001ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಸಂ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಎಫ್-122(32)/25-26/537-39 **ದಿನಾಂಕ: 16.05.2025**

12) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/23–24/ಇಪಿಆರ್–11/ಕರೆ–12 ದಿನಾಂಕ:18.10.2023 ಅನ್ವಯ 66/11 ಕೆವಿ, **Electronic City Phase-2 Sec-2 (Malgudi)** ಉಪ ಕೇಂದ್ರದ ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, **EMCO** ತಯಾರಿಕೆಯ ಕ್ರಮ ಸಂಖ್ಯೆ: HT1711-127097, 2007ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ಪದ್ಧತಿಯ ಮೂಲಕ ಮಾತ್ರವೇ ಸ್ವೀಕರಿಸಲಾಗುವುದು. ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್ ಲಿಂಕ್ **“E Procurement KPTCL”** ಅಥವಾ **https://kppp. karnataka.gov.in** ನಲ್ಲಿ ಲಾಗಿನ್ ಆಗುವ ಮೂಲಕ ದಿನಾಂಕ **17.05.2025 ರಂದು ಅಥವಾ ತದನಂತರ** ಪಡೆಯಬಹುದು.

ಸಹಿ/–, ಅಧೀಕ್ಷಕ ಇಂಜಿನಿಯರ್, ವಿದ್ಯುತ್, ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣ,
ನೆಲಮಹಡಿ, ಕವಿಪ್ರನಿನಿ ಕಛೇರಿ ಸಂಕೀರ್ಣ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು-560 009.

BANGALORE DEVELOPMENT AUTHORITY
Office of the Executive Engineer, Dr. K.Shivarama Karantha Layout (DSKL), Division, Bangalore Development Authority
#108G, 5th Cross, MLA Layout, RMV 2nd Stage
Bhoopasandra, Bengaluru -560094.

No.: BDA /EE/DSKL/TEND/Lakes/58/2025-26 Date: 16-05-2025

Addendum - 01 (BDA/2025-26/0W/ WORK_INDENT116) Dtd: 16-05-2025.

Sub : Addendum to Short term Tender Notification No: 16/2025-26 Dated: 22-04-2025.
Ref : 1. This office Tender Notification No: 16/2025-26 Dated: 22-04-2025.
2. This office Corrigendum No: 48/2025-26 Dated: 07-05-2025.

Following Addendum is issued with respect to Indent mentioned below:-

Name of Work	Description	Remarks
Development of Ramagondana halli lake (BDA/2025-26/0W/ WORK_INDENT 116)	SECTION 2: INSTRUCTIONS TO TENDERERS (ITT), Clause 3.2 (c), h 60mm thick factory made precast M-30 grade Cement Concrete Paver Block-4060 Sqm	ITEM IS DELETED.

Other details remain unchanged. For any other details log on to Website: **https://kppp.karnataka.gov.in** or contact this office.

Sd/- Executive Engineer
DSKL Division, BDA, Bangalore.

BANGALORE DEVELOPMENT AUTHORITY
Office of the Executive Engineer, Dr. K.Shivarama Karantha Layout (DSKL), Division, Bangalore Development Authority
#108G, 5th Cross, MLA Layout, RMV 2nd Stage
Bhoopasandra, Bengaluru -560094.

No.: BDA /EE/DSKL/TEND/Lakes/59/2025-26 Date: 16-05-2025

Addendum - 02 (BDA/2025-26/0W/ WORK_INDENT128) Dtd: 16-05-2025.

Sub : Addendum to Short term Tender Notification No: 16/2025-26 Dated: 22-04-2025.
Ref : 1. This office Tender Notification No: 16/2025-26 Dated: 22-04-2025.
2. This office Corrigendum No: 48/2025-26 Dated: 07-05-2025.

Following Addendum is issued with respect to Indent mentioned below:-

Name of Work	Description	Remarks
Development of Veerasagara lake (BDA/2025-26/0W/ WORK_INDENT 128)	SECTION 2: INSTRUCTIONS TO TENDERERS (ITT), Clause 3.2 (d), h h) 60mm thick factory made precast M-30 grade Cement Concrete Paver Block-4600 Sqm	ITEM IS DELETED.

Other details remain unchanged. For any other details log on to Website: **https://kppp.karnataka.gov.in** or contact this office.

Sd/- Executive Engineer
DSKL Division, BDA, Bangalore.

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ. ನೇಮಕಾತಿ_ಐಎಸ್‌ಎಸ್_ಎಸ್‌ಬಿಸಿ_ವೈಪಿಆರ್_ಸಿಸಿಟಿವಿ, ದಿನಾಂಕ 13.05.2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು–	ರೂ. 69,43,780.80

ಯಶವಂತಪುರ ನಿಲ್ದಾಣದಲ್ಲಿ ಐಎಸ್‌ಎಸ್ ಕ್ಯಾಮೆರಾ ನಿರ್ವಹಣೆ ಮತ್ತು ಬೆಂಗಳೂರು ನಿಲ್ದಾಣದ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಬೆಂಗಳೂರು ವಿಭಾಗದ ಇತರ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ನಿರ್ವಹಣೆ (ಒಂದು ಹೆಚ್ಚು ಕೌಶಲ್ಯಪೂರ್ಣ + ನಾಲ್ಕು ಅರೆ ಕೌಶಲ್ಯಪೂರ್ಣ + ನಾಲ್ಕು ಕೌಶಲ್ಯರಹಿತ)ಸಿಬ್ಬಂದಿ ನೇಮಕ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04–06–2025 ರಂದು 12:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಂಕೇತ ಮತ್ತು ದೂರಸಂಪರ್ಕ ಅಭಿಯಂತರರು, ಬೆಂಗಳೂರು

ಪಿಯುಬಿ/116/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

South Western Railway - SWR SWRRLY SWRRLY

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಕಂಪನಿಯ, ಈ ಕೆಳಗೆ ತಿಳಿಸಿರುವ ಷೇರು ಸರ್ಟಿಫಿಕೇಟ್ ನಷ್ಟವಾಗಿರುವುದರಿಂದ ಇನ್ವೆಸ್ಟರ್ ಎಜುಕೇಷನ್ ಮತ್ತು ಪ್ರೊಟೆಕ್ಷನ್ ಫಂಡ್ ಪ್ರಾಧಿಕಾರದಿಂದ ಷೇರುಗಳನ್ನು ಕ್ಲೇಮ್ ಮಾಡುವುದಕ್ಕಾಗಿ ಹಕ್ಕು ಪತ್ರವನ್ನು ನೀಡಿ ಎಂದು ಸದರಿ ಷೇರುದಾರರು ಮನವಿಯನ್ನು ಸಲ್ಲಿಸಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ಷೇರು ಪ್ರಮಾಣಪತ್ರಗಳ ಸಂಖ್ಯೆ	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ವಿಶಿಷ್ಟ ಸಂಖ್ಯೆಗಳು	ಷೇರುದಾರರ ಹೆಸರು
V000691	25	27977	2467101 - 2467125	ವಿಜಯ್ ನಾರಾಯಣ್ ಉಮ್ರಾಣಿಕರ್ (ಮೃತ) ಜ್ಯೋತ್ಸ್ನಾ ವಿಜಯ್ ಉಮ್ರಾಣಿಕರ್
	20	60312	3673749 - 3673768	
	5	60313	3673769 - 3673773	

ಈ ಸೂಚನೆ ಪ್ರಕಟವಾದ ದಿನದಿಂದ 15 ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪ ಬರದಿದ್ದರೆ: ಕಂಪನಿಯು, ಇನ್ವೆಸ್ಟರ್ ಎಜುಕೇಷನ್ ಮತ್ತು ಪ್ರೊಟೆಕ್ಷನ್ ಫಂಡ್ ಪ್ರಾಧಿಕಾರದಿಂದ ಷೇರುಗಳನ್ನು ಕ್ಲೇಮ್ ಮಾಡುವುದಕ್ಕಾಗಿ ಸದರಿ ಹಕ್ಕುದಾರರಿಗೆ ಅರ್ಹತಾ ಪತ್ರವನ್ನು ನೀಡುವ ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 16.05.2025

ಮಾನಸ. ಆರ್
ಕಂಪನಿ ಸೆಕ್ರೆಟರಿ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL OFFICE for RENT 2400 or 4500 SFT Furnished. OC available. Near Yeshwanthpur Metro. Contact: 9916155055.

FOR LEASE. Begumpet Main Road, Hyderabad. Showroom and Office Space. Grade A building. 15,000 to 18,000 SFT. Fully Air Conditioned. Agents welcome! Ph: 9347576914.

BANASWADI FOR RENT SHOWROOM SPACE GROUND FLOOR5000+1500-6,500 Sqft NEAR BANASWADI MAIN ROAD: 9845350609

Farm House/Land/ Resorts

LAND SUITABLE for WARE HOUSE for RENT/ LEASE 70,000 Sqft Open Space at Kengeri: 9845521769

Industrial And Factory

LAB SPACE Complete Apoxi Finishing 1500 sq.feet with Office Space 1250 sq.feet Yelahanka Industrial Estate. 9448505538.

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

PUBLICATION NOTICE
NDOH: 21.05.2025
IN THE HIGH COURT OF DELHI AT NEW DELHI (ORDINARY ORIGINAL CIVIL JURISDICTION)
TEST CAS. NO. 71/2024
SATISH KUMAR ....**PETITIONER**
Versus
STATE & ORS ....**RESPONDENTS**
To,
RESPONDENT NO. 5
SMT. SHASHI BALA SRIVASTAVA, D/O LATE SH. H.C. JATAV, R/O REGIONAL TRAINING CENTRE, C.V. RAMAN NAGAR, BANGALORE, KARNATAKA-560093.
Whereas the petitioner has filed a Petition **under Section 276 of the Indian Succession Act, 1925** for grant of Probate in respect of **Will dated 28.09.2001 of Late Smt. Tarawati Jatav, W/o Shri Hukum Chand Jatav.** And WHEREAS it has been shown to the satisfaction of the Court that it is not possible to serve you in the ordinary way, therefore, this notice is given **by publication** directing you to make appearance before **the Joint Registrar (Judicial) of this Court on 21.05.2025 at 11:00 AM.**
Take notice that in default of your appearance on the day mentioned, the petition/ application will be heard and determined in your absence.
Given under my hand and the seal of the Court, **in terms of order dated 10.03.2025.**
Assistant Registrar (O)
for REGISTRAR GENERAL
GM

PUBLIC NOTICE
Public are informed that our client intends to purchase a Three Bedroom Residential Apartment including Pent House bearing No.301, bearing BBMP E-Aasthi Khatha Property No.79/54, E-PID No.7389192532, measuring 1271.75 Square Feet of Built-up area and 2080 Square Feet of super built-up area, on the Third Floor in Block ‘B’ together with Cellar Car Parking Space One Number in the Building known as ‘ADMIRALTY SQUARE’ carved out of all that property bearing Municipal No.79, measuring 58550 Square Feet, situated at Appareddypalya, Off 13th Cross, Indiranagar, Corporation Ward No.72, Bangalore, and bounded on: East: Plot Nos.1,1A, 1B, 1C, 2 and 3, West: Private Property, North: Road, South: Road, from its owner Mrs.Alladi Shoba, wife of Mr. Alladi Ramabrahma Sai and Mr.Alladi Ramabrahma Sai, son of late Mr.Alladi Narayana Sastry. Persons having any right over the said property may lodge their objections / claims with documentary evidence within 10 days from the date of this publication, to the undersigned.
K. V. Narendra & Associates, Advocates,
No.557, 2nd Floor, 9th A Main, Indiranagar, Bangalore-560038.
Ph: 9945109229 / 9591067392.

BUSINESS

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

TOURS & TRAVEL

Travel

VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

PERSONAL

Change of Name

I, MRS. Rani Priya spouse/ wife of 740294H Ex-Cpl. Sujit Sadasivan R/o S-0358, “USHAS”, 7th Cross, BEL Layout II Phase, Viswaneedam (PO) Bangalore 560091, have changed my name from Mrs. Rani Priya to Mrs. Priya Sujit vide Affidavit dated 15-05-2025 before notary Devaraja E, Bangalore.

CHANGE OF NAME
I, **MAITREYA,** residing at # 37/1, Maiganda Deva Mudaliar Road, Frazer Town, Pulikeshinagar, Bengaluru-560005, have changed my name to **MAITREYA VINAY** vide affidavit dated 16.05.2025 before notary K.C. Shashikala, Bengaluru.

I, ULFATH HUSSAIN S/o MIR TASAWAR HUSSAIN residing at Alipur, Gauribidanur taluk, Chikkaballapur district, Karnataka have changed my name to MIR ULFATH HUSSAIN vide affidavit dated 16.05.2025 before notary N.S Ashok Kumar, Gauribidanur.

DH DECCAN HERALD **Classifieds** More value, more impact
EDUCATION
ಪ್ರಜಾವಾಣಿ
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ಲಾಕರ್‌ನಲ್ಲಿದ್ದ ₹16 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದು ಮಾರಾಟ: ಇಬ್ಬರ ಬಂಧನ

ವ್ಯವಸ್ಥಾಪಕರ ಚಿನ್ನ ಕದ್ದಿದ್ದ ಸಹೋದ್ಯೋಗಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಲಾಕರ್‌ನಲ್ಲಿದ್ದ ಚಿನ್ನಾಭರಣವನ್ನು ಕದ್ದಿದ್ದ ಇಬ್ಬರು ಬ್ಯಾಂಕ್ ನೌಕರರನ್ನು ಬಸವೇಶ್ವರ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಠಾಣಾ ವ್ಯಾಪ್ತಿಯ ಬ್ಯಾಂಕ್‌ವೊಂದರ ಕ್ಷೇತ್ರ ಕಾರ್ಯಾಚರಣೆಯ ವಿಭಾಗದ ಅಧಿಕಾರಿ ಹರ್ಷಿತ್ ಹಾಗೂ ಬ್ಯಾಂಕ್ ಸೇಫ್ಟಿ ಲಾಕರ್ ಪರಿಶೀಲಿಸುತ್ತಿದ್ದ ಐಶ್ವರ್ಯಾ ಬಂಧಿತರು.

ಬಂಧಿತರಿಂದ ₹16 ಲಕ್ಷ ಮೌಲ್ಯದ 170 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

ಬಸವೇಶ್ವರನಗರದ ಬ್ಯಾಂಕ್‌ವೊಂದರಲ್ಲಿ ವ್ಯವಸ್ಥಾಪಕರಾಗಿದ್ದ ಸಿರಿಶಾ ಅವರು ₹16 ಲಕ್ಷ ಮೌಲ್ಯದ ಚಿನ್ನಾಭರಣವನ್ನು ಅದೇ ಬ್ಯಾಂಕ್ ಲಾಕರ್‌ನಲ್ಲಿ ಇಟ್ಟಿದ್ದರು. ಜೊತೆಗೆ ಬ್ಯಾಂಕ್ ಚೆಕ್‌ಬುಕ್, ಪದವಿ ಪ್ರಮಾಣ ಪತ್ರ, ಅಂಕಪಟ್ಟಿ ಸೇರಿ ಇತರೆ ದಾಖಲೆಗಳನ್ನೂ ಅದೇ ಲಾಕರ್‌ನಲ್ಲಿ ಇಟ್ಟಿದ್ದರು. ಆರೋಪಿಗಳಿಬ್ಬರು ಸಂಚು ರೂಪಿಸಿ 2024ರ ಡಿಸೆಂಬರ್‌ನಲ್ಲಿ ಈ ಚಿನ್ನಾಭರಣ ಕಳ್ಳತನ ಮಾಡಿದ್ದರು. ಕಳವು ಮಾಡಿದ ಚಿನ್ನಾಭರಣಗಳನ್ನು ಅಗ್ರಹಾರ ದಾಸರಹಳ್ಳಿಯಲ್ಲಿ ಇರುವ ಜ್ಯುವೆಲರಿ ಅಂಗಡಿಗೆ ಮಾರಾಟ ಮಾಡಿದ್ದರು ಎಂದು ಪೊಲೀಸರು ಹೇಳಿದರು.

‘ಕೆಲವು ದಿನಗಳ ಬಳಿಕ ಸಿರಿಶಾ ಅವರು ಲಾಕರ್ ಪರಿಶೀಲಿಸಿದಾಗ ದಾಖಲಾತಿಗಳು ಮಾತ್ರ ಇದ್ದವು. ಚಿನ್ನಾಭರಣ ಇರಲಿಲ್ಲ. ಬ್ಯಾಂಕ್‌ನಲ್ಲಿರುವ ಸಹದ್ಯೋಗಿಗಳು ಕಳ್ಳತನ ಮಾಡಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ಬಸವೇಶ್ವರ ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ತಾಂತ್ರಿಕ ಕಾರ್ಯಾಚರಣೆ ನಡೆಸಿದಾಗ ಹರ್ಷಿತ್ ಬಗ್ಗೆ ಅನುಮಾನ ವ್ಯಕ್ತವಾಗಿತ್ತು. ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಐಶ್ವರ್ಯಾ ಜೊತೆಗೆ ಸೇರಿ ಕೃತ್ಯ ಎಸಗಿರುವುದಾಗಿ ಗೊತ್ತಾಗಿತ್ತು. ನಂತರ, ಐಶ್ವರ್ಯಾಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಬ್ಯಾಂಕ್‌ನಲ್ಲಿದ್ದ ಕೀಗಳನ್ನು ಬಳಸಿ ಲಾಕರ್ ತೆಗೆದು ಆಭರಣ ಕಳವು ಮಾಡಿರುವುದಾಗಿ ಹೇಳಿದ್ದಳು’ ಎಂದು ಪೊಲೀಸರು ಹೇಳಿದರು.

‘ಇಬ್ಬರು ಆರೋಪಿಗಳು ಬೇರೆ ಬೇರೆ ಕಡೆ ಸಾಲ ಪಡೆದುಕೊಂಡಿದ್ದರು. ಸಾಲ ತೀರಿಸುವ ಉದ್ದೇಶದಿಂದ ಕಳ್ಳತನ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಮೂವರ ಬಂಧನ: ಮತ್ತೊಂದು ಪ್ರಕರಣದಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಬಸವೇಶ್ವರ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹35 ಲಕ್ಷ ಮೌಲ್ಯದ 382 ಗ್ರಾಂ ಚಿನ್ನಾಭರಣ ಹಾಗೂ 286 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಸಾಯಿಬಾಬಾ ದೇವಸ್ಥಾನ ಬಳಿ ಮನೆಯೊಂದರಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳಿಂದ ವಶಕ್ಕೆ ಪಡೆದ ಚಿನ್ನಾಭರಣ

ಅಪರಾಧ ಸುದ್ದಿ

ಕಾನ್‌ಸ್ಟೆಬಲ್, ಸ್ನೇಹಿತೆಗೆ ₹6 ಲಕ್ಷ ವಂಚನೆ

ಜಾತಕ ದೋಷಕ್ಕೆ ಪೂಜೆ ಮಾಡಿಸುವುದಾಗಿ ನಂಬಿಸಿ ಮಹಿಳಾ ಕಾನ್‌ಸ್ಟೆಬಲ್ ಹಾಗೂ ಆಕೆಯ ಸ್ನೇಹಿತೆಯಿಂದ ₹6.49 ಲಕ್ಷ ಪಡೆದು ವಂಚಿಸಿದ ಆರೋಪಿಯನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಕಾನ್‌ಸ್ಟೆಬಲ್‌ಗೆ ಪೂಜೆ, ಆತ್ಮದ ಕಥೆ ಕಟ್ಟಿ ವಂಚಿಸಿದ ಆರೋಪದಡಿ ಕಲಬುರಗಿಯ ಹೇಮಂತ್ ಭಟ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಾನ್‌ಸ್ಟೆಬಲ್‌ಗೆ ಸ್ನೇಹಿತೆಯ ಮೂಲಕ ಹೇಮಂತ್ ಭಟ್ ಪರಿಚಯವಾಗಿತ್ತು. ಜಾತಕ ಪರಿಶೀಲಿಸಿದ್ದ ಆರೋಪಿಯು, ‘ನಿನ್ನ ದೇಹದಲ್ಲಿ ಹದಿನೈದು ಆತ್ಮಗಳು ಸೇರಿವೆ. ಆದ್ದರಿಂದಲೇ ಸಮಸ್ಯೆಯಾಗುತ್ತಿದೆ. ಹಾಗಾಗಿ ಮದುವೆ ಸಹ ಆಗುತ್ತಿಲ್ಲ. ಶಾಂತಿ ಮಾಡಿಸದಿದ್ದರೆ ಪ್ರಾಣ ಹಾನಿಯಾಗುತ್ತದೆ ಎಂದು ಬೆದರಿಸಿದ್ದ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಬಳಿಕ ಕೋರಮಂಗಲದ ಹೋಟೆಲ್‌ವೊಂದರಲ್ಲಿ ಪೂಜೆ ಮಾಡಿದ್ದ ಆರೋಪಿ, ದೂರುದಾರರು ಮತ್ತು ಆಕೆಯ ಸ್ನೇಹಿತೆಯಿಂದ ಹಂತ ಹಂತವಾಗಿ ಒಟ್ಟು ₹6.49 ಲಕ್ಷ ಹಣ ಪಡೆದುಕೊಂಡಿದ್ದಾನೆ. ಆದರೆ, ಪೂಜೆಯ ಬಳಿಕವೂ ಆರೋಗ್ಯದಲ್ಲಿ ಯಾವುದೇ ಬದಲಾವಣೆ ಕಾಣದಿದ್ದಾಗ ಹಣ ವಾಪಸ್ ನೀಡುವಂತೆ ದೂರುದಾರರು ಕೇಳಿದ್ದರು. ಹಣ ವಾಪಸ್ ನೀಡದೆ, ಮೊಬೈಲ್ ಕರೆ ಸ್ವೀಕರಿಸುತ್ತಿರಲಿಲ್ಲ. ಹಾಗಾಗಿ ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂತ್ರಸ್ತೆಯು ಠಾಣೆಗೆ ದೂರು ನೀಡಿದರು’ ಎಂದು ಪೊಲೀಸರು ಹೇಳಿದ್ದಾರೆ.

ಹೇಮಂತ್ ಭಟ್

‘ಪ್ರಕರಣ ದಾಖಲಿಸಿಕೊಂಡು, ಕಲಬುರಗಿಯಲ್ಲಿದ್ದ ಆರೋಪಿ ಹೇಮಂತ್ ಭಟ್‌ನನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ. ತನಿಖೆ ನಡೆಯುತ್ತಿದೆ’ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದ್ದಾರೆ.

₹1.20 ಲಕ್ಷ ಲಂಚ: ಪಿಎಸ್‌ಐ ಬಂಧನ

ವೇಶ್ಯಾವಾಟಿಕೆ ಪ್ರಕರಣ ದಾಖಲಿಸದೇ ಇರಲು ₹1.20 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಕಾಡುಗೋಡಿ ಪೊಲೀಸ್ ಠಾಣೆಯ ಪಿಎಸ್‌ಐ ಪ್ರವೀಣ್ ಚಿತ್ರಗಾರ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಲಂಚ ಪಡೆಯುತ್ತಿದ್ದ ಹೆಡ್ ಕಾನ್‌ಸ್ಟೆಬಲ್ ಯಲ್ಲಪ್ಪ ಠಾಣೆಯಿಂದ ಪರಾರಿಯಾಗಿದ್ದಾರೆ.

ಕಾಡುಗೋಡಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈಚೆಗೆ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ವೇಶ್ಯಾವಾಟಿಕೆ ಆರೋಪದಲ್ಲಿ ಹಲವರನ್ನು ಬಂಧಿಸಿದ್ದರು. ಸೀಗೇಹಳ್ಳಿ ನಿವಾಸಿ ಜಯರಾಂ ಎಂಬುವವರ ಬೈಕ್ ಅನ್ನು ವಶಕ್ಕೆ ಪಡೆದಿದ್ದರು ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

ಬೈಕ್ ಅನ್ನು ಬಿಡುಗಡೆ ಮಾಡಲು ಮತ್ತು ಜಯರಾಂ ವಿರುದ್ಧ ಪ್ರಕರಣ ದಾಖಲಿಸದೇ ಇರಲು ಪಿಎಸ್‌ಐ ಪ್ರವೀಣ್ ಅವರು ₹1.20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಜಯರಾಂ ಅವರು ಅದರಲ್ಲಿ ಈಗಾಗಲೇ ₹75,000 ನೀಡಿದ್ದರು. ಪಿಎಸ್‌ಐ ಇನ್ನಷ್ಟು ಹಣಕ್ಕೆ ಒತ್ತಡ ಹೇರಿದ ನಂತರ ಲೋಕಾಯುಕ್ತಕ್ಕೆ ದೂರು ನೀಡಿದ್ದರು ಎಂದು ಮೂಲಗಳು ಮಾಹಿತಿ ನೀಡಿವೆ. ಲೋಕಾಯುಕ್ತ ಪೊಲೀಸರ ಸೂಚನೆಯಂತೆ ಜಯರಾಂ ಅವರು ಶುಕ್ರವಾರ ಕಾಡುಗೋಡಿ ಪೊಲೀಸ್ ಠಾಣೆಗೆ ಹೋಗಿ, ಪ್ರವೀಣ್ ಮತ್ತು ಯಲ್ಲಪ್ಪ ಅವರಿಗೆ ₹35,000 ನೀಡಿದ್ದರು. ಇದೇ ವೇಳೆ ದಾಳಿ ನಡೆಸಲಾಯಿತು. ಈ ವೇಳೆ ಯಲ್ಲಪ್ಪ ಅವರು ಸ್ಥಳದಿಂದ ಪರಾರಿಯಾದರು. ಪ್ರವೀಣ್ ಸಿಕ್ಕಿಬಿದ್ದರು ಎಂದು ತಿಳಿಸಿವೆ.

ಆಟೊ ಚಾಲಕ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಕಳ್ಳತನ ಮಾಡಿದ್ದ ಮುಂಬೈನ ಆಟೊ ಚಾಲಕ ಸೇರಿ ಇಬ್ಬರನ್ನು ಬಂಧಿಸಿರುವ ಯಲಹಂಕ ಪೊಲೀಸರು, ₹16 ಲಕ್ಷ ಮೌಲ್ಯದ 180 ಗ್ರಾಂ ಚಿನ್ನದ ಗಟ್ಟಿಗಳನ್ನು ಜಪ್ತಿ ಮಾಡಿದ್ದಾರೆ.

ಮುಂಬೈನ ಜೇಮ್ಸ್ ಜಫ್ರಿನ್ (39), ಸಲಾವುದ್ದೀನ್ ಶೇಖ್(29) ಬಂಧಿತರು. ಪ್ರಕೃತಿನಗರದ ವೇಣುಪ್ರಸಾದ್ ಅವರ ಫ್ಲ್ಯಾಟ್‌ನಲ್ಲಿದ್ದ 250 ಗ್ರಾಂ ಚಿನ್ನ, ಬೆಳ್ಳಿ ವಸ್ತುಗಳು ಹಾಗೂ ನಗದು ಕಳವಾಗಿದ್ದವು.

ಮೊಬೈಲ್ ಕಳ್ಳರು ಸೆರೆ: ಮೊಬೈಲ್ ಸರ್ವಿಸ್ ಅಂಗಡಿಯ ಬೀಗ ಮುರಿದು ಕಳವು ಮಾಡಿದ ಹೊರ ರಾಜ್ಯದ ಇಬ್ಬರನ್ನು ಬಂಧಿಸಿ ₹1.40 ಲಕ್ಷ ಮೌಲ್ಯದ 14 ಮೊಬೈಲ್‌ಗಳು, ಒಂದು ಲ್ಯಾಪ್‌ಟಾಪ್ ಅನ್ನು ಯಲಹಂಕ ಪೊಲೀಸರು ಜಪ್ತಿ ಮಾಡಿದ್ದಾರೆ.

ಒಡಿಶಾ ಮೂಲದ ರಾಧಾ ಕೃಷ್ಣಕಾಂತ್ ಮಲ್ಲಿಕ್ (20), ಲಿಪನ್ ಕುಮಾರ್ ಮಲ್ಲಿಕ್ (21)ಬಂಧಿತರು.

ಆರೋಪಿಯಿಂದ ವಶಕ್ಕೆ ಪಡೆದ ಡ್ರಗ್ಸ್ ಅನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪರಿಶೀಲಿಸಿದರು

₹4 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪೂರೈಸುತ್ತಿದ್ದ ನೈಜೀರಿಯಾದ ಪ್ರಜೆಯನ್ನು ಬಂಧಿಸಿರುವ ಸಿಸಿಬಿಯ ಮಾದಕ ದ್ರವ್ಯ ದಳದ ಸಿಬ್ಬಂದಿ, ಆರೋಪಿಯಿಂದ ₹4 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ನೈಜೀರಿಯಾದ ಡೇನಿಲಯ್ ಬಂಧಿತ ಆರೋಪಿ. ಬಂಧಿತನಿಂದ ₹4 ಕೋಟಿ ಮೌಲ್ಯದ 2 ಕೆ.ಜಿ. 585 ಗ್ರಾಂ ತೂಕದ ಎಂಡಿಎಂಎ ಕ್ರಿಸ್ಟಲ್, ದ್ವಿಚಕ್ರ ವಾಹನ, ಒಂದು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಉದ್ಯಮ ವೀಸಾದಡಿ ಡೇನಿಯಲ್ ಭಾರತಕ್ಕೆ ಬಂದಿದ್ದ. ನೈಜೀರಿಯಾದಿಂದ ಕಳ್ಳಸಾಗಣೆ ಮೂಲಕ ಮಾದಕವಸ್ತುಗಳನ್ನು ತರಿಸಿಕೊಂಡಿದ್ದ. ಸೆಕೆಂಡ್ ಹ್ಯಾಂಡ್ ಬೈಕ್ ಬಳಸಿಕೊಂಡು ಡೀಲರ್‌ಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ. ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಅಚ್ಯುತ ನಗರದ ಮನೆಯೊಂದರಲ್ಲಿ ಆರೋಪಿ ವಾಸವಾಗಿದ್ದ. ಖಚಿತ ಮಾಹಿತಿ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು. ಮತ್ತೊಬ್ಬ ವಿದೇಶಿ ಪ್ರಜೆ ತಲೆಮರೆಸಿಕೊಂಡಿದ್ದು ಹುಡುಕಾಟ ನಡೆಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ನಟಿ ಆಭರಣ ಕಳವು: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, ನೃತ್ಯಗಾರ್ತಿ ರುಕ್ಮಿಣಿ ವಿಜಯ್‌ಕುಮಾರ್ ಅವರ ಕಾರಿನಲ್ಲಿದ್ದ ವಜ್ರದ ಉಂಗುರ ಸೇರಿ ಸುಮಾರು ₹22.50 ಲಕ್ಷ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಕಬ್ಬನ್‌ಪಾರ್ಕ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನ ನಿವಾಸಿ ರಾಜ್ ಮಹಮ್ಮದ್ ಮಸ್ತಾನ್ (45) ಬಂಧಿತ ಆರೋಪಿ. ಈತ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಆರೋಪಿಯಿಂದ ₹22.50 ಲಕ್ಷ ಮೌಲ್ಯದ ಆಭರಣಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ರುಕ್ಮಿಣಿ ಅವರು ‘ಭಜರಂಗಿ’ ಸಿನಿಮಾದಲ್ಲಿ ನಟಿಸಿದ್ದರು. ಕೋರಮಂಗಲದಲ್ಲಿ ನೆಲಸಿದ್ದರು.

‘ದೂರುದಾರರು ಮೇ 11ರಂದು ಬೆಳಿಗ್ಗೆ 8ರ ಸುಮಾರಿಗೆ ಕಬ್ಬನ್‌ಪಾರ್ಕ್‌ನಲ್ಲಿ ವಾಯುವಿಹಾರಕ್ಕೆಂದು ಹೋಗಿದ್ದಾಗ ಘಟನೆ ನಡೆದಿದೆ. ಕಾರನ್ನು ಪಾರ್ಕ್ ಮಾಡಿದ್ದ ಅವರು, ಮರಳಿ ಹೋಗಿ ನೋಡಿದಾಗ ಡಿಕ್ಕಿಯಲ್ಲಿದ್ದ ಬ್ಯಾಗ್ ಇರಲಿಲ್ಲ. ವ್ರಜದ ಆಭರಣಗಳು ಕಳ್ಳತನ ಆಗಿರುವುದು ಗೊತ್ತಾಗಿ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಮಹಾಲಕ್ಷ್ಮಿ ಲೇಔಟ್‌ನಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ನಟಿ ಕಾರನ್ನು ಲಾಕ್ ಮಾಡುವುದನ್ನು ಮರೆತಿದ್ದರು. ಅದನ್ನು ಗಮನಿಸಿದ್ದ ಆರೋಪಿ ಡಿಕ್ಕಿಯಲ್ಲಿಟ್ಟಿದ್ದ ₹14 ಲಕ್ಷ ಮೌಲ್ಯದ 2 ವಜ್ರದ ಉಂಗುರಗಳು, ₹9 ಲಕ್ಷ ಬೆಲೆಯ ವಾಚ್, ₹75 ಸಾವಿರ ಬೆಲೆಯ ವಾಲೆಟ್ ಸೇರಿ ₹22.50 ಲಕ್ಷ ಮೌಲ್ಯದ ವಸ್ತುಗಳನ್ನು ಕದ್ದಿದ್ದ.

ಮರುಮದುವೆಯಾಗಿದ್ದ ದಂಪತಿ ನಡುವೆ ಕಲಹ • ಉಳಿ ಬಳಸಿ ಹತ್ಯೆ

ಪತ್ನಿ ಕೊಂದು ಠಾಣೆಗೆ ಬಂದ ಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಾಣಸವಾಡಿ ಬಚ್ಚಪ್ಪ ಲೇಔಟ್‌ನ 3ನೇ ಕ್ರಾಸ್‌ನ ಮನೆಯೊಂದರಲ್ಲಿ ಪತ್ನಿಯನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಶುಕ್ರವಾರ ಮುಂಜಾನೆ ನಡೆದಿದೆ.

ಮರಗೆಲಸಕ್ಕೆ ಬಳಸುವ ಉಳಿಯಿಂದ ಪತ್ನಿ ಕಲ್ಯಾಣಿಗೆ ಹೊಡೆದು ಕೊಲೆ ಮಾಡಿದ ಬಳಿಕ ಬಾಣಸವಾಡಿ ಠಾಣೆಗೆ ಬಂದು ವಿಷಯ ತಿಳಿಸಿದ ಆರೋಪಿ ರಮೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

‘ರಮೇಶನ ಮೊದಲ ಪತ್ನಿ ಹಾಗೂ ಕಲ್ಯೆವಾಣಿಯ ಮೊದಲ ಪತಿ ಮೃತಪಟ್ಟಿದ್ದು, ಇಬ್ಬರೂ 10 ವರ್ಷಗಳ ಹಿಂದೆಯೇ ಎರಡನೇ ಮದುವೆಯಾಗಿದ್ದರು. ದಂಪತಿಗೆ 9 ವರ್ಷದ ಮಗ ಇದ್ದಾನೆ. ಬಡಗಿ ಕೆಲಸ ಮಾಡಿಕೊಂಡಿದ್ದ ರಮೇಶ್ ಆಗಾಗ್ಗೆ ತನ್ನ ಮೊದಲ ಪತ್ನಿಯ ಇಬ್ಬರು ಹೆಣ್ಣುಮಕ್ಕಳನ್ನು ಭೇಟಿಯಾಗುತ್ತಿದ್ದ. ಈ ವಿಷಯವಾಗಿ ದಂಪತಿ ನಡುವೆ ಗಲಾಟೆ ನಡೆಯುತ್ತಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಕಲ್ಯೆವಾಣಿ

ರಮೇಶ್

‘ಇದೇ ವಿಚಾರಕ್ಕೆ ಗುರುವಾರ ದಂಪತಿ ನಡುವೆ ಜಗಳವಾಗಿತ್ತು. ಪತಿ ಮತ್ತು ಆತನ ಮೊದಲ ಪತ್ನಿಯ ಮಕ್ಕಳನ್ನು ಕಲ್ಯೆವಾಣಿ ನಿಂದಿಸಿದ್ದಳು. ಇದರಿಂದ ಸಿಟ್ಟಿಗೆದ್ದ ಆರೋಪಿ, ಬೆಳಗಿನ ಜಾವ 4 ಗಂಟೆ ಸುಮಾರಿಗೆ ಉಳಿಯಿಂದ ಹೊಡೆದು ಕೊಲೆ ಮಾಡಿದ್ದಾನೆ. ಬಳಿಕ ಠಾಣೆಗೆ ಬಂದು ವಿಷಯ ತಿಳಿಸಿದ್ದಾನೆ’ ಎಂದು ಪೊಲೀಸರು ಹೇಳಿದರು.

ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ರೈಲಿನಲ್ಲಿ ಕಳವು: ಆರೋಪಿ ಬಂಧನ

ರೈಲಿನಲ್ಲಿ ಲ್ಯಾಪ್‌ಟಾಪ್, ಮೊಬೈಲ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬೈಯಪ್ಪನಹಳ್ಳಿ ಠಾಣೆಯ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಸಿಂಗಲಗುಂಟಾದ ಎಂ.ಗುಣಶೇಖರ್ (43) ಬಂಧಿತ ಆರೋಪಿ.ಆರೋಪಿಯಿಂದ ವಿವಿಧ ಕಂಪನಿಯ ಐದು ಲ್ಯಾಪ್‌ಟಾಪ್, ಒಂಬತ್ತು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹5.94 ಲಕ್ಷ ಎಂದು ಅಂದಾಜಿಸಲಾಗಿದೆ.

ಎಂ.ಗುಣಶೇಖರ್

ಏಪ್ರಿಲ್ 7ರಂದು ಕೆ.ಆರ್. ಪುರದ ರೈಲು ನಿಲ್ದಾಣದಿಂದ ಹೊರಟಿದ್ದ ಎರ್ನಾಕುಲಂ–ಎಸ್‌ಎಂವಿಟಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಆರೋಪಿ ಕಳ್ಳತನ ಮಾಡಿದ್ದ. ಮಹಿಳಾ ಪ್ರಯಾಣಿಕರೊಬ್ಬರು ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಮೊಬೈಲ್ ಲೊಕೇಷನ್ ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು. ರೈಲು ಪ್ರಯಾಣಿಕರಿಂದ ಕಳ್ಳತನ ಮಾಡಿದ್ದ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಫೋನ್‌ಗಳನ್ನು ತಮಿಳುನಾಡಿನ ಈರೋಡ್‌ನಲ್ಲಿ ಮಾರಾಟ ಮಾಡಿದ್ದ. ಅಂಗಡಿ ಮಾಲೀಕನನ್ನು ಪತ್ತೆಹಚ್ಚಿ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಚಿತ್ರಾವಳಿ

ಬೆಂಗಳೂರಿನ ಓಕಳಿಪುರಂನ ರೈಲ್ವೆ ಮಾರ್ಗದ ಕೆಳಗೆ ಅಷ್ಟ ಪಥಗಳಲ್ಲಿ ಆರು ಮಾರ್ಗಗಳು ಮಾತ್ರ ಬಳಕೆಯಲ್ಲಿದ್ದು, ಉಳಿದೆರಡು ಪಥಗಳ ಕಾಮಗಾರಿ ನಿರೀಕ್ಷಿತ ಪ್ರಗತಿ ಕಾಣದೇ ಇರುವುದರಿಂದ ಕಸ ತುಂಬಿ ಹೋಗಿದೆ. ಮಳೆಗಾಲ ಆರಂಭವಾದರೆ ಮಳೆ ನೀರು ನಿಂತು ಪರಿಸ್ಥಿತಿ ಇನ್ನಷ್ಟು ಹದಗೆಡುವ ಸಾಧ್ಯತೆ ಇದೆ.
ಪ್ರಜಾವಾಣಿ ಚಿತ್ರ

ಕೆ.ಆರ್‌ಪುರ ಸಮೀಪದ ದೇವಸಂದ್ರದಲ್ಲಿ ಎಐಸಿಸಿ ಹ್ಯೂಮನ್ ರೈಟ್ಸ್ ವತಿಯಿಂದ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರಕ್ಕೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ.ಮೋಹನ್ ಬಾಬು ಚಾಲನೆ ನೀಡಿದರು. ಎಐಸಿಸಿ ಹ್ಯೂಮನ್ ರೈಟ್ಸ್ ತಾಲ್ಲೂಕು ಅಧ್ಯಕ್ಷೆ ಮಹಾಲಕ್ಷ್ಮಿ, ಡಿ.ಕೆ.ದೇವೇಂದ್ರ, ಡಿ.ಕೆ.ರಮೇಶ್, ರಾಜಹಂಸ ಇದ್ದರು

ಕೊಮ್ಮಘಟ್ಟ: ₹48 ಲಕ್ಷದಿಂದ ಫ್ಲ್ಯಾಟ್‌ಗಳ ಬೆಲೆ ಪ್ರಾರಂಭ

ಬಿಡಿಎ ಫ್ಲ್ಯಾಟ್ ಮೇಳ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವತಿಯಿಂದ ಮೇ 17ರಂದು ಕೊಮ್ಮಘಟ್ಟದಲ್ಲಿ ಫ್ಲ್ಯಾಟ್ ಮೇಳ ಆಯೋಜಿಸಲಾಗಿದೆ.

ಈ ಮೇಳದಲ್ಲಿ ಕೊಮ್ಮಘಟ್ಟ, ಕಣಮಿಣಿಕೆ, ಕೋನದಾಸಪುರ ಸಹಿತ ಇತರೆ ಕಡೆಗಳಲ್ಲಿ ನಿರ್ಮಿಸಿರುವ ಫ್ಲ್ಯಾಟ್ ಯೋಜನೆಯಲ್ಲಿ ಬಾಕಿ ಉಳಿದಿರುವ ಘಟಕಗಳನ್ನು ಮಾರಾಟ ಮಾಡಲಾಗುತ್ತದೆ.

ಕೊಮ್ಮಘಟ್ಟದಲ್ಲಿರುವ ಬಿಡಿಎ ವಸತಿ ಸಮ್ಮುಚ್ಚಯದಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೂ ಮೇಳ ನಡೆಯಲಿದೆ. ಸದ್ಯ 1176 ಫ್ಲ್ಯಾಟ್‌ಗಳು ಮಾರಾಟಕ್ಕೆ ಲಭ್ಯವಿದ್ದು, ಆಯಾ ಫ್ಲ್ಯಾಟ್ ಮೌಲ್ಯದ ಶೇಕಡಾ 25ರಷ್ಟು ಹಣವನ್ನು ಆರಂಭಿಕ ಠೇವಣಿಯಾಗಿ ಪಾವತಿಸಿದರೆ ಸ್ಥಳದಲ್ಲೇ ಖರೀದಿದಾರರಿಗೆ ಹಂಚಿಕೆ ಪತ್ರ ನೀಡಲಾಗುತ್ತದೆ ಎಂದು ಬಿಡಿಎ ವಸತಿ ಯೋಜನಾ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜೆ.ಕೆ. ಭುವನೇಶ್ವರ್ ತಿಳಿಸಿದರು.

11.50 ಎಕರೆಗಳಷ್ಟು ವಿಸ್ತಾರವಾದ ಭೂಪ್ರದೇಶದಲ್ಲಿ ಕೊಮ್ಮಘಟ್ಟ ವಸತಿ ಯೋಜನೆಗಳು ಫೇಸ್-1, 2 ಮತ್ತು 3 ತಲೆಯೆತ್ತಿದ್ದು, ಸುತ್ತಲೂ ಹಸಿರು ವಾತಾವರಣ ಹೊಂದಿದೆ. ನಿರ್ಮಾಣ ಕಾರ್ಯದಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ಹಸಿರು ಪರಿಕಲ್ಪನೆ ಅಳವಡಿಸಿಕೊಳ್ಳಲಾಗಿದೆ. ಬೆಂಗಳೂರು-ಮೈಸೂರು ಹೆದ್ದಾರಿಯಿಂದ 1.6 ಕಿ.ಮೀ. ದೂರದಲ್ಲಿದೆ. ಚಲ್ಲಘಟ್ಟ ಮೆಟ್ರೊದಿಂದ 2.5 ಕಿ.ಮೀ.ಗಿಂತ ಕಡಿಮೆ ದೂರದಲ್ಲಿದೆ. ರೇರಾ ಪ್ರಮಾಣೀಕರಿಸಿದೆ’ ಎಂದು ಹೇಳಿದರು.

ಪ್ರಸ್ತುತ ಕೊಳವೆಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದ್ದು, ಜಲಮಂಡಳಿಯಿಂದ ನೀರು ಸರಬರಾಜು ಸೌಕರ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. ಸಾಲ ಸೌಲಭ್ಯ ಪಡೆಯುವವರಿಗಾಗಿ ನಾನಾ ಬ್ಯಾಂಕ್‌ಗಳ ಪ್ರತಿನಿಧಿಗಳು ಇರುವರು ಎಂದರು.

1,176 ಫ್ಲ್ಯಾಟ್‌ಗಳ ದರ

- ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಕೊಮ್ಮಘಟ್ಟ, **ಎನ್‌ಪಿಕೆಎಲ್ ಫೇಸ್-1:** 3 ಬಿಎಚ್‌ಕೆನ 480 ಮನೆಗಳಿದ್ದು, (1314.54 ಚದರಡಿ ವಿಸ್ತೀರ್ಣ) ₹65.20 ಲಕ್ಷ
- ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ, **ಎನ್‌ಪಿಕೆಎಲ್ ಫೇಸ್-2:** ಬಿಎಚ್‌ಕೆನ 360 ಮನೆಗಳಿದ್ದು, (978 ಚದರ ಅಡಿ ವಿಸ್ತೀರ್ಣ) ₹53.85 ಲಕ್ಷ
- ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ, **ಎನ್‌ಪಿಕೆಎಲ್ ಫೇಸ್-3:** 2 ಬಿಎಚ್‌ಕೆಯ 336 ಮನೆಗಳಿದ್ದು, (904.27 ಚದರ ಅಡಿ) ₹48.70 ಲಕ್ಷ


ಕೊಮ್ಮಘಟ್ಟದಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯ

‘ಪೌರಕಾರ್ಮಿಕರ ದಾಖಲೆಪತ್ರಗಳ ವೆಚ್ಚ ಭರಿಸಲಿರುವ ಬಿಬಿಎಂಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಯಂ ನೇಮಕಗೊಂಡಿರುವ ಪೌರಕಾರ್ಮಿಕರು ಸಿಂಧುತ್ವ ಪ್ರಮಾಣಪತ್ರಕ್ಕಾಗಿ ಸಲ್ಲಿಸಬೇಕಿರುವ ಇತರೆ ದಾಖಲೆ ಪತ್ರಗಳಿಗೆ ತಗಲುವ ವೆಚ್ಚವನ್ನು ಪಾಲಿಕೆಯಿಂದಲೇ ಭರಿಸಲಾಗುವುದು ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ) ನವೀನ್ ಕುಮಾರ್ ರಾಜು ತಿಳಿಸಿದ್ದಾರೆ.

ಪಾಲಿಕೆಯ ಘನತ್ಯಾಜ್ಯ ನಿರ್ವಹಣೆಯ ವಿಭಾಗದಲ್ಲಿ ನೇರ ಪಾವತಿಯಡಿ (ಡಿಪಿಎಸ್) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಪೈಕಿ, ರೋಸ್ಟರ್ ಅಥವಾ ಮೀಸಲಾತಿ ನಿಯಮಾವಳಿಗಳನ್ವಯ 12,692 ಪೌರಕಾರ್ಮಿಕರ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಆರು ತಿಂಗಳ ಹಿಂದೆ ಪ್ರಚುರಪಡಿಸಲಾಗಿತ್ತು. ಅದರಲ್ಲಿ ಈಗಾಗಲೇ 4,000 ಪೌರ ಕಾರ್ಮಿಕರಿಗೆ ನೇಮಕಾತಿ ಆದೇಶಪತ್ರಗಳನ್ನು ವಿತರಿಸಲಾಗಿದೆ. ಉಳಿದ ಪೌರಕಾರ್ಮಿಕರಿಗೆ ಅತಿ ಶೀಘ್ರದಲ್ಲೇ ನೇಮಕಾತಿ ಆದೇಶಪತ್ರಗಳನ್ನು ನೀಡಲು ಕ್ರಮ ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ನೇಮಕಗೊಂಡ ಪೌರಕಾರ್ಮಿಕ ಅಭ್ಯರ್ಥಿಗಳ ಸಿಂಧುತ್ವ ಪರಿಶೀಲನೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿ ಪಡೆಯಬೇಕು. ಅದಕ್ಕಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಈಗಾಗಲೇ ಅರ್ಜಿಗಳನ್ನು ಭರ್ತಿ ಮಾಡಲಾಗಿದೆ. ಈ ಪೈಕಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಸೇವಾ ಸಿಂಧು ಅರ್ಜಿದಾರರ ಪ್ರಮಾಣಪತ್ರ ಪೋರ್ಟಲ್‌ನಲ್ಲಿ ಅರ್ಜಿದಾರರ ಲಾಗಿನ್‌ನಿಂದ ಪ್ರಮಾಣ ಪತ್ರ-1 ಹಾಗೂ ಪ್ರಮಾಣ ಪತ್ರ-2 ಅಪ್‌ಲೋಡ್ ಮಾಡಬೇಕಾಗಿದೆ. ಈ ಸಂಬಂಧ ಎರಡೂ ಪ್ರಮಾಣಪತ್ರಗಳ ಛಾಪಾ ಕಾಗದ ಹಾಗೂ ನೋಟರಿ ಸೇರಿದಂತೆ ಇನ್ನಿತರೆ ದಾಖಲಾತಿಗಳಿಗೆ ತಗಲುವ ವೆಚ್ಚವನ್ನು ನೇಮಕಾತಿ ಆದೇಶ ಪತ್ರಗಳು ನೀಡಿದವರನ್ನು ಹೊರತುಪಡಿಸಿ ಇನ್ನುಳಿದ ಪೌರ ಕಾರ್ಮಿಕರಿಗೆ ಪಾಲಿಕೆಯಿಂದಲೇ ಭರಿಸಲಾಗುವುದು. ಪ್ರಮಾಣಪತ್ರಗಳಿಗೆ ತಗಲುವ ಮೊತ್ತವನ್ನು ಇತರೆ ಸಾಮಾನ್ಯ ಮತ್ತು ವಿವಿಧ ವೆಚ್ಚಗಳಡಿ ಭರಿಸುವಂತೆ ಎಲ್ಲ ವಲಯ ಜಂಟಿ ಆಯುಕ್ತರಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

‘ಆಮಿಷಗಳಿಗೆ ಒಳಗಾಗದಿರಿ’

ಪೌರಕಾರ್ಮಿಕ ನೇಮಕಾತಿ ವಿಚಾರವಾಗಿ ಪ್ರಮಾಣಪತ್ರಗಳನ್ನು ಸಿದ್ಧಪಡಿಸಿ, ಅಪ್‌ಲೋಡ್ ಮಾಡಲು ಪಾಲಿಕೆಯ ಅಧಿಕಾರಿಗಳು ಸಹಕರಿಸಲಿದ್ದಾರೆ. ಈ ಸಂಬಂಧ ನೇಮಕಗೊಂಡ ಪೌರಕಾರ್ಮಿಕರು ಯಾವುದೇ ಮಧ್ಯವರ್ತಿಗಳನ್ನು ಭೇಟಿ ಮಾಡಕೂಡದು. ಆಮಿಷಗಳಿಗೆ ಒಳಗಾಗಬಾರದು. ದಾಖಲೆಗಳು ಅಗತ್ಯವಿದ್ದಲ್ಲಿ ಅಧಿಕಾರಿಗಳನ್ನು ನೇರವಾಗಿ ಸಂಪರ್ಕಿಸಬೇಕು ಎಂದು ವಿಶೇಷ ಆಯುಕ್ತ ನವೀನ್ ಕುಮಾರ್ ರಾಜು ತಿಳಿಸಿದ್ದಾರೆ.

ಬಿಬಿಎಂಪಿ ಸುದ್ದಿ

ಪೊಲೀಸರ ಸಂವಹನಕ್ಕಾಗಿ ಆ್ಯಪ್

ಬೆಂಗಳೂರು: ಬೆಂಗಳೂರು ನಗರ ಪೊಲೀಸರ ಅಧಿಕೃತ ಸಂವಹನಕ್ಕಾಗಿ ಪ್ರತ್ಯೇಕ ಆ್ಯಪ್ ಅಭಿವೃದ್ಧಿ ಪಡಿಸಲಾಗಿದೆ.

ನಗರ ಪೊಲೀಸರು ಆಂತರಿಕ ಸಂವಹನಕ್ಕಾಗಿ ಸುರಕ್ಷಿತ, ಪರಿಣಾಮಕಾರಿ ಮತ್ತು ರಚನಾತ್ಮಕ ಸಂದೇಶ ವಿನಿಮಯಕ್ಕಾಗಿ BCPChat ಹೆಸರಿನ ವಿಶೇಷ ಆ್ಯಪ್ ಅನ್ನು ರೂಪಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ತಿಳಿಸಿದರು.

ಆ್ಯಪ್ ವೈಶಿಷ್ಟ್ಯ: BCPChat ಅನ್ನು ದಿನನಿತ್ಯದ ಪೊಲೀಸ್ ಕಾರ್ಯ ಚಟುವಟಿಕೆಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಗಣ್ಯ ವ್ಯಕ್ತಿಗಳ ಇರುವಿಕೆ ಹಾಗೂ ಸಂಚಾರ ನಿರ್ವಹಣೆ, ಮಾಧ್ಯಮ ವರದಿಗಳು (ಮುದ್ರಣ, ಎಲೆಕ್ಟ್ರಾನಿಕ್ ಹಾಗೂ ಸಾಮಾಜಿಕ ಜಾಲತಾಣ), ದೈನಂದಿನ ಅಪರಾಧ ವರದಿ, ದೈನಂದಿನ ಪರಿಸ್ಥಿತಿ ವರದಿಗಳನ್ನು ಸುಲಭವಾಗಿ ಹಂಚಿಕೊಳ್ಳಲು ಈ ಆ್ಯಪ್‌ನಲ್ಲಿ ಸಾಧ್ಯವಾಗಲಿದೆ ಎಂದು ತಿಳಿಸಿದರು.

ದತ್ತಾಂಶಗಳನ್ನು ರಾಜ್ಯ ದತ್ತಾಂಶ ಕೇಂದ್ರದಲ್ಲಿ ಸುರಕ್ಷಿತವಾಗಿ ಸಂಗ್ರಹಿಸಲಾಗುವುದು. ಈ ಆ್ಯಪ್‌ನಿಂದ ಸರ್ಕಾರದ ಆದೇಶಗಳು, ಸುತ್ತೋಲೆಗಳು ಮತ್ತು ನೋಟಿಸ್‌ಗಳಂತಹ ಅಧಿಕೃತ ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಅಗತ್ಯಕ್ಕೆ ತಕ್ಕಂತೆ ತಲುಪಿಸಲು ಸಾಧ್ಯವಾಗಲಿದೆ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಲಿಂಗತ್ವ ಅಲ್ಪಸಂಖ್ಯಾತರ ಪ್ರಸ್ತುತ ಸ್ಥಿತಿಗತಿ ಬಗ್ಗೆ ಸಾರ್ವಜನಿಕ ಸಭೆ: ಅತಿಥಿಗಳು: ಎಲ್.ಎನ್. ಮುಕುಂದರಾಜ್, ಭಾಗ್ಯಲಕ್ಷ್ಮಿ, ಕಣ್ಮಣಿ, ಅಲಿಕ್ವಾಜ, ಆಯೋಜನೆ: ಒಂದೆಡೆ, ಸ್ಥಳ: ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್, ಬೆನ್ಸನ್ ಟೌನ್, ಬೆಳಿಗ್ಗೆ 10

‘ಆರ್ಟ್ ಆಫ್ ಗೀವಿಂಗ್ ಡೇ’ ಸಮಾರಂಭ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ವೆಂಕಟೇಶ್ ಎಂ.ವಿ., ಸವಿತಕ್ಕ, ಆಯೋಜನೆ: ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ (ಕೆಐಎಸ್‌ಎಸ್), ಸ್ಥಳ: ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಮನೆಯಂಗಳದಲ್ಲಿ ಮಾತುಕತೆ: ಅತಿಥಿ: ಎಚ್.ಆರ್. ಲೀಲಾವತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4


ಎಚ್‌.ಆರ್‌. ಲೀಲಾವತಿ

‘ಪಯಣ’ ಬಸ್ ಮಾಲೀಕರ ಸಮಾವೇಶ: ಮುಖ್ಯ ಅತಿಥಿ: ನಿತಿನ್ ಗಡ್ಕರಿ, ರಾಮಲಿಂಗಾರೆಡ್ಡಿ, ಎಚ್.ಕೆ. ಪಾಟೀಲ, ಪೊನ್ನಂ ಪ್ರಭಾಕರ್, ಗಣೇಶ್ ಕುಮಾರ್ ಕೆ.ಬಿ., ಎಸ್.ಎಸ್. ಶಿವಶಂಕರ್, ಮಂಡಿಪಲ್ಲಿ ರಾಮಪ್ರಸಾದ್, ರಂಗಸ್ವಾಮಿ, ಸೆಲ್ವಂ, ಮುನಿರತಿನಂ ಎ.ಬಿ., ಆಯೋಜನೆ: ಕರ್ನಾಟಕ ರಾಜ್ಯ ಬಸ್ ಮಾಲೀಕರ ಸಂಘ, ಸ್ಥಳ: ಅನಂತ್ಯ, ಗೇಟ್ ಸಂಖ್ಯೆ 9, ಅರಮನೆ ಮೈದಾನ, ಸಂಜೆ 5

ನಾಕುತಂತಿ ಷಷ್ಟಿಪೂರ್ತಿ ನಾದ–4: ಅತಿಥಿ: ಜಿ.ಬಿ. ಹರೀಶ್, ಉಪಸ್ಥಿತಿ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಮಲ್ಲತ್ತಹಳ್ಳಿ, ಸಂಜೆ 4.30

ಮಹಾಗಣಪತಿ ದೇವರ 37ನೇ ಪ್ರತಿಷ್ಠಾಪನಾ ಮಹೋತ್ಸವದ ಪ್ರಯುಕ್ತ ‘ಸುದರ್ಶನ ಗರ್ವಭಂಗ’, ‘ಕುಶ ಲವ ಕಾಳಗ’ ಯಕ್ಷಗಾನ ಪ್ರಸಂಗ: ಭಾಗವತಿಕೆ: ಸುಬ್ರಾಯ ಹೆಬ್ಬಾರ್, ಮದ್ದಳೆ: ಸಂಪತ್ ಆಚಾರ್ಯ, ಚೆಂಡೆ: ಮನೋಜ್ ಆಚಾರ್ಯ, ಆಯೋಜನೆ: ಯಕ್ಷ ಸಂಜೀವಿನಿ ಟ್ರಸ್ಟ್, ಸ್ಥಳ: ವಿನಾಯಕ ದೇವಸ್ಥಾನ. ಆರ್.ಟಿ. ನಗರ, ಸಂಜೆ 5

ಅಮೃತ ಮಹೋತ್ಸವ ಸಮಾರಂಭ: ಮುಖ್ಯ ಅತಿಥಿ: ಸಿದ್ದರಾಮಯ್ಯ, ಗೌರವ ಅತಿಥಿಗಳು: ಡಿ.ಕೆ. ಶಿವಕುಮಾರ್, ಶರಣಬಸಪ್ಪ ದರ್ಶನಾಪುರ, ಟಿ. ರಘು ಮೂರ್ತಿ, ಪ್ರಿಯಕೃಷ್ಣ, ಅಧ್ಯಕ್ಷತೆ: ಎಂ.ಜಿ. ರಾಜಗೋಪಾಲ್, ಆಯೋಜನೆ: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ), ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಸಂಜೆ 5

ಸಂಸ್ಥಾಪನಾ ಸಮಾರಂಭ: ಸಾನ್ನಿಧ್ಯ: ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ಮುಖ್ಯ ಅತಿಥಿ: ಮೀನಾಕ್ಷಿ ಸಾವಳಗಿ, ಉಪಸ್ಥಿತಿ: ಅರಳುಮಲ್ಲಿಗೆ ಪಾರ್ಥಸಾರಥಿ, ತೇಜಸ್ವಿ ಸೂರ್ಯ, ಶಿವಶ್ರೀ ಸ್ಕಂದಪ್ರಸಾದ್, ಆಯೋಜನೆ: ಮೈತ್ರೇಯಿ ಕನ್ನಡ ಮಹಿಳಾ ಹರಿದಾಸ ಟ್ರಸ್ಟ್, ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನ, ಉತ್ತರಾದಿ ಮಠ, ಬಸವನಗುಡಿ, ಸಂಜೆ 5

ಜಿ.ವಿ. ಕೃಷ್ಣ ಪ್ರಸಾದ್ ಅವರ ಸ್ಮರಣಾರ್ಥ ಸಂಗೀತ ಕಛೇರಿ: ಗಾಯನ: ಅನಘ ಯೋಗಾನಂದ, ಪಿಟೀಲು: ಅಚ್ಯುತ ರಾವ್, ಮೃದಂಗ: ಎನ್. ವಾಸುದೇವ್, ಮೋರ್ಸಿಂಗ್: ಭಾಗ್ಯಲಕ್ಷ್ಮಿ ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀ ರಾಮ ಲಲಿತ ಕಲಾ ಮಂದಿರ, ಬನಶಂಕರಿ 2ನೇ ಹಂತ, ಸಂಜೆ 5.30

ಊಂಜಲ್ ಸಂಗೀತೋತ್ಸವ: ಗಾಯನ: ರಚನಾ ಶರ್ಮ, ಪಿಟೀಲು: ಎಸ್. ಶ್ರೀಹರಿ, ಮೃದಂಗ: ಜಿ. ಲೋಕಪ್ರಿಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ತಿಂಗಳ ನಾಟಕ ಸಂಭ್ರಮ: ಅತಿಥಿ: ಜಿ.ಎನ್. ಮೋಹನ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಡುಪಿಯ ಭೂಮಿಗೀತ ಸಾಂಸ್ಕೃತಿಕ ವೇದಿಕೆಯಿಂದ ‘ದಿ ಫೈರ್’ ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

‘ಮುಖ್ಯಮಂತ್ರಿ’ ನಾಟಕದ 875ನೇ ಪ್ರದರ್ಶನ: ಮುಖ್ಯ ಪಾತ್ರ: ‘ಮುಖ್ಯಮಂತ್ರಿ’ ಚಂದ್ರು, ಕನ್ನಡಕ್ಕೆ ರೂಪಾಂತರ: ಟಿ.ಎಸ್. ಲೋಹಿತಾಶ್ವ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಮುಖ್ಯಮಂತ್ರಿ ಚಂದ್ರು

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು ಕನಕ ನೌಕರರ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿರುವ ಕುರುಬ ಸಮುದಾಯದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ನಂಜುಂಡಪ್ಪ ಅವರು ತಿಳಿಸಿದರು.

ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುವ ನೌಕರರ ಮಕ್ಕಳು ಅರ್ಜಿ ಸಲ್ಲಿಸಿಬೇಕು. ಆಸಕ್ತರು ಮೇ 30ರ ಒಳಗೆ ಅರ್ಜಿ ಸಲ್ಲಿಸಬೇಕು. ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಜಾತಿ ದೃಢೀಕರಣ ಪತ್ರ ಮತ್ತು ಭಾವಚಿತ್ರ ಹಾಗೂ ವಿವರಗಳನ್ನು ಬರೆದು ಅಧ್ಯಕ್ಷ ನಂಜುಂಡಪ್ಪ, ಮೊಬೈಲ್ ಸಂಖ್ಯೆ 99454 69109, ಪ್ರಧಾನ ಕಾರ್ಯದರ್ಶಿ– ವೇದಮೂರ್ತಿ ಮೊಬೈಲ್ ಸಂಖ್ಯೆ 9740110201ಗೆ ವಾಟ್ಸ್‌ಆ್ಯಪ್ ಮಾಡಬಹುದು ಎಂದು ಹೇಳಿದರು.

ಅನುಯಾಯಿಗಳಿಗೆ ಸಿಕ್ಕ ಜಯ: ಇಸ್ಕಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಪ್ರೀಂ ಕೋರ್ಟ್‌ನ ಈ ತೀರ್ಪಿನಿಂದ ಶ್ರೀಲ ಪ್ರಭುಪಾದರ ಅನುಯಾಯಿಗಳಿಗೆ ಮತ್ತು ನಿಜವಾದ ಭಕ್ತರಿಗೆ ಜಯವಾಗಿದೆ' ಎಂದು ಇಸ್ಕಾನ್-ಬೆಂಗಳೂರು ಅಧ್ಯಕ್ಷ ಮಧು ಪಂಡಿತ ದಾಸ್ ಹೇಳಿದ್ದಾರೆ.

'ಶ್ರೀಲ ಪ್ರಭುಪಾದರ ಬೋಧನೆಗೆ ವಿರುದ್ಧವಾಗಿ ಇಸ್ಕಾಂ-ಮುಂಬೈನ ಅಧ್ಯಕ್ಷರು ನಡೆದುಕೊಂಡಿದ್ದರು. ಇಸ್ಕಾನ್-ಬೆಂಗಳೂರಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದ್ದರು. ಅದೆಲ್ಲವೂ ಈಗ ಕೊನೆಯಾಗಿದೆ. ಶ್ರೀಲ ಪ್ರಭುಪಾದರಷ್ಟೇ ಇಸ್ಕಾನ್‌ನ ಏಕಮಾತ್ರ ಆಚಾರ್ಯರು, ಉಳಿದ ಭಕ್ತಾದಿಗಳೆಲ್ಲರೂ ಅವರ ಅನುಯಾಯಿಗಳು ಅಷ್ಟೆ ಎಂಬ ತತ್ವಕ್ಕೆ ಸಿಕ್ಕ ಜಯವಿದು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ಕು ತಿಂಗಳಲ್ಲಿ ಸೂಕ್ತ ವ್ಯವಸ್ಥೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಜಿಬಿಎಗೆ ಶೀಘ್ರದಲ್ಲೇ ಚುನಾವಣೆ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಮೈಸೂರು: 'ಬಿಬಿಎಂಪಿಯನ್ನು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ಎಂದು ಮಾಡಿದ್ದೇವೆ. ಮೀಸಲಾತಿ ನಿಗದಿಪಡಿಸಿ, ಜಿಬಿಎಗೆ ಶೀಘ್ರದಲ್ಲೇ ಚುನಾವಣೆ ನಡೆಸುತ್ತೇವೆ. ಇದಕ್ಕೆ ಬೇಕಾದ ವ್ಯವಸ್ಥೆಯನ್ನೆಲ್ಲಾ ನಾಲ್ಕು ತಿಂಗಳಲ್ಲಿ ಮಾಡುತ್ತೇವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಶೀಘ್ರದಲ್ಲೇ ಸರ್ವಪಕ್ಷ ಸಭೆಯನ್ನೂ ಕರೆಯುವೆ. ಹೇಗೆ ವಿಭಾಗಿಸಬೇಕೆಂಬುದನ್ನೂ ಕೇಳುವೆ. ಚುನಾವಣೆ ವಿಳಂಬ ಮಾಡುವುದರಲ್ಲಿ ಅರ್ಥವಿಲ್ಲ. ಇದು ನಮ್ಮ ಸ್ವಂತದ್ದೇನಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯುತ್ತೇವೆ' ಎಂದರು.

'ಹೊಸ ಬಡಾವಣೆಗಳನ್ನು ಸೇರಿಸುವುದಿಲ್ಲ. ಈಗಿರುವ ವ್ಯಾಪ್ತಿಯಲ್ಲೇ ಜಿಬಿಎ ಅನುಷ್ಠಾನಗೊಳ್ಳುತ್ತದೆ. ಈ ವ್ಯಾಪ್ತಿ ಇಟ್ಟುಕೊಂಡೇ ಚುನಾವಣೆ ನಡೆಸುತ್ತೇವೆ' ಎಂದು ಹೇಳಿದರು.

ಅಷ್ಟೂ ವಿರೋಧಿಸದಿದ್ದರೆ ಹೇಗೆ?: 'ಬೆಂಗಳೂರನ್ನು ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು ಮಾಡಿದ್ದಾರೆ' ಎಂಬ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕೆಗೆ ಪ್ರತಿಕ್ರಿಯಿಸಿ, 'ಅವರೂ ಬೆಂಗಳೂರಿನ ಒಂದು ಭಾಗ. ಪ್ರಮುಖ ನಾಯಕ. ಅವರಿಗೆ ಕೊಡಬೇಕಾದ ಗೌರವ ಕೊಡುತ್ತೇವೆ. ಅವರೆಲ್ಲರ ಸಲಹೆಗಳನ್ನು ಮತ್ತೊಂದು ಬಾರಿ ಪಡೆಯುತ್ತೇನೆ' ಎಂದರು.

ರಾಮನಗರ ಹೆಸರು ಬದಲಾವಣೆ: 'ರಾಮನಗರ ಹೆಸರು ಬದಲಾಯಿಸುವಲ್ಲಿ ವಿಳಂಬವಾಗಿಲ್ಲ. ಎಲ್ಲ ಪ್ರಕ್ರಿಯೆಗಳೂ ನಡೆಯುತ್ತಿವೆ. ಶುಭ ಗಳಿಗೆ-ಮುಹೂರ್ತ ಬರಬೇಕು. ಶೀಘ್ರದಲ್ಲೇ ಬರಲಿದೆ. ಆಗ ಎಲ್ಲವನ್ನೂ ಮಾತನಾಡುತ್ತೇನೆ' ಎಂದರು.

'ಈ ವರ್ಷ ನಿಮಗೆ ದೊಡ್ಡ ಹುದ್ದೆ ಸಿಗುತ್ತದೆಯೇ' ಎಂಬ ಪ್ರಶ್ನೆಗೆ, 'ನಿಮ್ಮೆಲ್ಲರ ಆಶೀರ್ವಾದವಿರಲಿ' ಎಂದು ಹೇಳಿದರು.

ಆಡಳಿತಾತ್ಮಕ ದೃಷ್ಟಿಯಿಂದ ಗ್ರೇಟರ್ ಬೆಂಗಳೂರು: ಸಿ.ಎಂ

ಕೊಪ್ಪಳ: 'ಒಂದೂವರೆ ಕೋಟಿ ಜನಸಂಖ್ಯೆಯಿರುವ ಬೃಹತ್ ಬೆಂಗಳೂರಿನ ಆಡಳಿತವನ್ನು ಒಂದೇ ಮಹಾನಗರ ಪಾಲಿಕೆ ನಿರ್ವಹಣೆ ಮಾಡುವುದು ಕಷ್ಟವಾಗಿದ್ದು, ಆಡಳಿತಾತ್ಮಕ ದೃಷ್ಟಿಯಿಂದ ಬೆಂಗಳೂರಿಗೆ ಮೂರು ಅಥವಾ ಅದಕ್ಕಿಂತಲೂ ಹೆಚ್ಚು ಮಹಾನಗರ ಪಾಲಿಕೆಗಳನ್ನು ರಚಿಸಲು ನಿರ್ಧರಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿಗೆ ಸಮೀಪದ ಬಸಾಪುರದಲ್ಲಿ ಶುಕ್ರವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ವಿಭಾಗಗಳನ್ನು ರಚಿಸಬೇಕು ಎಂದು ಬಿಜೆಪಿಯ ಎಸ್. ಸುರೇಶ್ ಕುಮಾರ್ ನಗರಾಭಿವೃದ್ಧಿ ಸಚಿವರಾಗಿದ್ದ ಸಮಯದಲ್ಲಿಯೇ ಯೋಜಿಸಿದ್ದರು. ಹಿಂದಿನ ಅವಧಿಗೆ ನಾನು ಮುಖ್ಯಮಂತ್ರಿಯಾಗಿದ್ದಾಗ ಸಮಿತಿ ರಚಿಸಿದ್ದೆ. ಆದ್ದರಿಂದ ನಮ್ಮ ಸರ್ಕಾರ ಈಗ ಆ ಚಿಂತನೆಯನ್ನು ಕಾರ್ಯರೂಪಕ್ಕೆ ತರುತ್ತಿದೆ' ಎಂದರು.

ಮಹಾನಗರ ವಿಭಜನೆಗೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಅವರು 'ಕ್ವಾರ್ಟರ್ ಬೆಂಗಳೂರು' ಎಂದು ಟೀಕಿಸಿದ್ದಾರಲ್ಲ ಎನ್ನುವ ಪ್ರಶ್ನೆಗೆ, 'ಅಶೋಕಗೆ ಗೊತ್ತಿರುವುದು ಕ್ವಾರ್ಟರ್ ಮಾತ್ರ' ಎಂದು ತಿರುಗೇಟು ನೀಡಿದರು.

ಜಿಬಿಎ: ಜನಾಭಿಪ್ರಾಯ

'ಜಿಬಿಎ ರಚನೆಯ ನಂತರ ಮುಂದೇನಾಗಬೇಕು'
ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ರಿಯಲ್ ಎಸ್ಟೇಟ್ ಸಂಸ್ಥೆ ಆಗದಿರಲಿ

'ಜಿಬಿಎ' ಕೇವಲ ಮಿರುಗುಟ್ಟುವ ಪುಸ್ತಕವಾಗಿರದೆ ಬೆಂಗಳೂರಿಗರನ್ನು ಹಲವು ದಶಕಗಳಿಂದ ಕಾಡುತ್ತಿರುವ ಪಾದಚಾರಿ ಮಾರ್ಗದ ಒತ್ತುವರಿ ತೆರವು, ಕಸದ ಸಮಸ್ಯೆ ನಿವಾರಣೆ, ಮಳೆ ನೀರು ಕಾಲುವೆ ಸುಧಾರಿಸುವಂತಹ ಆಡಳಿತ ವ್ಯವಸ್ಥೆಯಾಗಬೇಕು. ಐಟಿ ಕಂಪನಿಗಳಿಂದ 'ನಾಗರಿಕ ಸ್ನೇಹಿ' ಸೇವಾ ಸೌಲಭ್ಯಗಳನ್ನು ಪಡೆದು ರಾಷ್ಟ್ರೀಕೃತ ಹಾಗೂ ಪ್ರತಿಷ್ಠಿತ ಬ್ಯಾಂಕುಗಳಲ್ಲಿರುವಂತೆ 'ಕೋರ್ ಬ್ಯಾಂಕಿಂಗ್ ಸಲ್ಯೂಷನ್ (ಸಿಬಿಎಸ್)' ಮಾದರಿಯಲ್ಲಿ 'ಜಿಬಿಎ' ಸೇವೆ ಒದಗಿಸಬೇಕು

ಬಿ. ರಮೇಶ್, ಉತ್ತರಹಳ್ಳಿ

ಪರಭಾಷಿಕರ ಒಲಿಸಲು ಬಂತೇ 'ಗ್ರೇಟರ್'

ಬೃಹತ್ ಬೆಂಗಳೂರು ಹೋಗಿ ಗ್ರೇಟರ್ ಬೆಂಗಳೂರು ಎಂದು ಆಗುವುದಾದರೆ ಬೃಹತ್ ಮತ್ತು ಗ್ರೇಟರ್‌ನ ಅರ್ಥದಲ್ಲಿ ಏನು ವ್ಯತ್ಯಾಸವಿದೆ? ಪರಭಾಷಿಕರನ್ನು ಒಲಿಸಲು ಈ ಪದ ಬಳಸಿದಂತಿದೆ. 'ಗ್ರೇಟರ್' ಆಗಬೇಕಿದ್ದರೆ ಎಲ್ಲ ಕೆಲಸಗಳು ಗ್ರೇಟ್ ಆಗಿರಬೇಕು. ನಗರದಲ್ಲಿ ಸಣ್ಣ ಕೆಲಸಕ್ಕೂ ಕಚೇರಿಗಳಲ್ಲಿ ಗಂಟೆಗಟ್ಟಲೆ ಕಾಯಿಸುತ್ತಾರೆ. ಜಿಬಿಎ ಬಂದಮೇಲಾದರೂ ಈ ಪರಿಸ್ಥಿತಿಗಳು ಬದಲಾಗಲಿ.

ಎಂ.ಕಿತ್ತೀಶ್, ಶಿವರಾಮ ಕಾರಂತ ನಗರ ಎಂಸಿಇಸಿಎಚ್‌ಎಸ್ ಬಡಾವಣೆ

ಹೊಸ ಬಾಟಲಿಯಲ್ಲಿ ಹಳೇ ಮದ್ಯ ಆಗದಿರಲಿ

ನಗರದಲ್ಲಿ ಬಹುತೇಕ ಕೆರೆಗಳು, ರಾಜ ಕಾಲುವೆಗಳು ಮಾಯವಾಗಿ ಮಳೆಗಾಲದಲ್ಲಿ ಜನ ಮನೆ ಬಿಟ್ಟು ಹೊರಬರುವ ಪರಿಸ್ಥಿತಿ ಇದೆ. ಕೆಲವು ಕಡೆ ವಿಪರೀತ ಸಂಚಾರ ದಟ್ಟಣೆಯಿಂದಾಗಿ ಜನರು ರೋಸಿಹೋಗಿದ್ದಾರೆ. ಕಸದ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಸಿಂಗಪುರ, ಇಸ್ರೇಲ್‌ನಂತಹ ದೇಶಗಳಲ್ಲಿ ಆಗಿರುವ ಅಭಿವೃದ್ಧಿಯನ್ನು ಅಧ್ಯಯನ ಮಾಡಿ ವೈಜ್ಞಾನಿಕ ರೀತಿಯಲ್ಲಿ ಜಿಬಿಎ ಕೆಲಸ ಮಾಡಲು ಪಣ ತೊಡಬೇಕು. ಅಭಿವೃದ್ಧಿ ಆಗದೇ ಹೋದರೆ 'ಹೊಸ ಬಾಟಲಿಯಲ್ಲಿ ಹಳೇ ಮದ್ಯ' ಅನ್ನುವ ಗಾದೆ ಮಾತಿನಂತೆ ಆಗಲಿದೆ.

ಡಿ. ಪ್ರಸನ್ನಕುಮಾರ್, ಎಲ್‌ಐಸಿ ಕಾಲೊನಿ

ಬೆಂಗಳೂರು ಕಿರುನಾಟಕೋತ್ಸವ ಸ್ಪರ್ಧೆ

ಪ್ರವರ ಥಿಯೇಟರ್, ಅಶ್ವಘೋಷ ಥಿಯೇಟರ್ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್ ಜಂಟಿಯಾಗಿ 'ಬೆಂಗಳೂರು ಕಿರುನಾಟಕೋತ್ಸವ' 5ನೇ ಆವೃತ್ತಿ ಹಮ್ಮಿಕೊಂಡಿದ್ದು, ತಂಡಗಳ ನೋಂದಣಿಗೆ ಜೂನ್ 27 ಕೊನೆಯ ದಿನವಾಗಿದೆ.

ಈ ನಾಟಕೋತ್ಸವವು 'ಪ್ರಜಾವಾಣಿ' ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ. 'ಸಮಗ್ರತೆ' ನಾಟಕೋತ್ಸವದ ವಿಷಯವಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳು ಈ ವಿಷಯದ ಮೇಲೆ ನಾಟಕಗಳನ್ನು ಪ್ರದರ್ಶಿಸಬೇಕಿದೆ. ಪ್ರಾಥಮಿಕ ಸ್ಪರ್ಧೆ ಜೂನ್ 29 ಹಾಗೂ ಅಂತಿಮ ಹಂತದ ಸ್ಪರ್ಧೆ ಜುಲೈ 12ರಂದು ನಡೆಯಲಿದೆ.

ಅತ್ಯುತ್ತಮ ನಾಟಕ ಪ್ರಶಸ್ತಿ ತೀರ್ಪುಗಾರರ ಹಾಗೂ ಪ್ರೇಕ್ಷಕರ ಆಯ್ಕೆ ಪ್ರತ್ಯೇಕ ಇರಲಿದ್ದು, ಫಲಕ ಹಾಗೂ ತಲಾ ₹10 ಸಾವಿರ ನಗದು ಒಳಗೊಂಡಿದೆ. 'ಆರ್. ನಾಗೇಶ್ ಅತ್ಯುತ್ತಮ ನಿರ್ದೇಶನ', 'ಸಂಚಾರಿ ವಿಜಯ್ ಅತ್ಯುತ್ತಮ ನಟ', 'ಉಮಾಶ್ರೀ ಅತ್ಯುತ್ತಮ ನಟಿ', 'ಅತ್ಯುತ್ತಮ ಕಥೆ', 'ಅತ್ಯುತ್ತಮ ನಾಟಕ ವಿನ್ಯಾಸ', 'ಅತ್ಯುತ್ತಮ ಭಿತ್ತಿಚಿತ್ರ ವಿನ್ಯಾಸ' ಹಾಗೂ 'ಅತ್ಯುತ್ತಮ ನಿರ್ವಹಣೆ' ಪ್ರಶಸ್ತಿಗಳನ್ನು ಈ ನಾಟಕೋತ್ಸವ ಒಳಗೊಂಡಿದೆ. ಈ ಪ್ರಶಸ್ತಿಗಳು ತಲಾ ₹2,500 ನಗದು ಹೊಂದಿವೆ.

ಭಾಗವಹಿಸುವ ಪ್ರತಿ ತಂಡಕ್ಕೂ ರಂಗಸಜ್ಜಿಕೆಯ ಸಮಯ ಸೇರಿ 15 ನಿಮಿಷ ನೀಡಲಾಗುತ್ತದೆ. ನಾಟಕ ಪ್ರದರ್ಶನ ಕನಿಷ್ಠ 10 ನಿಮಿಷವಿರಬೇಕು. ಭಾಗವಹಿಸುವ ಪ್ರತಿ ತಂಡದಲ್ಲೂ ರಂಗದ ಮೇಲೆ ಕನಿಷ್ಠ ಇಬ್ಬರು ಹಾಗೂ ಗರಿಷ್ಠ 8 ಕಲಾವಿದರು ಇರಬೇಕು. ರಂಗತಂಡಗಳು ಮತ್ತು ರಂಗಕರ್ಮಿಗಳು ನೋಂದಾಯಿಸಿಕೊಳ್ಳಬಹುದು. ಬೆಂಗಳೂರು ಹೊರತುಪಡಿಸಿ ಬೇರೆ ಜಿಲ್ಲೆಗಳಿಂದ ಸ್ಪರ್ಧಿಸುವ ತಂಡಗಳಿಗೆ ಪ್ರಾಥಮಿಕ ಹಂತದ ಸ್ಪರ್ಧೆ ಆನ್‌ಲೈನ್‌ನಲ್ಲಿ ನಡೆಯಲಿದೆ ಎಂದು ಕಿರುನಾಟಕೋತ್ಸವದ ಕಲಾತ್ಮಕ ನಿರ್ದೇಶಕ ಹನು ರಾಮಸಂಜೀವ ತಿಳಿಸಿದ್ದಾರೆ.

ಪ್ರತಿ ತಂಡ ₹1 ಸಾವಿರ ಪ್ರವೇಶ ದರವನ್ನು ಪಾವತಿಸಬೇಕು. ಅಂತಿಮ ಸುತ್ತಿಗೆ ಆಯ್ಕೆಯಾಗದ ತಂಡದ ಪ್ರವೇಶ ದರವನ್ನು ಹಿಂತಿರುಗಿಸಲಾಗುತ್ತದೆ. ಅಂತಿಮ ಹಂತದ ಸ್ಪರ್ಧೆಗೆ 6 ತಂಡಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ. ಮೊದಲ ಹಂತದ ಆಯ್ಕೆ ಪ್ರಕ್ರಿಯೆ ಹಾಗೂ ಅಂತಿಮ ಹಂತದ ಸ್ಪರ್ಧೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಹೇಳಿದ್ದಾರೆ.

ವಿವರಕ್ಕೆ: 9902590303 ಅಥವಾ 9686869676 ಸಂಪರ್ಕಿಸಿ.

ಕತ್ತೆಗಳು ಸಾರ್ ಕತ್ತೆಗಳು...

ಮಲ್ಲೇಶ್ವರದಿಂದ ರಾಜಾಜಿನಗರಕ್ಕೆ ಹೋಗುವ ಮುಖ್ಯ ರಸ್ತೆಯ ಡಿವೈಡರ್ ಪಕ್ಕದಲ್ಲಿ ತಾಸುಗಟ್ಟಲೆ ಸಾಲಾಗಿ ನಿಂತ ಕತ್ತೆಗಳು
ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಅನುಮೋದಿತ ನಕ್ಷೆಯಂತೆ ಮಳೆ ನೀರು ಕೊಯ್ಲು, ಎಸ್‌ಟಿಪಿ ಘಟಕ ನಿರ್ಮಿಸಲು ಆದೇಶ

'ಬದಲಾವಣೆಗೆ ಫ್ಲ್ಯಾಟ್ ಮಾಲೀಕರ ಒಪ್ಪಿಗೆ ಅವಶ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೊತ್ತುಪಡಿಸಿದ ಒಂದಿಡೀ ಜಾಗವನ್ನು ವಸತಿ ಸಂಕೀರ್ಣ (ಅಪಾರ್ಟ್‌ಮೆಂಟ್) ನಿರ್ಮಿಸುವ ಉದ್ದೇಶಕ್ಕಾಗಿ ಮಾರಾಟ ಕ್ರಯಪತ್ರ ಮಾಡಿಕೊಂಡ ಮೇಲೆ, ಆ ಜಾಗದಲ್ಲಿ ಅದರ ಭೂ ಮಾಲೀಕರು ಅಲ್ಪ-ಭಾಗವನ್ನು ತಮಗೋಸ್ಕರ ಎಂದು ಉಳಿಸಿಕೊಳ್ಳಲು ಆಗದು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, ಹೊರಮಾವು ಪ್ರದೇಶ ವ್ಯಾಪ್ತಿಯಲ್ಲಿರುವ, 'ಕೀರ್ತಿ ಹಾರ್ಮನಿ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್' ಕಾರ್ಯದರ್ಶಿ ಶಂಕರ್ ಥಾನು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎನ್.ಎಸ್.ಸಂಜಯ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರಕರಣದ ಪ್ರತಿವಾದಿಯಾದ ಜಾಗದ ಮಾಲೀಕ ಹನುಮಂತರೆಡ್ಡಿ ಅವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಹೊಸ ವಸತಿ ಸಂಕೀರ್ಣ ನಿರ್ಮಾಣಕ್ಕೆಂದು ನೀಡಿದ್ದ ಮಂಜೂರಾತಿಯನ್ನು ರದ್ದುಗೊಳಿಸಿದೆ.

'ನಿರ್ಮಾಣ, ಮಾರಾಟ, ನಿರ್ವಹಣೆ ಮತ್ತು ಹಸ್ತಾಂತರ ಪ್ರಕ್ರಿಯೆ ನಿಯಂತ್ರಿಸುವ ನಿಟ್ಟಿನಲ್ಲಿನ, ಕರ್ನಾಟಕ ಅಪಾರ್ಟ್‌ಮೆಂಟ್ಸ್ ಓನರ್‌ಶಿಪ್ ಫ್ಲ್ಯಾಟ್ಸ್ ಕಾಯ್ದೆ-1972ರ ಅಡಿ; ವಸತಿ ಸಂಕೀರ್ಣದಲ್ಲಿ ಫ್ಲ್ಯಾಟ್ ಖರೀದಿಗೆ ಒಪ್ಪಿರುವ ವ್ಯಕ್ತಿಗಳ ಒಪ್ಪಿಗೆ ಇಲ್ಲದೆ ನಿರ್ಮಾಣ ಕಾರ್ಯದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲು ಆಗದು. ಸದರಿ ಪ್ರಕರಣದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 2007ರ ಮಾರ್ಚ್ 29ರಂದು ನೀಡಿರುವ ಅನುಮೋದಿತ ಯೋಜನೆಯಂತೆ (ಪ್ಲ್ಯಾನ್) ರಸ್ತೆಗೆ ಹೊಂದಿಕೊಂಡ ಜಾಗದಲ್ಲಿ ಮಳೆ ನೀರು ಕೊಯ್ಲು ಹಾಗೂ ಕೊಳಚೆ ನೀರು ಶುದ್ಧೀಕರಣ (ಎಸ್‌ಟಿಪಿ) ಘಟಕ ನಿರ್ಮಾಣ ಮಾಡಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಒಂದು ವೇಳೆ ಯೋಜನಾ ಪ್ರಾಧಿಕಾರವು, ಮಳೆ ನೀರು ಕೊಯ್ಲು ಮತ್ತು ಎಸ್‌ಟಿಪಿ ಘಟಕದ ಜಾಗ ಬದಲಾವಣೆಗೆ ಒಪ್ಪಿಕೊಂಡರೆ, ವಸತಿ ಸಂಕೀರ್ಣದಲ್ಲಿ ಫ್ಲ್ಯಾಟ್‌ಗಳನ್ನು ಖರೀದಿ ಮಾಡಲು ಒಪ್ಪಿಕೊಂಡಿರುವವರ ಒಪ್ಪಿಗೆಯನ್ನೂ ಪಡೆಯಬೇಕು' ಎಂದು ನಿರ್ದೇಶಿಸಿದೆ.

ಪ್ರಕರಣವೇನು?: ಮೆಸರ್ಸ್ ಕೀರ್ತಿ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್ (ಬಿಲ್ಡರ್), ಜಾಗದ ಮಾಲೀಕರಾದ ಕೆ.ರಘು ಮತ್ತು ಹನುಮಂತರೆಡ್ಡಿ ಅವರೊಂದಿಗೆ 2005ರ ಜನವರಿ 28ರಂದು ಜಂಟಿ ಅಭಿವೃದ್ಧಿ ಒಪ್ಪಂದ (ಜೆಡಿಎ) ಮಾಡಿಕೊಂಡಿತ್ತು.

ಇದರನ್ವಯ ಜಾಗದ ಮಾಲೀಕರಿಗೆ ಸೇರಿದ 5 ಎಕರೆ 16 ಗುಂಟೆ ಪ್ರದೇಶದಲ್ಲಿ ವಸತಿ ಸಂಕೀರ್ಣ ಅಭಿವೃದ್ಧಿಪಡಿಸಿ, ಒಪ್ಪಂದದ ಅನುಸಾರ ಅಭಿವೃದ್ಧಿಪಡಿಸಿದ ಭಾಗವನ್ನು ಭೂ ಮಾಲೀಕರೊಂದಿಗೆ ಹಂಚಿಕೊಳ್ಳಬೇಕಾಗಿತ್ತು. ಈ ದಿಸೆಯಲ್ಲಿ ಬಿಲ್ಡರ್ ಸಲ್ಲಿಸಿದ್ದ ಯೋಜನೆಗೆ ಬಿಡಿಎ ಅನುಮೋದನೆ ನೀಡಿತ್ತು.

ಯೋಜನೆ ಅನ್ವಯ ಇಡೀ ಜಾಗವನ್ನು ಎರಡು ಭಾಗಗಳಾಗಿ ವಿಂಗಡಿಸಿ, ಅದರಲ್ಲಿ ಎರಡು ರಸ್ತೆಗಳಿಗೆ ಜಾಗವನ್ನು ಮೀಸಲಿಟ್ಟು, ಪ್ರಮುಖ ಜಾಗದಲ್ಲಿ ವಸತಿ ಸಂಕೀರ್ಣ ನಿರ್ಮಿಸಲು ಉದ್ದೇಶಿಸಲಾಗಿತ್ತು. ಜತೆಗೆ 1104.40 ಚದರ ಮೀಟರ್ ಜಾಗದಲ್ಲಿ ಮಳೆ ನೀರು ಕೊಯ್ಲು ಮತ್ತು ಎಸ್‌ಟಿಪಿ ಘಟಕ ನಿರ್ಮಾಣ ಮಾಡಬೇಕಿತ್ತು. ಅದರಂತೆ ಕ್ರಯಪತ್ರವನ್ನೂ ಮಾಡಿಕೊಳ್ಳಲಾಗಿತ್ತು.

ಕ್ರಯಪತ್ರ ಮಾಡಿಕೊಂಡಿದ್ದ ಜಾಗದಲ್ಲಿ ಭೂ ಮಾಲೀಕರು ಸ್ವಲ್ಪ ಭಾಗವನ್ನು ಅಂದರೆ, 1104.04 ಚದರ ಅಡಿ ಜಾಗವನ್ನು ತಾವೇ ಇರಿಸಿಕೊಂಡಿದ್ದರು. ಏತನ್ಮಧ್ಯೆ, ಭೂ ಮಾಲೀಕರು 2018ರ ಏಪ್ರಿಲ್ 3ರಂದು ಬಿಬಿಎಂಪಿಗೆ ಅರ್ಜಿಯೊಂದನ್ನು ಸಲ್ಲಿಸಿ ಹೊಸ ವಸತಿ ಸಂಕೀರ್ಣ ನಿರ್ಮಾಣಕ್ಕೆ ಮಂಜೂರಾತಿ ಕೋರಿ ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು. ಈ ಹೊಸ ವಸತಿ ಸಂಕೀರ್ಣ ನಿರ್ಮಾಣ ಯೋಜನೆಗೆ ಬಿಬಿಎಂಪಿ ಮಂಜೂರಾತಿ ನೀಡಿತ್ತು. ಇದನ್ನು ಪ್ರಶ್ನಿಸಿ ಬಿಲ್ಡರ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಗುಂಡಿಯೇ ಅಪಘಾತಕ್ಕೆ ಕಾರಣ ವಿಮಾ ಕಂಪನಿ ವಾದ ತಿರಸ್ಕೃತ

ಬೆಂಗಳೂರು: 'ರಸ್ತೆ ಅಪಘಾತಕ್ಕೆ ಚಾಲಕನ ವೇಗ ಮತ್ತು ನಿರ್ಲಕ್ಷ್ಯ ಮಾತ್ರವಲ್ಲ, ರಸ್ತೆ ಗುಂಡಿಯೂ ಕಾರಣವಾಗಿದೆ. ಹೀಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿ ಮತ್ತು ಗುತ್ತಿಗೆದಾರನನ್ನೂ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಬೇಕು' ಎಂಬ 'ಐಸಿಐಸಿಐ ಲೋಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ' ಕೋರಿಕೆಯನ್ನು ಹೈಕೋರ್ಟ್ ಸ್ಪಷ್ಟವಾಗಿ ತಿರಸ್ಕರಿಸಿದೆ.

'ನಿರ್ಲಕ್ಷ್ಯ ಮಾತ್ರವಲ್ಲದೇ ಅದರ ಕೊಡುಗೆಯ ಪಾಲುದಾರರೂ ಆದ ಇತರರನ್ನೂ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಬೇಕು' ಎಂದು ಕೋರಿ ವಿಮಾ ಕಂಪನಿ ಸಲ್ಲಿಸಿದ್ದ ಎರಡು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

'ಅಪಘಾತಕ್ಕೆ ರಸ್ತೆಯಲ್ಲಿ ಗುಂಡಿಗಳು ಇದ್ದದ್ದೂ ಕಾರಣ. ಗುತ್ತಿಗೆದಾರರು ರಸ್ತೆಗೆ ಡಾಂಬರು ಹಾಕುವಾಗ ಕಳಪೆ ಕಾಮಗಾರಿ ಮಾಡಿದ ಪರಿಣಾಮ ಗುಂಡಿಗಳು ಬಿದ್ದು, ಇದೇ ಅಪಘಾತಕ್ಕೆ ಕಾರಣವಾಗಿದೆ' ಎಂಬ ವಿಮಾ ಕಂಪನಿಯ ವಾದವನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿರುವಂತೆ ಕಾರು ಚಾಲಕನ ವೇಗ ಮತ್ತು ಅಜಾಗರೂಕತೆಯಿಂದ ಅಪಘಾತ ಸಂಭವಿಸಿದೆ. ಅಪಘಾತ ನಡೆದ ಕೂಡಲೇ ಕಾರಿನ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಪ್ರಕರಣ ಸಮಗ್ರ ನಿರ್ಲಕ್ಷ್ಯದ ಪ್ರಕರಣವೇ ಹೊರತು, ಪೂರಕ ನಿರ್ಲಕ್ಷ್ಯದ ಪ್ರಕರಣವಲ್ಲ' ಎಂದು ವಿವರಿಸಿದೆ.

ಸಿಬಿಎಸ್‌ಇ: ನಾರಾಯಣ ಸಂಸ್ಥೆ ಸಾಧನೆ

ಪ್ರಜಾವಾಣಿ ವಾರ್ತೆ

ಸ್ಪಂದನಾ

ವಖಿನ್ ಎಸ್.

ತ್ರಿಶಾ ಘೋಷ್

ರೇಯಾನ್ಶ್ ದೇವ್ವಾನಿ

ಪಾರ್ಥ ಬನ್ಸಾಲ್

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12 ನೇ ತರಗತಿ ಪರೀಕ್ಷೆಯಲ್ಲಿ ನಾರಾಯಣ ಸ್ಕೂಲ್ಸ್ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

10ನೇ ತರಗತಿ ಯಲ್ಲಿ ಸ್ಪಂದನಾ ಎ.ಎಂ., ಪಾರ್ಥ ಬನ್ಸಾಲ್ ಮತ್ತು ತ್ರಿಶಾ ಘೋಷ್ 500ಕ್ಕೆ 498 ಅಂಕಗಳನ್ನು ಗಳಿಸಿದರೆ, 12ನೇ ತರಗತಿಯಲ್ಲಿ ವಖಿನ್ ಎಸ್. ಮತ್ತು ರೇಯಾನ್ಶ್ ದೇವ್ವಾನಿ 495 ಅಂಕಗಳನ್ನು ಪಡೆದಿದ್ದಾರೆ.

10ನೇ ತರಗತಿಯಲ್ಲಿ 17 ವಿದ್ಯಾರ್ಥಿಗಳು 495ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದರೆ, 111 ವಿದ್ಯಾರ್ಥಿಗಳು 490 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಒಟ್ಟಾರೆ ಉತ್ತೀರ್ಣದ ಪ್ರಮಾಣ ಶೇ 99.6ರಷ್ಟಿದೆ. 12ನೇ ತರಗತಿಯಲ್ಲಿ 17 ವಿದ್ಯಾರ್ಥಿಗಳು 490ಕ್ಕೂ ಅಧಿಕ ಅಂಕಗಳನ್ನು ಪಡೆದಿದ್ದಾರೆ.

ಈ ಸಾಧನೆಗೆ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳನ್ನು ಅಭಿನಂದಿಸಿರುವ ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಡಾ.ಪಿ. ಸಿಂಧೂರ ನಾರಾಯಣ ಮತ್ತು ಶ್ರೀಮತಿ ಪಿ.ಶರಣಿ ನಾರಾಯಣ, 'ದಶಕಗಳ ಅನುಭವ ಮತ್ತು ಸಂಶೋಧನೆಯ ಮೂಲಕ ಪರಿಪೂರ್ಣ ಶಿಕ್ಷಣ ಒದಗಿಸುತ್ತಿದ್ದೇವೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ದೇಶಗಳಿಗೆ ಸರ್ವಪಕ್ಷ ನಿಯೋಗ

ಪಾಕ್ ಪ್ರಾಯೋಜಿತ ಭಯೋತ್ಪಾದನೆ ವಿಶ್ವದ ಮುಂದಿಡಲು ರಾಜತಾಂತ್ರಿಕ ಹೆಜ್ಜೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯ ಮುಖವನ್ನು ವಿಶ್ವವೇದಿಕೆಯಲ್ಲಿ ಬಹಿರಂಗಪಡಿಸಲು ಸರ್ವ ಪಕ್ಷಗಳ ನಿಯೋಗವನ್ನು ವಿವಿಧ ದೇಶಗಳಿಗೆ ಮೇ 22 ಅಥವಾ 23ರಂದು ಕಳುಹಿಸಿಕೊಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ವಿರೋಧ ಪಕ್ಷ ಕಾಂಗ್ರೆಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಸಂಸದರು, ಹಿರಿಯ ನಾಯಕರು ನಿಯೋಗದಲ್ಲಿ ಇರುತ್ತಾರೆ. ತಮ್ಮ ಪಕ್ಷಗಳ ಸದಸ್ಯರನ್ನು ನಿಯೋಗದಲ್ಲಿ ಕಳುಹಿಸಿಕೊಡಲು ರಾಜಕೀಯ ಪಕ್ಷಗಳು ಸಮ್ಮತಿಸಿವೆ ಎಂದು ಮೂಲಗಳು ತಿಳಿಸಿವೆ.

5ರಿಂದ 6 ಸದಸ್ಯರಿರುವ ನಿಯೋಗಗಳು 10 ದಿನ ವಿವಿಧ ದೇಶಗಳಿಗೆ ಭೇಟಿ ನೀಡಲಿವೆ. ಸರ್ಕಾರವು ನಿಗದಿಪಡಿಸಿದಂತೆ, ಸಂಸದರು ವಿವಿಧ ದೇಶಗಳಿಗೆ ಭೇಟಿ ನೀಡಿ, ಅಲ್ಲಿನ ರಾಜಕೀಯ ಪಕ್ಷಗಳು ಮತ್ತು ವಿವಿಧ ಗುಂಪುಗಳೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ನಿಯೋಗವು ತೆರಳುವ ಮುನ್ನ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಸದಸ್ಯರಿಗೆ ಅಗತ್ಯ ಮಾಹಿತಿ ಒದಗಿಸಲಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿವಾದಾತ್ಮಕ ಹೇಳಿಕೆಗಳ ಆಧಾರದಲ್ಲಿ ಕಾಶ್ಮೀರ ಸಮಸ್ಯೆಯನ್ನು ಅಂತರರಾಷ್ಟ್ರೀಯಗೊಳಿಸಲು ಪಾಕಿಸ್ತಾನ ನಡೆಸುತ್ತಿರುವ ಪ್ರಯತ್ನವನ್ನು ತಡೆಯಲು ಕೇಂದ್ರ ಸರ್ಕಾರವು ಈ ಕಸರತ್ತು ನಡೆಸುತ್ತಿದೆ. ಭಾರತವು ಗಡಿಯಾಚೆಗಿನ ಭಯೋತ್ಪಾದನೆಯ ಬಲಿಪಶುವಾಗಿದೆ. ಪಹಲ್ಗಾಮ್‌ನಲ್ಲಿ ಭಾರತವನ್ನು ಹೇಗೆ ಗುರಿಯಾಗಿಸಲಾಗಿತ್ತು ಎಂದು ನಿಯೋಗಗಳು ವಿವರಿಸಲಿವೆ ಎಂದು ಮೂಲಗಳು ತಿಳಿಸಿವೆ.

ಆಪರೇಷನ್ ಸಿಂಧೂರವು ಭಯೋತ್ಪಾದಕರ ನೆಲೆಗಳನ್ನು ಗುರಿಯಾಗಿಸಿ ಹತ್ತಿಕ್ಕುವುದಾಗಿದೆ ಎನ್ನುವುದನ್ನು ನಿಯೋಗಗಳು ವಿವಿಧ ದೇಶಗಳಿಗೆ ಮನವರಿಕೆ ಮಾಡಲಿವೆ.

ಬಿಜೆಪಿ, ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಎನ್‌ಸಿಪಿ (ಎಸ್‌ಪಿ), ಜೆಡಿಯು, ಬಿಜೆಡಿ, ಸಿಪಿಎಂ ಮತ್ತು ಇತರ ಕೆಲವು ಪಕ್ಷಗಳ ಸಂಸದರು ಈ ನಿಯೋಗಗಳ ಭಾಗವಾಗಲಿದ್ದಾರೆ.

ಯಾವ ದೇಶಕ್ಕೆ ಯಾರ ನೇತೃತ್ವದ ನಿಯೋಗ?: ದಕ್ಷಿಣ ಕೊರಿಯಾ, ಜಪಾನ್ ಮತ್ತು ಸಿಂಗಪುರ ಒಳಗೊಂಡಂತೆ ದಕ್ಷಿಣ ಮತ್ತು ಆಗ್ನೇಯ ಏಷ್ಯಾಕ್ಕೆ ಏಳು ಸಂಸದರ ನಿಯೋಗ ಭೇಟಿ ನೀಡಲಿದ್ದು, ಇದನ್ನು ವಿದೇಶಾಂಗ ವ್ಯವಹಾರಗಳ ಮಾಜಿ ಸಚಿವ ಸಲ್ಮಾನ್ ಖುರ್ಷಿದ್ ಮುನ್ನಡೆಸಲಿದ್ದಾರೆ.

ಬಾರಾಮತಿ ಕ್ಷೇತ್ರದ ಸಂಸದೆ ಸುಪ್ರಿಯಾ ಸುಳೆ ನೇತೃತ್ವದ ನಿಯೋಗವು ಒಮಾನ್, ಈಜಿಪ್ಟ್, ಕೆನ್ಯಾ ಮತ್ತು ದಕ್ಷಿಣ ಆಫ್ರಿಕಾ ಸೇರಿ ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾಕ್ಕೆ ಭೇಟಿ ಕೊಡುವ ಸಾಧ್ಯತೆಯಿದೆ.

ಕಾಂಗ್ರೆಸ್ ನಾಯಕ ಮನೀಷ್ ತಿವಾರಿ ನೇತೃತ್ವದ ನಿಯೋಗವು ಯುರೋಪ್ ಅಥವಾ ಪಶ್ಚಿಮ ಏಷ್ಯಾದ ರಾಷ್ಟ್ರಗಳಿಗೆ ಭೇಟಿ ನೀಡಲಿದೆ. ಶಶಿ ತರೂರ್ ಅವರು ಮತ್ತೊಂದು ನಿಯೋಗವನ್ನು ಮುನ್ನಡೆಸುವ ಸಾಧ್ಯತೆಯಿದೆ.

ಶಿವಸೇನಾದ (ಯುಬಿಟಿ) ಸಂಸದೆ ಪ್ರಿಯಾಂಕಾ ಚತುರ್ವೇದಿ ನೇತೃತ್ವದ ನಿಯೋಗ ಸೌದಿ ಅರೇಬಿಯಾ, ಅಲ್ಜೀರಿಯಾ, ಕುವೈತ್ ಮತ್ತು ಬಹರೇನ್‌ಗೆ ಭೇಟಿ ನೀಡಲಿದೆ. ಈ ನಿಯೋಗದಲ್ಲಿ ಕಾಂಗ್ರೆಸ್‌ನ ಅಮರ್ ಸಿಂಗ್ ಕೂಡ ಇರಲಿದ್ದಾರೆ.

ಅನುರಾಗ್ ಠಾಕೂರ್ ಅವರು ಆಫ್ರಿಕಾಕ್ಕೆ ಭೇಟಿ ನೀಡುವ ನಿಯೋಗದ ಭಾಗವಾಗಿದ್ದರೆ, ಅಪರಾಜಿತಾ ಸಾರಂಗಿ ಮತ್ತು ವಿಕ್ರಮ್‌ಜಿತ್ ಸಾಹ್ನಿ ಅವರು ಆಗ್ನೇಯ ಏಷ್ಯಾಕ್ಕೆ ಭೇಟಿ ನೀಡುವ ನಿಯೋಗದಲ್ಲಿ ಇರಲಿದ್ದಾರೆ ಎಂದು ಮೂಲಗಳು ಹೇಳಿವೆ.

'ರಾಷ್ಟ್ರೀಯ ಹಿತಾಸಕ್ತಿ ವಿಚಾರದಲ್ಲಿ ಕಾಂಗ್ರೆಸ್ ಸದಾ ಮುಂದು'

ನಿಯೋಗಗಳ ಬಗ್ಗೆ ಸರ್ಕಾರದಿಂದ ಯಾವುದೇ ಅಧಿಕೃತ ಮಾಹಿತಿ ಇಲ್ಲದಿದ್ದರೂ ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಈ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೊಂದಿಗೆ ಮಾತನಾಡಿದ್ದಾರೆ. ಪಕ್ಷವು ಖಂಡಿತವಾಗಿಯೂ ಈ ನಿಯೋಗಗಳ ಭಾಗವಾಗಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಕಾಂಗ್ರೆಸ್ ರಾಷ್ಟ್ರೀಯ ಹಿತಾಸಕ್ತಿಯ ವಿಚಾರ ಬಂದಾಗ ಯಾವಾಗಲೂ ಮುಂಚೂಣಿಯಲ್ಲಿ ನಿಲ್ಲುತ್ತದೆ. ಬಿಜೆಪಿಯಂತೆ ರಾಷ್ಟ್ರೀಯ ಭದ್ರತೆಯ ಸಮಸ್ಯೆಗಳನ್ನು ಎಂದಿಗೂ ರಾಜಕೀಯಗೊಳಿಸುವುದಿಲ್ಲ' ಎಂದು ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

'ನೀಟ್-ಯುಜಿ' ಫಲಿತಾಂಶಕ್ಕೆ ಮಧ್ಯಂತರ ತಡೆ

ಇಂದೋರ್ (ಪಿಟಿಐ): ವೈದ್ಯಕೀಯ ಪದವಿ ಕೋರ್ಸ್‌ಗೆ ಪ್ರವೇಶ ಕಲ್ಪಿಸುವ ನೀಟ್-ಯುಜಿ ಫಲಿತಾಂಶವನ್ನು ಪ್ರಕಟಿಸದಂತೆ ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠ ಶುಕ್ರವಾರ ಮಧ್ಯಂತರ ತಡೆಯಾಜ್ಞೆ ನೀಡಿತು.

'ಪರೀಕ್ಷಾ ಕೇಂದ್ರದಲ್ಲಿ ವಿದ್ಯುತ್ ವ್ಯತ್ಯಯವಾಗಿದ್ದ ಕಾರಣ ಪ್ರವೇಶ ಪರೀಕ್ಷೆಯಲ್ಲಿ ನನ್ನ ಸಾಧನೆಗೆ ತೊಡಕಾಗಿದೆ' ಎಂದು ವಿದ್ಯಾರ್ಥಿನಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಿದ ಪೀಠವು ಈ ಆದೇಶ ನೀಡಿತು.

'ಮತ್ತೊಮ್ಮೆ ಪರೀಕ್ಷೆಯನ್ನು ಎದುರಿಸಲು ನನಗೆ ಅವಕಾಶ ಕಲ್ಪಿಸಬೇಕು' ಎಂದು ವಿದ್ಯಾರ್ಥಿನಿ ಮನವಿ ಮಾಡಿದ್ದಾರೆ. ಮಧ್ಯಂತರ ತಡೆಯಾಜ್ಞೆಯ ಪರಿಣಾಮವು ಈ ಫಲಿತಾಂಶದ ನಿರೀಕ್ಷೆಯಲ್ಲಿದ್ದ ಸುಮಾರು 21 ಲಕ್ಷ ವಿದ್ಯಾರ್ಥಿಗಳ ಮೇಲೆ ಉಂಟಾಗಲಿದೆ. ನೀಟ್-ಯುಜಿ ಪರೀಕ್ಷೆಯು ಮೇ 4ರಂದು ನಡೆದಿತ್ತು. ಹವಾಮಾನ ವೈಪರೀತ್ಯದ ಪರಿಣಾಮ ಆ ದಿನ ಇಂದೋರ್‌ನ ಹಲವು ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಿತ್ತು.

ನ್ಯಾಯಮೂರ್ತಿ ಸುಬೋಧ್ ಅಭ್ಯಂಕರ್, ಮುಂದಿನ ವಿಚಾರಣೆವರೆಗೆ ಫಲಿತಾಂಶ ಪ್ರಕಟಿಸಬಾರದು ಎಂದು ಆದೇಶ ನೀಡಿದರು. ಜೂನ್ 30ಕ್ಕೆ ಪ್ರಕರಣದ ವಿಚಾರಣೆ ನಡೆಯಲಿದೆ.

ವಕೀಲರ ಸಂಘದ ನಡೆ ಖಂಡಿಸಿದ ಸಿಜೆಐ

ನವದೆಹಲಿ(ಪಿಟಿಐ): ನಿವೃತ್ತರಾಗಿರುವ ನ್ಯಾಯಮೂರ್ತಿ ಬೇಲಾ ಎಂ.ತ್ರಿವೇದಿ ಅವರಿಗಾಗಿ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳದಿರುವ ಸುಪ್ರೀಂ ಕೋರ್ಟ್ ವಕೀಲರ ಸಂಘದ (ಎಸ್‌ಸಿಬಿಎ) ನಡೆಯನ್ನು ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ಶುಕ್ರವಾರ ಖಂಡಿಸಿದರು.

'ನಾನು ಸರಳವಾಗಿ ಹೇಳಲು ಬಯಸುತ್ತೇನೆ. ಎಸ್‌ಸಿಬಿಎ ಇಂತಹ ನಿರ್ಧಾರವನ್ನು ಕೈಗೊಳ್ಳಬಾರದಿತ್ತು. ಇದನ್ನು ನಾನು ಬಹಿರಂಗವಾಗಿ ಖಂಡಿಸುತ್ತೇನೆ' ಎಂದು ಹೇಳಿದ್ದಾರೆ.

ನ್ಯಾಯಮೂರ್ತಿ ಬೇಲಾ ಎಂ.ತ್ರಿವೇದಿ ಅವರನ್ನು ಬೀಳ್ಕೊಡಲು ಹಮ್ಮಿಕೊಂಡಿದ್ದ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಿಜೆಐ ಗವಾಯಿ ನೇತೃತ್ವದ ನ್ಯಾಯಪೀಠದ ವತಿಯಿಂದ ಹಮ್ಮಿಕೊಂಡಿದ್ದ ಈ ಸಮಾರಂಭದಲ್ಲಿ ಪೀಠದ ಮತ್ತೊಬ್ಬ ಸದಸ್ಯ ಆಗಸ್ಟೀನ್ ಜಾರ್ಜ್ ಮಸೀಹ್ ಕೂಡ ಇದ್ದರು.

ನ್ಯಾಯಮೂರ್ತಿ ಮಸೀಹ್ ಕೂಡ ಸಂಘದ ನಡೆಯನ್ನು ಖಂಡಿಸಿದರು.

ಯುದ್ಧ ಕೈದಿಗಳ ವಿನಿಮಯಕ್ಕೆ ಉಭಯ ರಾಷ್ಟ್ರಗಳ ಸಮ್ಮತಿ

ರಷ್ಯಾ- ಉಕ್ರೇನ್: ಕದನ ವಿರಾಮ ವಿಫಲ

ಇಸ್ತಾಂಬುಲ್ (ಎಎಫ್‌ಪಿ): ಟರ್ಕಿಯ ಮಧ್ಯಸ್ಥಿಕೆಯಲ್ಲಿ ಶುಕ್ರವಾರ ನಡೆದ ಶಾಂತಿ ಮಾತುಕತೆ ವೇಳೆ ರಷ್ಯಾ ಮತ್ತು ಉಕ್ರೇನ್ ತಲಾ ಒಂದು ಸಾವಿರ ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಳ್ಳಲು ಒಪ್ಪಿದವು. ಆದರೆ, ಕದನ ವಿರಾಮ ಸಂಬಂಧ ಒಪ್ಪಂದಕ್ಕೆ ಬರುವಲ್ಲಿ ಉಭಯ ರಾಷ್ಟ್ರಗಳು ವಿಫಲವಾದವು.

ಯುದ್ಧ ಕೊನೆಗೊಳಿಸುವ ದಿಸೆಯಲ್ಲಿ 2022ರ ನಂತರ ಮೊದಲ ಮಾತುಕತೆ ಇಸ್ತಾಂಬುಲ್‌ನಲ್ಲಿ ನಡೆಯಿತು. ಬಹುನಿರೀಕ್ಷಿತ ಮಾತುಕತೆ ಮುಗಿದಾಗ, ಮೂರು ವರ್ಷಗಳ ಯುದ್ಧವನ್ನು ಕೊನೆಗೊಳಿಸುವ ವಿಷಯದಲ್ಲಿ ಮಹತ್ವದ ಬೆಳವಣಿಗೆ ಸಾಧಿಸಿರುವ ಕೆಲ ಲಕ್ಷಣಗಳು ಕಂಡುಬಂದಿವೆ.

ಸಂಭವನೀಯ ಕದನ ವಿರಾಮದ ಬಗ್ಗೆ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದಾಗಿ, ನೇರ ಮಾತುಕತೆಗೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವಿನ ಸಂಭವನೀಯ ಭೇಟಿಯ ಬಗ್ಗೆಯೂ ಉಭಯ ರಾಷ್ಟ್ರಗಳ ನಿಯೋಗದ ಪ್ರತಿನಿಧಿಗಳು ಚರ್ಚಿಸಿದರು.

ಉಕ್ರೇನ್‌ನ ದೊಡ್ಡ ಭೂಭಾಗವನ್ನು ನಾಶಪಡಿಸಿದ ಮತ್ತು ಲಕ್ಷಾಂತರ ಜನರು ನೆಲೆ ಕಳೆದುಕೊಳ್ಳಲು ಕಾರಣವಾದ ಈ ಸಂಘರ್ಷವನ್ನು ನಿಲ್ಲಿಸಲು ಉಕ್ರೇನ್ ಬೇಷರತ್ತಾದ ಕದನ ವಿರಾಮವನ್ನು ಕೋರಿತು. ಆದರೆ, ಇದನ್ನು ನಿರಂತರ ತಿರಸ್ಕರಿಸುತ್ತಾ ಬಂದಿರುವ ರಷ್ಯಾ, ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಳ್ಳುವ ಒಪ್ಪಂದಕ್ಕೆ ಸಮ್ಮತಿಸಿತು.

'ಸಂಭವನೀಯ ಕದನ ವಿರಾಮದ ಬಗ್ಗೆ ಎರಡೂ ಕಡೆಯವರು ತಮ್ಮ ದೃಷ್ಟಿಕೋನವನ್ನು ತೆರೆದಿಟ್ಟಿದ್ದೇವೆ. ಪುಟಿನ್ ಮತ್ತು ಝೆಲೆನ್‌ಸ್ಕಿ ನಡುವೆ ನೇರ ಮಾತುಕತೆಯ ಸಭೆಗೆ ಅವಕಾಶ ನೀಡುವಂತೆ ಉಕ್ರೇನ್ ಇಟ್ಟಿರುವ ಕೋರಿಕೆಯನ್ನು ರಷ್ಯಾ ಗಮನಿಸಿದೆ. ಒಟ್ಟಾರೆ ಈ ಮಾತುಕತೆಯ ಫಲಿತಾಂಶದಿಂದ ತೃಪ್ತಿ ಹೊಂದಿದ್ದೇವೆ. ಅಲ್ಲದೆ, ನಿರಂತರ ಸಂಪರ್ಕ ಮುಂದುವರಿಸಲು ನಾವು ಸಿದ್ಧರಿದ್ದೇವೆ' ಎಂದು ರಷ್ಯಾದ ಸಂಧಾನಕಾರ ವ್ಲಾದಿಮಿರ್ ಮೆಡಿನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್ ಮುಖ್ಯ ಸಂಧಾನಕಾರರಾದ ರಕ್ಷಣಾ ಸಚಿವ ರುಸ್ತೆಮ್ ಉಮರೋವ್, ಪ್ರತ್ಯೇಕ ಹೇಳಿಕೆಯಲ್ಲಿ, ಕೈದಿಗಳ ವಿನಿಮಯವನ್ನು ದೃಢಪಡಿಸಿದರು. ಕದನ ವಿರಾಮ ಮತ್ತು ಸಂಭವನೀಯ ಅಧ್ಯಕ್ಷೀಯ ಸಭೆಯ ಬಗ್ಗೆ ಚರ್ಚಿಸಲಾಗಿದೆ ಎಂದೂ ಹೇಳಿದರು.

ಟರ್ಕಿ ಸಚಿವ ಫಿದಾನ್ ಮಧ್ಯಸ್ಥಿಕೆ

ಇಸ್ತಾಂಬುಲ್‌ನ ಡೊಲ್ಮಾಬಾಸ್ ಅರಮನೆಯ ಸಭಾಂಗಣದಲ್ಲಿ ಟರ್ಕಿಯ ವಿದೇಶಾಂಗ ವ್ಯವಹಾರಗಳ ಸಚಿವ ಹಕನ್ ಫಿದಾನ್ , ರಷ್ಯಾ ಮತ್ತು ಉಕ್ರೇನ್ ನಿಯೋಗಗಳನ್ನು ಪರಸ್ಪರ ಮುಖಾಮುಖಿಯಾಗಿಸಿ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿರುವ ದೃಶ್ಯಗಳು ಮಾಧ್ಯಮಗಳಲ್ಲಿ ಪ್ರಸಾರವಾಗಿವೆ.

ಮಾತುಕತೆಗಳನ್ನು ವಿಫಲಗೊಳಿಸುವ ಪ್ರಯತ್ನದಲ್ಲಿ ರಷ್ಯಾ ತೊಡಗಿದ್ದು, ಸ್ವೀಕಾರಾರ್ಹವಲ್ಲದ ಬೇಡಿಕೆಗಳನ್ನು ಮಾತುಕತೆಯ ವೇಳೆ ಮಂಡಿಸುತ್ತಿದೆ ಎಂದು ಉಕ್ರೇನ್ ಮೂಲವೊಂದು ಸುದ್ದಿಸಂಸ್ಥೆಗೆ ತಿಳಿಸಿದೆ.

ಉಭಯತ್ರರು ಮತ್ತೆ ಭೇಟಿಯಾಗಲು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಕದನ ವಿರಾಮದ ವಿಚಾರಗಳನ್ನು ಲಿಖಿತ ರೂಪದಲ್ಲಿ ಪ್ರಸ್ತುತಪಡಿಸಲಾಗುವುದು

ಹಕನ್ ಫಿದಾನ್, ಟರ್ಕಿಯ ವಿದೇಶಾಂಗ ವ್ಯವಹಾರಗಳ ಸಚಿವ

'ಗೈಡ್‌ವೈರ್ ಟೆಕ್ನಾಲಜಿ ಲ್ಯಾಬ್ಸ್'ಗಾಗಿ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಿಇಎಸ್ ವಿಶ್ವವಿದ್ಯಾಲಯ, ರೇವಾ ವಿಶ್ವವಿದ್ಯಾಲಯ, ಚೆನ್ನೈನ ಎಸ್‌ಆರ್‌ಎಂ ವಿಶ್ವವಿದ್ಯಾಲಯ, ಚೆನ್ನೈ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೊಯಮತ್ತೂರಿನ ಅಮೃತ ವಿಶ್ವ ವಿದ್ಯಾಪೀಠಂ ಜೊತೆ ಪಾಲುದಾರಿಕೆಯಲ್ಲಿ 'ಗೈಡ್‌ವೈರ್ ಟೆಕ್ನಾಲಜಿ ಲ್ಯಾಬ್ಸ್' ಆರಂಭಿಸುವುದಾಗಿ ಗೈಡ್‌ವೈರ್ ಇಂಡಿಯಾ ಘೋಷಿಸಿದೆ.

ಪಿಇಎಸ್ ವಿಶ್ವವಿದ್ಯಾಲಯದ ಕುಲಸಚಿವ ಕೆ.ಎಸ್. ಶ್ರೀಧರ್, ರೇವಾ ವಿಶ್ವವಿದ್ಯಾಲಯದ ಕುಲಪತಿ ಸಂಜಯ್ ಚಿಟ್ನಿಸ್, ಎಸ್‌ಆರ್‌ಎಂ ವಿಶ್ವವಿದ್ಯಾಲಯದ ವೃತ್ತಿ ಕೇಂದ್ರದ ನಿರ್ದೇಶಕ ವೆಂಕಟ ಶಾಸ್ತ್ರಿ, ಚೆನ್ನೈ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನಾವೀನ್ಯ ಮತ್ತು ಟ್ರಸ್ಟಿ ನಿರ್ದೇಶಕ ಗೋಕುಲಕೃಷ್ಣನ್ ಶ್ರೀರಾಮ್ ಮತ್ತು ಅಮೃತ ವಿಶ್ವ ವಿದ್ಯಾಪೀಠದ ಅಕಾಡೆಮಿಯಾ ಇಂಡಸ್ಟ್ರಿ ಪಾಲುದಾರಿಕೆ ನಿರ್ದೇಶಕ ಸುರೇಶ್ ಕೊಡೂರ್ ಅವರು ಪಾಲುದಾರಿಕೆಗೆ ಸಹಿ ಹಾಕಿದರು.

ಈ ವಿಶ್ವವಿದ್ಯಾನಿಲಯಗಳಲ್ಲಿ ಜಾರಿಗೆ ತರಲಿರುವ ಗೈಡ್‌ವೈರ್ ಇಂಟೆಲಿಜೆಂಟ್ ಟೆಕ್ ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ಗೈಡ್‌ವೈರ್‌ನ ಪ್ರಮುಖ ಪರಿಹಾರಗಳು ಮತ್ತು 'ಕುಬರ್ನೆಟ್ಸ್', 'ಡಾಕರ್' ಮತ್ತು 'ಗೋ' ನಂತಹ ತಂತ್ರಜ್ಞಾನಗಳಲ್ಲಿ ಉದ್ಯಮ-ಸಂಬಂಧಿತ ಕೌಶಲಗಳಿಗೆ ಮಾನ್ಯತೆಯನ್ನು ನೀಡಲಿದೆ.

'ಗೈಡ್‌ವೈರ್ ಟೆಕ್ನಾಲಜಿ ಲ್ಯಾಬ್‌ಗಳ ಪ್ರಾರಂಭವು ನಮ್ಮ ವಿಶಾಲ ವಿಸ್ತರಣಾ ತಂತ್ರದೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ. ನಮ್ಮ ಪಾಲುದಾರ ಕಂಪನಿಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ವಿವಿಧ ವಿಶ್ವವಿದ್ಯಾಲಯಗಳಿಗೆ ವಿಸ್ತರಿಸುವುದು, ಆ ಮೂಲಕ ಮುಂದಿನ ಪೀಳಿಗೆಯ ತಜ್ಞರನ್ನು ಬೆಳೆಸುವುದು ನಮ್ಮ ಗುರಿ' ಎಂದು ಗೈಡ್‌ವೈರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಆಂಜಿ ಎಸ್. ತಿಳಿಸಿದರು.

ನಗರದ ಪಿಇಎಸ್ ವಿಶ್ವವಿದ್ಯಾಲಯ, ರೇವಾ ವಿಶ್ವವಿದ್ಯಾಲಯ, ಚೆನ್ನೈಯ ಎಸ್‌ಆರ್‌ಎಂ ವಿಶ್ವವಿದ್ಯಾಲಯ, ಚೆನ್ನೈ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೊಯಮತ್ತೂರಿನ ಅಮೃತ ವಿಶ್ವ ವಿದ್ಯಾಪೀಠಂ ಪಾಲುದಾರಿಕೆಯಲ್ಲಿ 'ಗೈಡ್‌ವೈರ್ ಟೆಕ್ನಾಲಜಿ ಲ್ಯಾಬ್ಸ್' ಪ್ರಾರಂಭಿಸಲು ಗೈಡ್‌ವೈರ್ ಇಂಡಿಯಾ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು

ಪ್ರೈಮ್‌ನಲ್ಲಿ ಮನದ ಕಡಲು

ಯೋಗರಾಜ್ ಭಟ್ ನಿರ್ದೇಶನದ, ಇ.ಕೃಷ್ಣಪ್ಪ ನಿರ್ಮಾಣ ಮಾಡಿರುವ 'ಮನದ ಕಡಲು' ಸಿನಿಮಾ ಅಮೆಜಾನ್ ಪ್ರೈಮ್ ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗಿದೆ. ಸುಮುಖ, ರಾಶಿಕಾ ಶೆಟ್ಟಿ ಹಾಗೂ ಅಂಜಲಿ ಅನೀಶ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ.

ನಾವು ನೋಡಿದ ಸಿನಿಮಾ

ಟಕಿಲಾ

- ನಿರ್ಮಾಣ: ನಾಗಚಂದ್ರ
- ನಿರ್ದೇಶನ: ಕೆ.ಪ್ರವೀಣ್ ನಾಯಕ್
- ತಾರಾಗಣ: ಧರ್ಮ ಕೀರ್ತಿರಾಜ್, ನಿಖಿತಾ ಸ್ವಾಮಿ, ನಾಗೇಂದ್ರ ಅರಸ್ ಮತ್ತಿತರರು

ವಂಚನೆ, ನಂಬಿಕೆ ಅಪನಂಬಿಕೆಗಳ ಸುತ್ತ...

ರವಿ, ಅಪ್ಸರ ಬಹಳ ಪ್ರೀತಿಯಿಂದ ಬದುಕುತ್ತಿದ್ದ ಜೋಡಿ. ಉದ್ಯಮಿಆಗಿರುವ ರವಿ ಎಲ್ಲರನ್ನೂ ಸುಲಭವಾಗಿ ನಂಬುವಷ್ಟು ಒಳ್ಳೆಯವನು. ಈ ಒಳ್ಳೆಯತನವೇ ವೈಯಕ್ತಿಕ ಜೀವನಕ್ಕೆ ಮುಳುವಾಗುತ್ತದೆ. ನಂಬಿಕೆ, ಅಪನಂಬಿಕೆಗಳ ಸುತ್ತಲಿನ ಕಥೆಯನ್ನು ಹೊಂದಿರುವ ಚಿತ್ರವಿದು. ಈ ಕಥೆ ಹೇಳಲು ಬಳಸಿರುವ ವಿಧಾನ ಅತ್ಯಂತ ಪೇಲವವಾಗಿದೆ. ಹಸಿಬಿಸಿ ಸನ್ನಿವೇಶಗಳಿದ್ದರೆ ಜನ ಬರುತ್ತಾರೆ ಎಂಬ ಹದಿನೈದು ವರ್ಷಗಳ ಹಿಂದಿನ ನಂಬಿಕೆಗೆ ನಿರ್ದೇಶಕರು ಜೋತು ಬಿದ್ದಂತೆ ಕಾಣುತ್ತದೆ. ಕಥೆಗೆ ಅಗತ್ಯವೇ ಇಲ್ಲದ ಇಂಥ ದೃಶ್ಯಗಳು ಒಂದು ಹಂತದಲ್ಲಿ ಕಿರಿಕಿರಿ ಮೂಡಿಸುತ್ತವೆ.

ಕಥೆಯ ಎಳೆಯನ್ನು ಗಟ್ಟಿಯಾಗಿ ಕಟ್ಟಿಕೊಡುವ ಯತ್ನ ಇಡೀ ಸಿನಿಮಾದುದ್ದಕ್ಕೂ ಆಗಿಲ್ಲ. ಮೊದಲಾರ್ಧದಲ್ಲಿ ನಾಯಕ ರವಿ, ಖಳನಾಯಕ ವರುಣ್ ಪಾತ್ರಗಳ ಪರಿಚಯದಲ್ಲಿಯೇ ಮುಗಿದು ಹೋಗುತ್ತದೆ. ಇಂಟರ್‌ವಲ್‌ನವರೆಗೂ ಸಿನಿಮಾ ಕಥೆ ಏನಾಗಿರಬಹುದು? ಚಿತ್ರದಲ್ಲಿ ಏನು ನಡೆಯುತ್ತಿದೆ ಎಂಬದನ್ನು ಊಹಿಸಲೂ ಸಾಧ್ಯವಾಗುವುದಿಲ್ಲ! ಹಾಗಂತ ಪಾತ್ರಗಳಲ್ಲಿಯೂ ಗಟ್ಟಿತನವಿಲ್ಲ. ರವಿಯಾಗಿ ಧರ್ಮ ಕೀರ್ತಿರಾಜ್ ಕಾಣಿಸಿಕೊಂಡಿದ್ದಾರೆ. ಒಳ್ಳೆಯವ, ಬೇರೆಯವರು ಮೋಸ ಮಾಡಿದ್ದು ಗೊತ್ತಾಗುವುದಿಲ್ಲ, ಎಲ್ಲರಿಗೂ ಸಹಾಯ ಮಾಡುವವನು ಎಂಬುದನ್ನು ನಿರೂಪಿಸುವ ದೃಶ್ಯಗಳೇ ಹೆಚ್ಚಿವೆ. ಅಪ್ಸರ ಆಗಿ ನಿಖಿತಾ ಸ್ವಾಮಿ ಕಾಣಿಸಿಕೊಂಡಿದ್ದಾರೆ. ಇವರ ಪಾತ್ರ ಹಸಿಬಿಸಿ ದೃಶ್ಯಗಳಿಗೆ ಸೀಮಿತವಾಗಿದೆ. ಖಳನಾಯಕ ವರುಣ್ ಆಗಿ ಸುಮನ್ ಶರ್ಮಾ ಕಾಣಿಸಿಕೊಂಡಿದ್ದಾರೆ. ಕಣ್ಣಿಗೆ ಬೀಳುವ ಹುಡುಗಿಯರನ್ನೆಲ್ಲ ಬುಟ್ಟಿಗೆ ಹಾಕಿಕೊಳ್ಳುವುದೇ ಈ ಪಾತ್ರದ ಕೆಲಸ.

ಬೆಟ್ಟಕ್ಕೆ ಟ್ರೆಕ್ಕಿಂಗ್ ಹೋದಾಗ ನಾಯಕ ರವಿ ಕಾಲುಜಾರಿ ಬೀಳುತ್ತಾನೆ. ಅದು ಕೊಲೆ ಯತ್ನ ಎಂಬುದು ನಂತರ ಗೊತ್ತಾಗುತ್ತದೆ. ಬಹಳ ಪ್ರೀತಿಯಿಂದಿರುವ ಪತ್ನಿ ಅಪ್ಸರಾಳೆ ಗಂಡನಿಗೆ ಮೋಸ ಮಾಡುತ್ತಾಳೆ. ಏಕೆ ಮತ್ತು ಇದರ ನಂತರ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ದ್ವಿತೀಯಾರ್ಧ. ಪಾತ್ರಗಳೇ ಗಟ್ಟಿಯಿಲ್ಲದೇ ಪಾತ್ರಧಾರಿಗಳ ನಟನೆಯೂ ಪೇಲವ ಅನ್ನಿಸುತ್ತದೆ. ಪೊಲೀಸ್ ಅಧಿಕಾರಿ ಹಾಗೂ ನಾಯಕನ ಸ್ನೇಹಿತವಾಗಿ ನಾಗೇಂದ್ರ ಅರಸ್, ಖಳನಟನಾಗಿ ಕೋಟೆ ಪ್ರಭಾಕರ್ ಗಮನ ಸೆಳೆಯುತ್ತಾರೆ. ಆದರೆ ಅವರ ಪಾತ್ರಕ್ಕೆ ಹೆಚ್ಚು ತೆರೆಯ ಅವಧಿಯಿಲ್ಲ.

ಸಿನಿಮಾದಲ್ಲಿ ಅದ್ದೂರಿತನಕ್ಕೆ ಕೊರತೆಯಿಲ್ಲ. ಪಾರ್ಟಿ, ಆಫೀಸ್, ಮನೆ ದೃಶ್ಯಗಳನ್ನು ಛಾಯಾಚಿತ್ರಗ್ರಾಹಕ ಪಿ.ಕೆ.ಎಚ್. ದಾಸ್ ವರ್ಣರಂಜಿತವಾಗಿಸಿದ್ದಾರೆ. ಆದರೆ ಸಾಕಷ್ಟು ಭಾಗಗಳಲ್ಲಿ ಹಿನ್ನೆಲೆ ಸಂಗೀತ ಕಥೆಗೆ ಪೂರಕವೆನಿಸುವುದಿಲ್ಲ. ಕೆಲವು ಕಡೆ ಇದ್ದಕ್ಕಿದ್ದಂತೆ ಹಿನ್ನೆಲೆ ಸಂಗೀತ ಮುಗಿದು ಹೋಗುತ್ತದೆ. ಹೇಳುತ್ತಿರುವುದು ಯಾವ ಜಾನರ್‌ನ ಕಥೆ ಮತ್ತು ಇದನ್ನು ಯಾವ ರೀತಿ ಹೇಳಬೇಕೆಂಬ ಸ್ಪಷ್ಟತೆ ನಿರ್ದೇಶಕರಲ್ಲಿ ಇಲ್ಲದಿರುವುದು ಚಿತ್ರದುದ್ದಕ್ಕೂ ಕಾಣಿಸುತ್ತದೆ.

–ವಿನಾಯಕ ಕೆ.ಎಸ್.

'ಪ್ರಚಾರ ಮಾಡಿದಷ್ಟೂ ಸಿನಿಮಾ ನೋಡ್ತಾರೆ'

ದುನಿಯಾವಿಜಯ್

'ಸಿನಿಮಾದ ಸೋಲು, ಗೆಲುವು ನಿರ್ಮಾಪಕರ ಕೈಯಲ್ಲೇ ಇದೆ. ದೊಡ್ಡ ಮಟ್ಟದಲ್ಲಿ ಪ್ರಚಾರ ಮಾಡದೇ ಇದ್ದರೆ ಯಾರೂ ಸಿನಿಮಾಗೆ ಬರುವುದಿಲ್ಲ. ಪ್ರಚಾರ ಮಾಡಿದಷ್ಟೂ ಸಿನಿಮಾ ನೋಡ್ತಾರೆ'–ಇದು ನಟ ದುನಿಯಾ ವಿಜಯ್ ಅಭಿಮತ.

ನಿರ್ದೇಶಕ ಎಸ್.ನಾರಾಯಣ್ ನಿರ್ದೇಶನದ, ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖಪಾತ್ರದಲ್ಲಿ ನಟಿಸಿರುವ 'ಮಾರುತ' ಸಿನಿಮಾದ ಮೊದಲ ಲಿರಿಕಲ್ ಹಾಡಿನ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ವಿಜಯ್, 'ಸಿನಿಮಾದ ಬಗ್ಗೆ ಪ್ರಚಾರ ಮಾಡಿದಷ್ಟು ಜನ ನೋಡುತ್ತಾರೆ. 'ಭೀಮ' ಸಿನಿಮಾದ ಪ್ರಚಾರಕ್ಕೆ ಪಟ್ಟ ಕಷ್ಟ ನನಗೇ ಗೊತ್ತು. ಮಲಯಾಳದವರಿಗೆ ಬೆಂಗಳೂರು ಒಳ್ಳೆಯ ವಾಸ್ತು ಆಗಿದೆ. ಅವರಿಲ್ಲಿ ಮಾಡಿದ ಸಿನಿಮಾಗಳೆಲ್ಲವೂ ಸೂಪರ್‌ಹಿಟ್. ಇದಕ್ಕೆ ಪ್ರಚಾರವೇ ಕಾರಣವಿರಬಹುದು' ಎಂದರು.

'ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಸಂಬಂಧಗಳು ಇನ್ನೂ ಹಾಗೇ ಇವೆ. ಈ ಸಂಬಂಧಗಳ ಮೇಲೆಯೇ ಸಿನಿಮಾ ಮಾಡಿ ಸೈ ಎನಿಸಿಕೊಂಡ ನಿರ್ದೇಶಕರು ಎಸ್.ನಾರಾಯಣ್. 'ಮಾರುತ' ಇಡೀ ಕುಟುಂಬ ಜೊತೆಯಾಗಿ ಕುಳಿತು ನೋಡಬಹುದಾದ ಸಿನಿಮಾ. ನಾರಾಯಣ್ ಅವರು ಕೆಟ್ಟ ಸಿನಿಮಾಗಳನ್ನು ತೆಗೆದಿಲ್ಲ. ಸಂದೇಶವಿರುವ ಸಿನಿಮಾಗಳೇ ಇವರದ್ದು. ಕೌಟುಂಬಿಕ ಸಿನಿಮಾವೊಂದನ್ನು ಮಾಡಿ, ನಾನೇ ನಟಿಸುತ್ತೇನೆ' ಎಂದು ನಾರಾಯಣ್ ಅವರಿಗೆ ಇದೇ ಸಂದರ್ಭದಲ್ಲಿ ವಿಜಯ್ ಹೇಳಿದರು.

'ಇದು ಚಂಡಮಾರುತ'

'ದುನಿಯಾ ವಿಜಯ್ ಚಿತ್ರತಂಡಕ್ಕೆ ಸೇರ್ಪಡೆ ಆಗುವವರೆಗೂ ಶೀರ್ಷಿಕೆ ಇಟ್ಟಿರಲಿಲ್ಲ. ಅವರು ಬಂದ ನಂತರ 'ಮಾರುತ' ಎಂಬ ಶೀರ್ಷಿಕೆ ಇಡಲಾಯಿತು. ನಾವಿಬ್ಬರು ಹಿಂದೆ 'ಚಂಡ' ಸಿನಿಮಾ ಮಾಡಿದ್ದೆವು. ಈಗ 'ಮಾರುತ' ಮಾಡಿದ್ದೇವೆ. ಎರಡು ಸೇರಿ ಯಶಸ್ಸಿನ 'ಚಂಡಮಾರುತ' ಆಗುವ ಭರವಸೆ ಇದೆ. ಪೋಷಕರು ಮಕ್ಕಳ ಚಲನವಲನದ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಅವರ ಕೈಯಲ್ಲಿರುವ ಮೊಬೈಲ್ ಚಟುವಟಿಕೆಗಳ ಬಗ್ಗೆ ಗಮನವಿಡಬೇಕು. ವಾರಕ್ಕೊಮ್ಮೆಯಾದರೂ ಬಿಡುವು ಮಾಡಿಕೊಂಡು ಮಕ್ಕಳ ಜೊತೆ ಸಮಯ ಕಳೆಯಬೇಕು. ಅವರ ಮನಸ್ಸಿನ ಆಸೆಗಳು, ಬಯಕೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಬೇಕು. ಏಕೆಂದರೆ ಅವರು ನಿಮ್ಮ ಸ್ವತ್ತು. ಅದೇ ಮಕ್ಕಳು ಈ ದೇಶಕ್ಕೆ ಸಂಪತ್ತು. ಇದೇ ಸಾಲುಗಳ ಮೇಲೆ ಚಿತ್ರದ ಕಥೆಯಿದೆ' ಎಂದರು ಎಸ್. ನಾರಾಯಣ್.

ಕೆ.ಮಂಜು ಹಾಗೂ ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಿಸಿದ್ದಾರೆ. ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಿದ್ದಾರೆ.

ಶ್ರೇಯಸ್, ಬೃಂದಾ

ಸಮಾಜಕ್ಕೆ ಸಂದೇಶವಿರುವ ಚಿತ್ರ

'ಸಮಾಜಕ್ಕೆ ಒಂದೊಳ್ಳೆಯ ಸಂದೇಶ ನೀಡುವ ಕಥೆಯನ್ನು ನಿರ್ದೇಶಕರು ಮಾಡಿಕೊಂಡಿದ್ದಾರೆ. ಶ್ರೇಯಸ್, ಬೃಂದಾ, ತಾರಾ, ಸಾಧುಕೋಕಿಲ, ಪ್ರಮೋದ್ ಶೆಟ್ಟಿ, ರಂಗಾಯಣ ರಘು, ಶರತ್ ಲೋಹಿತಾಶ್ವ ಮುಂತಾದವರು ತಾರಾಬಳಗದಲ್ಲಿದ್ದಾರೆ. ವಿಶೇಷ ಪಾತ್ರದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ಅಭಿನಯಿಸಿದ್ದಾರೆ' ಎಂದು ಮಾಹಿತಿ ನೀಡಿದರು ನಿರ್ಮಾಪಕ ಕೆ.ಮಂಜು.

ಬಿಡುಗಡೆಯಾಯ್ತು 'ಸೂರ್ಯ'ನ ಹಾಡು

ಪ್ರೇಮಕಥೆಯನ್ನು ಹೊಂದಿರುವ 'ಸೂರ್ಯ' ಚಿತ್ರದ 'ಕೆಂಪಾನ ಗಲ್ಲದ ಹುಡುಗಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾಗರ್ ದಾಸ್ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಯುವಕನೊಬ್ಬ ತನ್ನ ಪ್ರೀತಿಯನ್ನು ಪಡೆದುಕೊಳ್ಳಲು ಏನೆಲ್ಲ ಹೋರಾಟ, ಸಾಹಸ ಮಾಡುತ್ತಾನೆ ಎಂಬುದೇ ಚಿತ್ರಕಥೆ. ಇದೊಂದು ಮಾಸ್ ಲವ್‌ಸ್ಟೋರಿ. ಸೂರ್ಯ ನಾಯಕನ ಹೆಸರು. ಬೆಂಗಳೂರು ಸುತ್ತಮುತ್ತ ಹಾಗೂ ಪುಣೆಯಲ್ಲಿ ಚಿತ್ರೀಕರಣ ನಡೆಸಿದ್ದೇವೆ. ಚಿತ್ರದಲ್ಲಿ ಒಂದು ಉತ್ತರ ಕರ್ನಾಟಕ ಶೈಲಿಯ ಹಾಡು ಮಾಡಬೇಕು ಅಂದುಕೊಂಡಾಗ ಈ ಹಾಡು ಸಿದ್ಧವಾಯಿತು. ಜೂನ್ ಅಥವಾ ಜುಲೈನಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದೆ' ಎಂದರು ನಿರ್ದೇಶಕರು..

ಈ ಗೀತೆಗೆ ರವೀಂದ್ರ ಸೊರಗಾವಿ, ಸ್ಫೂರ್ತಿ ಧ್ವನಿ ಆಗಿದ್ದಾರೆ. ಶ್ರೀಶ ಸಾಸ್ತಾ ಸಂಗೀತ ನಿರ್ದೇಶನವಿದೆ. ಐದು ಹಾಡುಗಳಿದ್ದು, ಬಹದ್ದೂರ್ ಚೇತನ್, ಯೋಗರಾಜ್ ಭಟ್ ಮುಂತಾದವರ ಸಾಹಿತ್ಯವಿದೆ. ಮನುರಾಜ್ ಛಾಯಾಚಿತ್ರಗ್ರಹಣವಿದೆ. ಬೆಳಗಾವಿ ಮೂಲದ ಬಸವರಾಜ ಬೆಣ್ಣೆ ಹಾಗೂ ರವಿ ಬೆಣ್ಣೆ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಯುವನಟ ಪ್ರಶಾಂತ್‌ಗೆ ಹರ್ಷಿತಾ ಜೋಡಿಯಾಗಿದ್ದಾರೆ. ಟಿ.ಎಸ್. ನಾಗಾಭರಣ, ಬಲ ರಾಜವಾಡಿ, ಭಜರಂಗಿ ಪ್ರಸನ್ನ, ಆರ್ಮುಗಂ ರವಿಶಂಕರ್, ಶ್ರುತಿ, ಪ್ರಮೋದ್ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ.

ಪ್ರಶಾಂತ್, ಹರ್ಷಿತಾ

ಗಣತಿದಾರ ಶಿಕ್ಷಕ ಅಮಾನತು

ಲಿಂಗಸುಗೂರು (ರಾಯಚೂರು ಜಿಲ್ಲೆ): ಒಳಮೀಸಲಾತಿ ಸಮೀಕ್ಷೆಯ ಜಾತಿ ಕಾಲಂನಲ್ಲಿ 'ಹಿಂದೂ ಲಂಬಾಣಿ' ಬದಲು 'ಆದಿ ಆಂಧ್ರ' ಎಂದು ನಮೂದಿಸಿ ಕರ್ತವ್ಯ ಲೋಪ ಎಸಗಿದ್ದ ಗಣತಿದಾರ ಶಿಕ್ಷಕ ಸೋಮಪ್ಪ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಕೆ.ನಿತೀಶ ಅವರು ಶುಕ್ರವಾರ ಆದೇಶಿಸಿದ್ದಾರೆ.

ತಾಲ್ಲೂಕಿನ ನಾಗಲಾಪೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಗ್ಗಾಪೂರು ತಾಂಡಾದಲ್ಲಿ ಸಮೀಕ್ಷೆ ಮಾಡುವಾಗ ಶಿಕ್ಷಕ ಸೋಮಪ್ಪ ಅವರು ಜಾತಿ ಕಾಲಂನಲ್ಲಿ ಹಿಂದೂ ಲಂಬಾಣಿ ಎಂದು ನಮೂದಿಸದೇ ಆದಿ ಆಂಧ್ರ ಎಂದು ತಪ್ಪಾಗಿ ನಮೂದಿಸಿದ್ದಾರೆ ಎಂದು ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ನೀಡಿದ ವರದಿ ಆಧರಿಸಿ ಜಿಲ್ಲಾಧಿಕಾರಿ ಅಮಾನತು ಮಾಡಿದ್ದಾರೆ.

ಕ್ರಿಮಿನಾಶಕ ಕುಡಿಸಿ ಕೊಲೆ: 10 ಜನರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಜಮೀನಿನಲ್ಲಿ ಸಾಗುವಳಿ ಮಾಡುವ ವಿಚಾರಕ್ಕೆ ವಕ್ತಿಯೊಬ್ಬರಿಗೆ ಕ್ರಿಮಿನಾಶಕ ಕುಡಿಸಿ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಮಹಿಳೆಯರು ಸೇರಿ ಒಟ್ಟು 10 ಅಪರಾಧಿಗಳಿಗೆ ಇಲ್ಲಿಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ತಾಲ್ಲೂಕಿನ ಹನಮಗುಡ್ಡ ಹೊಸೂರಿನಲ್ಲಿ ಹೊಲ ಸಾಗುವಳಿ ಮಾಡುವ ವಿಚಾರವಾಗಿ 2019ರ ಜನವರಿ 1ರಂದು ಅಮರೇಶ ಅವರಿಗೆ ಬಲವಂತವಾಗಿ ಕ್ರಿಮಿನಾಶಕ ಕುಡಿಸಿ ಆರೋಪಿಗಳು ಕೊಲೆ ಮಾಡಿದ್ದರು.

ಬಸಪ್ಪ ಹುಲಗಪ್ಪ, ಶರಣಪ್ಪ ಗೌಂಡಿ, ಹುಲಗಪ್ಪ ಗೌಂಡಿ, ಅಮರೇಶ ಗೌಂಡಿ, ದೇವಪ್ಪ ಗೌಂಡಿ, ಶಂಕ್ರಮ್ಮ ಗೌಂಡಿ, ಯಲ್ಲಮ್ಮ ಭೋವಿ, ಶರಣಪ್ಪ ಭೋವಿ, ಹನುಮವ್ವ ಶರಣಪ್ಪ ಹಾಗೂ ವಿನೋದ ಗೌಂಡಿ ವಿರುದ್ಧ ಮುದಗಲ್ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಸ್ಕಿ ಸಿಪಿಐ ಚನ್ನಯ್ಯ ಹಿರೇಮಠ ತನಿಖೆ ನಡೆಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಧೀಶ ಬಿ.ಬಿ.ಜಕಾತಿ ಅವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ತಲಾ ₹37,500 ದಂಡ ವಿಧಿಸಿ ಶುಕ್ರವಾರ ಆದೇಶಿಸಿದ್ದಾರೆ.

ಹೂಡಿಕೆ ಆಮಿಷ: ₹2.3 ಕೋಟಿ ವಂಚನೆ

ಉಡುಪಿ: ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಪಡೆಯಬಹುದೆಂದು ಆಮಿಷವೊಡ್ಡಿ ₹2.3 ಕೋಟಿ ವಂಚಿಸಿರುವ ಕುರಿತು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಯಾನಂದ ಎಂಬುವವರನ್ನು ಅಪರಿಚಿತರು 'ದಿ ವೆಲ್ತ್ ಆರ್ಕಿಟೆಕ್ಟ್ಸ್' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿದ್ದು, ಆ ಗ್ರೂಪ್‌ನಲ್ಲಿ ಕೋಪರ್ನಿಕ್ ಡಿಮ್ಯಾಟ್ ಖಾತೆ ತೆರೆದು ಸ್ಟಾಕ್ ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡುವ ಬಗ್ಗೆ ಸಂದೇಶಗಳು ಬರುತ್ತಿದ್ದವು. ಅದರಂತೆ ಏ.1ರಿಂದ ಮೇ 13ರವರೆಗೆ ಜಯಾನಂದ ಅವರು ಅಪರಿಚಿತರು ನೀಡಿದ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹2.30 ಕೋಟಿ ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಚಂದಿರನ ಅಂಗಳದ ಅಧ್ಯಯನಕ್ಕೆ ಮಾನವ

ಒಂದನೇ ಪುಟದಿಂದ...

ಗಗನಯಾತ್ರಿಗಳನ್ನು ಹೊತ್ತೊಯ್ಯುವುದರಿಂದ ಭಾರತೀಯ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ 'ಚಂದ್ರಯಾನ–5' ಮೈಲಿಗಲ್ಲು ಸೃಷ್ಟಿಸಲಿದೆ ಎಂದು ಇಸ್ರೊ ಅಭಿಪ್ರಾಯಪಟ್ಟಿದೆ.

ಜಪಾನ್‌ನ ಎಚ್ 3-24 ಎಲ್ ಉಡ್ಡಯನ ವಾಹನದ ಮೂಲಕ ಚಂದ್ರಯಾನ-5/ಲುಪೆಕ್ಸ್ ಉಡಾವಣೆಗೊಳ್ಳಲಿದೆ. ಇಸ್ರೊ ನಿರ್ಮಿತ ಲ್ಯಾಂಡರ್ ಮತ್ತು ಜಪಾನ್‌ನ ಮಿತ್ಸುಬಿಷಿ ನಿರ್ಮಿತ ರೋವರ್ ಪಯಣ ಬೆಳೆಸಲಿದೆ. ಅಲ್ಲದೆ ಅಧ್ಯಯನಕ್ಕೆ ಅಗತ್ಯವಿರುವ ಉಪಕರಣಗಳೂ ಇರಲಿವೆ. ಈ ಯೋಜನೆಗೆ ಅಗತ್ಯವಿರುವ ಹಣವನ್ನು ನೀಡಲು ಕೇಂದ್ರ ಸರ್ಕಾರ ಮಾರ್ಚ್‌ನಲ್ಲಿ ಒಪ್ಪಿಗೆ ನೀಡಿದೆ.

'ಚಂದ್ರನ ದಕ್ಷಿಣಧ್ರುವದಲ್ಲಿ ನೌಕೆಯನ್ನು ಇಳಿಸಲು ಉದ್ದೇಶಿಸಿರುವ ಪ್ರದೇಶ, ಉಪಕರಣಗಳ ಸಾಮರ್ಥ್ಯ, ಯೋಜನೆಯ ವಿನ್ಯಾಸ ಹಾಗೂ ಭೂಮಿಯಿಂದ ಸಂವಹನ ಸಾಧಿಸುವ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು' ಎಂದು ಇಸ್ರೊ ಕೇಂದ್ರ ಕಚೇರಿಯ ವಿಜ್ಞಾನ ಕಾರ್ಯಕ್ರಮಗಳ ನಿರ್ದೇಶಕ ಡಾ.ತೀರ್ಥ ಪ್ರತಿಮ್ ದಾಸ್ ವಿವರಿಸಿದರು.

ನಿಯಮ ರೂಪಿಸಲು 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ನ್ಯಾಯಾಲಯಗಳ ಆಡಳಿತಾಧಿಕಾರಿಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿ ನಿಯಮಗಳನ್ನು ರಚಿಸಬೇಕು. ಇಲ್ಲವೇ ಹಾಲಿ ನಿಯಮಗಳಿಗೆ ತಿದ್ದುಪಡಿ ತರಬೇಕು. ಅನುಮೋದನೆಗಾಗಿ ಇವುಗಳನ್ನು ಸಂಬಂಧಿಸಿದ ರಾಜ್ಯಗಳಿಗೆ ಮೂರು ತಿಂಗಳ ಒಳಗಾಗಿ ಸಲ್ಲಿಸಬೇಕು ಎಂದು ಎಲ್ಲ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಆಗಸ್ಟಿನ್ ಜಾರ್ಜ್ ಮಸೀಹ್ ಹಾಗೂ ಕೆ.ವಿನೋದಚಂದ್ರನ್ ಅವರು ಇದ್ದ ನ್ಯಾಯಪೀಠ ಈ ನಿರ್ದೇಶನ ನೀಡಿದೆ.

13ನೇ ಹಣಕಾಸು ಆಯೋಗದ ಶಿಫಾರಸಿನಂತೆ, ನ್ಯಾಯಾಧೀಶರು/ನ್ಯಾಯಾಲಯಗಳಿಗೆ ಆಡಳಿತಕ್ಕೆ ಸಂಬಂಧಿಸಿ ನೆರವು ನೀಡುವುದಕ್ಕಾಗಿ ಈ ಹುದ್ದೆಗಳನ್ನು ಸೃಜಿಸಲಾಗಿದೆ. ಜಿಲ್ಲಾ ಮತ್ತು ಹೈಕೋರ್ಟ್‌ಗಳಲ್ಲಿ 'ನ್ಯಾಯಾಲಯ ಆಡಳಿತಾಧಿಕಾರಿ'ಗಳನ್ನು ನೇಮಕ ಮಾಡಲಾಗುತ್ತದೆ.

'ಬಿಜೆಪಿಯಿಂದ ಸೇನೆಗೆ ಅಪಮಾನ'

ನವದೆಹಲಿ (ಪಿಟಿಐ): ಭಾರತೀಯ ಸೇನೆಯನ್ನು ಬಿಜೆಪಿ ಅಪಮಾನ ಮಾಡಿದೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದ್ದು, ಸೇನಾ ಪಡೆಗಳ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿರುವ ಮಧ್ಯಪ್ರದೇಶದ ಉಪ ಮುಖ್ಯಮಂತ್ರಿ ಜಗದೀಶ್ ದೇವಡಾ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡುವಾಗ ದೇವಡಾ ಅವರು, 'ಭಯೋತ್ಪಾದನೆಯನ್ನು ಪೋಷಿಸುವವರಿಗೆ ನೀಡಿದ ತಕ್ಕ ಉತ್ತರಕ್ಕಾಗಿ ನಾವು ಪ್ರಧಾನಿಯವರಿಗೆ ಕೃತಜ್ಞತೆ ಹೇಳಲು ಬಯಸುತ್ತೇವೆ. ಪ್ರಧಾನಿ ಮೋದಿ ಜಿ ಅವರ ಪಾದಗಳಿಗೆ ಇಡೀ ದೇಶ, ದೇಶದ ಸೇನೆ ಮತ್ತು ಸೈನಿಕರು ತಲೆಬಾಗುತ್ತಾರೆ...' ಎಂದು ಹೇಳಿಕೆ ನೀಡಿದ್ದರು.

> **ಇಡೀ ದೇಶದ ಜನರು ಸೇನೆಯ ಶೌರ್ಯದ ಬಗ್ಗೆ ಹೆಮ್ಮೆಪಡುತ್ತಾರೆ. ಆದರೆ ಬಿಜೆಪಿಯವರು ಸೇನೆಯನ್ನು ಅವಮಾನಿಸುತ್ತಿದ್ದಾರೆ**
> **ಪ್ರಿಯಾಂಕಾ ಗಾಂಧಿ ವಾದ್ರಾ**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಆಪರೇಷನ್ ಸಿಂಧೂರ ಕುರಿತು ಮಾಧ್ಯಮಗೋಷ್ಠಿಗಳಲ್ಲಿ ಸಶಸ್ತ್ರ ಪಡೆಗಳ ಪ್ರಮುಖ ಮುಖವಾಗಿ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರೊಂದಿಗೆ ಪಾಲ್ಗೊಂಡಿದ್ದ ಕರ್ನಲ್ ಸೋಫಿಯಾ ಖುರೇಷಿ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರು ಟೀಕೆಗೆ ಗುರಿಯಾದ ಕೆಲವೇ ದಿನಗಳಲ್ಲಿ ದೇವಡಾ ಅವರಿಂದ ಈ ಹೇಳಿಕೆಗಳು ಬಂದಿವೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, 'ಬಿಜೆಪಿ ನಾಯಕರು ನಮ್ಮ ಸೇನೆಯನ್ನು ನಿರಂತರವಾಗಿ ಅವಮಾನಿಸುತ್ತಿರುವುದು ಅತ್ಯಂತ ನಾಚಿಕೆಗೇಡು ಮತ್ತು ದುರದೃಷ್ಟಕರ. ಮೊದಲು ಮಧ್ಯಪ್ರದೇಶದ ಸಚಿವರೊಬ್ಬರು ಮಹಿಳಾ ಸೇನಾಧಿಕಾರಿ ಬಗ್ಗೆ ಅಸಭ್ಯ ಹೇಳಿಕೆ ನೀಡಿದರು. ಈಗ ಮಧ್ಯಪ್ರದೇಶದ ಉಪಮುಖ್ಯಮಂತ್ರಿ ಸೇನೆಯನ್ನು ತುಂಬಾ ಅವಮಾನಿಸಿದ್ದಾರೆ' ಎಂದು ಹರಿಹಾಯ್ದಿದ್ದಾರೆ.

ಸೇನೆ ಮತ್ತು ಯೋಧರಿಗೆ ಅವಮಾನ ಮಾಡುವ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವ ಬದಲು, ಅವರನ್ನು ಉಳಿಸಲು ಬಿಜೆಪಿ ತನ್ನ ಕೈಲಾದಷ್ಟು ಪ್ರಯತ್ನಿಸುತ್ತಿದೆ ಎಂದು ಟೀಕಿಸಿದರು.

ಅಬಕಾರಿ ಶುಲ್ಕ ಏರಿಕೆ ಬರೋಬ್ಬರಿ

ಒಂದನೇ ಪುಟದಿಂದ...

'2025–26ನೇ ಸಾಲಿನಲ್ಲಿ ಅಬಕಾರಿ ಇಲಾಖೆಗೆ ಒಟ್ಟು ₹40,000 ಕೋಟಿ ಆದಾಯ ಸಂಗ್ರಹ ಗುರಿ ನೀಡಲಾಗಿದೆ. ಆದಾಯ ಸಂಗ್ರಹದ ಎಲ್ಲ ಸಾಧ್ಯತೆಗಳನ್ನೂ ಸರ್ಕಾರ ಬಳಸಿ ಕೊಳ್ಳುತ್ತಿದೆ. ಸನ್ನದು ಶುಲ್ಕ ಏರಿಕೆಗೂ ಇದೇ ಕಾರಣ' ಎಂದು ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಶುಲ್ಕ ಹೆಚ್ಚಳಕ್ಕೆ ವಿರೋಧ

- ಸಿಎಲ್‌-5 ಸನ್ನದುಗಳ ಪ್ರತಿದಿನದ ಶುಲ್ಕ ₹10,000ದಿಂದ ₹20,000ಕ್ಕೆ ಏರಿಕೆ
- ತಾರಾ ಹೋಟೆಲ್‌ಗಳ ಸಿಎಲ್‌–7 ಸನ್ನದಿನ ವಾರ್ಷಿಕ ಶುಲ್ಕ ₹10 ಲಕ್ಷದಿಂದ ₹20 ಲಕ್ಷಕ್ಕೆ ಏರಿಕೆ
- ಸೇನಾ ಕ್ಯಾಂಟೀನ್‌ಗಳ ಸಿಎಲ್‌–8 ಸನ್ನದು ಶುಲ್ಕ ₹250ರಿಂದ ₹500ಕ್ಕೆ, ಸೇನಾ ಮದ್ಯ ಗೋದಾಮುಗಳ ಸಿಎಲ್‌–8ಎ ಸನ್ನದು ಶುಲ್ಕ ₹1.25 ಲಕ್ಷದಿಂದ ₹2.50 ಲಕ್ಷಕ್ಕೆ ಏರಿಕೆ
- ಸಿಎಲ್‌–9 ವರ್ಗದ ಎಲ್ಲ ಸನ್ನದುಗಳ ಶುಲ್ಕ ಶೇ100ರಷ್ಟು ಏರಿಕೆ
- ವಿಮಾನ ನಿಲ್ದಾಣ ವ್ಯಾಪ್ತಿಯ ಸನ್ನದುಗಳ ಶುಲ್ಕ ಶೇ 100ರಷ್ಟು ಹೆಚ್ಚಳ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–01/121/2025–26 ದಿನಾಂಕ:15.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿ / ಕೆಸಿಇಐಯಲ್ಲಿ ನೋಂದಾಯಿತ ದರ್ಜೆ–3 (ಸಿವಿಲ್) ಮತ್ತು ದರ್ಜೆ–2 ಮತ್ತು ಮೇಲ್ಪಟ್ಟ (ಎಲೆಕ್ಟ್ರಿಕಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: (1) ವಿಜಯಪುರ ಜಿಲ್ಲೆಯ ಮಹಲ್‌ಬಾಗಾಯತ್ ಮತ್ತು ಅಲಿಯಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಹೈಮಾಸ್ಟ್ ದೀಪಗಳನ್ನು ಒದಗಿಸುವ ಕಾಮಗಾರಿ (ಇತರೆ). (2) ಧಾರವಾಡ ಜಿಲ್ಲೆಯ ಮಮ್ಮಿಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ನಡೆಯುತ್ತಿರುವ 110ಕೆವಿ ಮುಮ್ಮಿಗಟ್ಟಿ ಸಬ್‌ಸ್ಟೇಷನ್ ಕಾಮಗಾರಿಗಾಗಿ 110ಕೆವಿ ಟವರ್‌ಗಳ ನಿರ್ಮಾಣಕ್ಕೆ ಅಡ್ಡಿಯಾಗುತ್ತಿರುವ ಹಾಲಿ ಇರುವ ಬೀದಿ ದೀಪ ಕಂಬಗಳನ್ನು ತೆರವುಗೊಳಿಸುವುದು ಮತ್ತು ಮರುನಿರ್ಮಾಣ ಮಾಡುವ ಕಾಮಗಾರಿ (ಇತರೆ). (3) ಬಾಗಲಕೋಟೆ ಜಿಲ್ಲೆಯ ಆಗ್ರೋಟೆಕ್ ಪಾರ್ಕ್ ಮತ್ತು ಆಸಂಗಿ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ರೀ–ಕಂಡೀಷನಿಂಗ್, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣಾ ಕಾಮಗಾರಿ (ಇತರೆ). (4) ವಿಜಯಪುರ ಜಿಲ್ಲೆಯ ಮಹಲ್‌ಬಾಗಾಯತ್ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ರೀ–ಕಂಡೀಷನಿಂಗ್, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣಾ ಕಾಮಗಾರಿ (ಪ.ಪಂಗಡಕ್ಕೆ ಮೀಸಲಿಡಲಾಗಿದೆ). (5) ವಿಜಯಪುರ ಜಿಲ್ಲೆಯ ಅಲಿಯಾಬಾದ್ 1ನೇ ಮತ್ತು 2ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ರೀ–ಕಂಡೀಷನಿಂಗ್, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣಾ ಕಾಮಗಾರಿ (ಪ. ಜಾತಿಗೆ ಮೀಸಲಿಡಲಾಗಿದೆ). (6) ವಿಜಯಪುರ ಜಿಲ್ಲೆಯ ಮುಳವಾಡ 1ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ಹೆಚ್ಚುವರಿ 250ಕೆವಿಎ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಸಂಬಂಧಿತ ಕಾಮಗಾರಿ (CAT-II(A) ಗೆ ಮೀಸಲಿಡಲಾಗಿದೆ). (7) ಬಾಗಲಕೋಟೆಯ ಕೆಐಎಡಿಬಿ ನವನಗರ ಆಗ್ರೋಟೆಕ್ ಪಾರ್ಕ್ ಕೈಗಾರಿಕಾ ಪ್ರದೇಶದ ಸಿಎ ಸೈಟ್ ಸಂಖ್ಯೆ –113/ಎ ನಲ್ಲಿ ಪಂಪ್ ಹೌಸ್, ಟ್ವಿನ್ ಕ್ವಾರ್ಟರ್ಸ್, ಕಟ್ಟಡ, ಕಾಂಪೌಂಡ್ ಗೋಡೆ, ಬೋರ್‌ವೆಲ್‌ಗಳ ಕೊರೆಯುವಿಕೆ ಹಾಗೂ ಪೈಪ್‌ಲೈನ್ ಅಳವಡಿಸುವ ಕಾಮಗಾರಿ (CAT-I ಗೆ ಮೀಸಲಿಡಲಾಗಿದೆ).

ಬಿಡ್ಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04.06.2025, ಸಂಜೆ 4.30 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2
ವಾಸಾಸಂಇ/ವಾಪ್ರ/ಜಿಎ/709/2025–26

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2025–26/737 ದಿನಾಂಕ: 15/05/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ರಾಜ್ಯ ಹೆದ್ದಾರಿ ಸುಧಾರಣೆ ಅಡಿ 3 ಕಾಮಗಾರಿಗಳು ಹಾಗೂ 5054–ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 5 ಕಾಮಗಾರಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಟ ಮೊತ್ತ ರೂ. 104.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:28–05–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:29–05–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:31–05–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 02–06–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-256/KSMCA/2025-26

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ "ಎ" ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027.
ದೂ: 080–22483636/38/39, ಇಮೇಲ್: syscobalaji@ksbcl.com/asamanasa@ksbcl.com

ಸಂಖ್ಯೆ: KSBCL/MI/CCTV/Tender/006/2025-26 ದಿನಾಂಕ: 15.05.2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ಕೆಟಿಪಿಪಿ ಕಾಯಿದೆ 1999 & ನಿಯಮಗಳು 2000ರಂತೆ ಎ) **ಕೇಂದ್ರ ಕಛೇರಿ ಮತ್ತು 26 ಐಎಂಎಲ್ ಡಿಪೋಗಳಿಗೆ ಬೈಬ್ಯಾಕ್ ಆಧಾರದ ಮೇಲೆ ಸಂಬಂಧಿತ ಸಲಕರಣೆಗಳೊಂದಿಗೆ ಸಿಸಿಟಿವಿ ಕ್ಯಾಮೆರಾಗಳ ಸರಬರಾಜು ಮತ್ತು ಅಳವಡಿಕೆ. ಬಿ) 42 ಐಎಂಎಲ್ ಡಿಪೋಗಳಲ್ಲಿ ಹಾಲಿಯಿರುವ ಕ್ಯಾಮೆರಾಗಳ ರೀ–ಅಲೈನ್‌ಮೆಂಟ್ ಹಾಗೂ ಹೆಚ್ಚುವರಿ ಸ್ಟೋರೇಜ್‌ನೊಂದಿಗೆ ಹೆಚ್ಚುವರಿ ಕ್ಯಾಮೆರಾಗಳನ್ನು ಒದಗಿಸುವುದು. (ಸಿ) ಕೇಂದ್ರ ಕಛೇರಿ ಮತ್ತು ಎಲ್ಲಾ 71 ಐಎಂಎಲ್ ಡಿಪೋಗಳನ್ನು ರಿಮೋಟ್ ಮೂಲಕ ವೀಕ್ಷಿಸಲು ಹಾಲಿಯಿರುವ ಸೆಂಟ್ರಲೈಜ್ಡ್ ಮಾನಿಟರಿಂಗ್ ಸಿಸ್ಟಮ್‌ನ ಉನ್ನತೀಕರಣಕ್ಕಾಗಿ** ಪ್ರಸ್ತಾವನೆ ತಯಾರಿಕೆ ಮತ್ತು ಸಲ್ಲಿಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಅರ್ಹ ಬಿಡ್‌ದಾರರಿಂದ ಆನ್‌ಲೈನ್ ಟೆಂಡರ್ ಆಹ್ವಾನಿಸಿದೆ. ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಿಂದ ಹಾಗೂ ನಿಗಮದ ವೆಬ್‌ಸೈಟ್ **https://www.ksbcl.karnataka.gov.in** ನಿಂದ what's new ಅಡಿಯಲ್ಲಿ ಡೌನ್‌ಲೋಡ್ ಮಾಡಬಹುದಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ: **15.05.2025**. (2) ಪೂರ್ವ ಬಿಡ್ ಸಭೆಯ ದಿನಾಂಕ: **22.05.2025, 15:00 ಗಂಟೆಗೆ.** (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **29.05.2025, 17:00 ಗಂಟೆವರೆಗೆ.** (4) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **31.05.2025, 11:00 ಗಂಟೆಗೆ.**

ಇತರೆ ಸ್ಪಷ್ಟೀಕರಣಗಳಿಗೆ ಮೇಲೆ ತಿಳಿಸಲಾದ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಎಫ್&ಎಂಐ)
DIPR/CP/YC/714/2025-26

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ ಸಾರ್ವಜನಿಕ ಆಸ್ಪತ್ರೆ ಮುಧೋಳ

ತಾ:ಮುಧೋಳ E-mail:-kemghmudhol@gmail.com ಜಿಲ್ಲಾ:ಬಾಗಲಕೋಟ

ಕಡತ ಸಂಖ್ಯೆ:ಸಾಆಜ/ಹೊ.ಗು.ಡ ವರ್ಗ/56/2025–26 ದಿನಾಂಕ:12–05–2025

ಹೊರ ಗುತ್ತಿಗೆ ಡ ವರ್ಗ ಹಾಗೂ ನಾನ್ ಕ್ಲಿನಿಕಲ್ ಟೆಂಡರ ಪ್ರಕಟಣೆ

ಬಾಗಲಕೋಟ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆ ಮುದೋಳದಲ್ಲಿ ಹೊರಗುತ್ತಿಗೆ ಒಪ್ಪಂದದ ಮೇಲೆ ಡ ವರ್ಗದ ನೌಕರರು ಹಾಗೂ ನಾನ್ ಕ್ಲಿನಿಕಲ್ ನೌಕರರು ಅವರ ಸೇವೆಯನ್ನು ಒದಗಿಸಲು ನೊಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈ ಆಸ್ಪತ್ರೆಗೆ ಸನ್ 2025–26 ನೇ ಸಾಲಿಗಾಗಿ ಅವಶ್ಯವಿರುವ 12 ಡ ವರ್ಗ ಸಿಬ್ಬಂದಿಗಳನ್ನು ಹಾಗೂ 08 ನಾನ್ ಕ್ಲಿನಿಕಲ್ ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೂಲಕ ಮಾನವ ಹೊರ ಸಂಪನ್ಮೂಲ ಸಂಸ್ಥೆಯಿಂದ ಗುತ್ತಿಗೆ ಕರಾರು ಒಪ್ಪಂದದ ಮೇಲೆ ಪಡೆದುಕೊಳ್ಳಲು ದ್ವಿ ಲಕೋಟೆ ಪದ್ದತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರದಾರರಿಂದ ಈ ಕೆಳಗೆ ವಿವರಿಸಿದಂತೆ ಹೊರ ಗುತ್ತಿಗೆ ಡ ವರ್ಗ ಮತ್ತು ನಾನ್ ಕ್ಲಿನಿಕಲ್ ಸಿಬ್ಬಂದಿಗಳ ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್: www.kppp.karnataka.gov.inನಿಂದ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಸಾರ್ವಜನಿಕ ಆಸ್ಪತ್ರೆ ಮುಧೋಳ. (ಜಿ:ಬಾಗಲಕೋಟ) ಕಾರ್ಯಾಲಯದಿಂದ ಕೆಲಸದ ದಿನಗಳಂದು ಪಡೆಯಬಹುದು.

ಕ್ರ. ಸಂ.	ವಿಷಯ	ವಿವರಗಳು
1	ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ	100 ಹಾಸಿಗೆ
2	ಹೊರ ಗುತ್ತಿಗೆ ಡ ವರ್ಗದ ಸೇವೆಗೆ ಒದಗಿಸಬೇಕಾದ ಮಾನವ ಸಂಪನ್ಮೂಲ ಸಂಖ್ಯೆ	20 ಸಿಬ್ಬಂದಿಗಳು ಅದರಲ್ಲಿ 12 ಜನ ಡ ವರ್ಗ ಹಾಗೂ 08 ಜನ ನಾನ್ ಕ್ಲಿನಿಕಲ್ ಸಿಬ್ಬಂದಿಗಳು
3	ಟೆಂಡರ ಅಂದಾಜು ಮೋತ್ತ	ರೂ, 80,83,680/– (ಎಂಭತ್ತ ಲಕ್ಷ ಎಂಭತ್ತ್ಮೂರು ಸಾವಿರದಾ ಆರು ನೂರು ಎಂಭತ್ತು ಮಾತ್ರ)
4	ಇ.ಎಮ್.ಡಿ. ಹಣ	ರೂ,1,61,674/– (ಒಂದು ಲಕ್ಷ ಅರವತ್ತೊಂದು ಸಾವಿರದಾ ಆರು ನೂರಾ ಎಪ್ಪತ್ತನಾಲ್ಕು ಮಾತ್ರ) ಇ ಪ್ರೊಕ್ಯೂರ ಮೆಂಟ್ ಮುಖಾಂತರ
5	ಟೆಂಡರ್ ಅರ್ಜಿ ಫೀ	ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ
6	ಟೆಂಡರ ಅರ್ಜಿ ಅಪಲೋಡ ಪ್ರಾರಂಭ ದಿನಾಂಕ	13–05–2025 ರಿಂದ 11–06–2025 ರ ವರೆಗೆ
7	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	11–06–2025 ರ ವರೆಗೆ
8	ಟೆಂಡರ್ ತಾಂತ್ರಿಕ ಬೀಡನ್ನು ತೆರೆಯುವ ದಿನಾಂಕ	13–06–2025

ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್‌ನ ತೆರೆಯುವ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/–ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ ಮುಧೋಳ
DIPR/BGK/RO-NO-72/KSMCA/2025-26

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

MysoreSilk heritage weaves
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560001.
ದೂ:080–25586550/25586402. ಇ–ಮೇಲ್: info@ksicsilk.com

ಸಂ: ಕೆಎಸ್‌ಐಸಿ/ಪಿಆರ್/ಟೈ/01/2025–26 ದಿನಾಂಕ: 14.05.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

300 ಸಂಖ್ಯೆಗಳ ಜಾಕ್ವಾರ್ಡ್ ನೇಯ್ದ 100% ಶುದ್ಧ ರೇಷ್ಮೆ ಟೈ ಜೊತೆಗೆ ಸರಿಹೊಂದುವ ಪಾಕೆಟ್–ಸ್ಕ್ವೇರ್ ಗಿಫ್ಟ್ ಬಾಕ್ಸ್‌ನಲ್ಲಿ ಪ್ಯಾಕ್ ಮಾಡಿ ಮತ್ತು 300 ಸಂಖ್ಯೆಗಳ 100% ಶುದ್ಧ ಸ್ಯಾಟಿನ್ ಪ್ರಿಂಟೆಡ್ ರೇಷ್ಮೆ ಟೈ ಜೊತೆಗೆ ಸರಿಹೊಂದುವ ಪಾಕೆಟ್–ಸ್ಕ್ವೇರ್ ಗಿಫ್ಟ್ ಬಾಕ್ಸ್‌ನಲ್ಲಿ ಪ್ಯಾಕ್ ಮಾಡಿ ಕೆಎಸ್‌ಐಸಿ, ರೇಷ್ಮಾಲಯ ಗೋದಾಮು ಎಂ ಜಿ ರಸ್ತೆ, ಬೆಂಗಳೂರಿಗೆ ಸರಬರಾಜು ಮಾಡಲು ಅರ್ಹ ತಯಾರಿಕರಿಂದ ಕೆಪಿಪಿ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಕಡತ, ಪ್ರಕಟಣೆಯ ವಿವರಗಳು, ವೇಳಾಪಟ್ಟಿ, ನಿಯಮಗಳು ಮತ್ತು ಷರತ್ತುಗಳನ್ನು https://kppp.karnataka.gov.in ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರನ್ನು **ಇಎಂಡಿ ರೂ.14,000/–** ರೊಂದಿಗೆ ಕೆಪಿಪಿ–ಪೋಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **05–06–2025 ರ ಅಪರಾಹ್ನ 3.00 ಗಂಟೆಯವರೆಗೆ**. ತಾಂತ್ರಿಕ ಬಿಡ್‌ಗಳನ್ನು **06–06–2025 ರಂದು ಮಧ್ಯಾಹ್ನ 3.30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ ಸಹಾಯವಾಣಿ: 080–46010000, 080–68948777 ಮೂಲಕ ಪಡೆದುಕೊಳ್ಳಬಹುದಾಗಿದೆ.

ಸಹಿ/–
ವಾ.ಸಾ.ಸಂ.ಇ/ವಾಪ್ರ/650/ಆಕಾರ್/2025–26 ಸಹಿ/– ಪ್ರಧಾನ ವ್ಯವಸ್ಥಾಪಕರು (ಸಂ)

आईसीएमआर -राष्ट्रीय रोग सूचना विज्ञान और अनुसंधान केंद्र
ICMR- National Centre for Disease Informatics and Research, बेंगलुरु /Bengaluru

Dept. of Health Research, MH&FW, Govt. of India, Nirmal Bhawan-ICMR Complex, Adjacent to Trumpet, Flyover of BIAL Kannamangala Post, Bengaluru–562 110, Telephone: 080-22176400

No. ICMR/NCDIR/Recruitment/2025-26 Date : 17.05.2025

वॉक-इन-इंटरव्यू के लिए अधिसूचना

आईसीएमआर-एनसीडीआईआर, बेंगलुरु मे सलाहकार (हिंदी अनुवादक) - एक पद के अस्थायी/संविदात्मक पदों के लिए आवेदन आमंत्रित किए जाते हैं। विस्तृत विज्ञापन वेबसाइट www.ncdirindia.org / www.icmr.nic.in. से डाउनलोड किया जा सकता है। कृपया ध्यान दें कि इस विज्ञापन के संबंध में शुद्धिपत्र/परिशिष्ट/अतिरिक्त जानकारी यदि कोई हो,केवल हमारी वेबसाइटों पर प्रकाशित की जाएगी

NOTIFICATION FOR WALK-IN-INTERVIEW

Applications are invited for Temporary/Contractual position of Consultant (Hindi Translator) – 1 post at ICMR-NCDIR, Bengaluru. Detailed advertisement can be downloaded from the websites **www.ncdirindia.org/www.icmr.nic.in.** Please note that corrigendum/ addendum/further information, if any, in respect of this advertisement will be published on our websites only.

एसडी/- निदेशक
Sd/- Director

ಕೃಷಿ ವಿಶ್ವವಿದ್ಯಾಲಯ ಧಾರವಾಡ

ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–5
Fax:+91-836-2441188 Phone :+ 91-836-2214214
E mail: estateofficer@rediffmail.com Epabx:+91-836-2214214/216,332,215

ಸಂ.ಆಅ/ಇ–ಪ್ರೋ.ಕೆ.ಎಮ್–2025–26 ದಿನಾಂಕ: 13.05.2025

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಜರುಗಲಿರುವ ಕೃಷಿಮೇಳ–2025ರ (ಸೆಪ್ಟೆಂಬರ 2025 ರಲ್ಲಿ ನಾಲ್ಕು ದಿನ) ಪ್ರದರ್ಶನಕ್ಕೆ ಶಾಮಿಯಾನಾ ಹಾಕಲು ಹಾಗೂ ಇತರೆ ಕೆಲಸಗಳಿಗೆ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರುಗಳನ್ನು ಅಹ್ವಾನಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ	02-06-2025	Up to	16.00 Hrs
2	ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ ಹಾಗೂ ವೇಳೆ	05-06-2025	At	11.00 Hrs
3	ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	12-06-2025	Up to	16.00 Hrs
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	13-06-2025	At	16.15 Hrs
5	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	14-06-2025	At	16.00 Hrs

ಸದರಿ ಟೆಂಡರ್‌ಗಳನ್ನು e-procurement portal ಪದ್ಧತಿಯಂತೆ https://kppp.karnataka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 0836–2214216/332 ಸಂಪರ್ಕಿಸಬಹುದು.

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ವಾ.ಸಾ.ಇ/ಧಾರವಾಡ/177/ದೇಶಪಾಂಡೆಪಬ್ಲಿಸಿಟಿ/2025–26 ಸಹಿ/– ಆಸ್ತಿ ಅಧಿಕಾರಿಗಳು

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

NAAC A+ Accredited
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಜಿಕೆವಿಕೆ, ಬೆಂಗಳೂರು–560 065.
GKVK : 2330153-250 / Direct : 23332765.
Website: www.uasbangalore.edu.in. Email : eo@uasbangalore.edu.in

ಸಂಖ್ಯೆ:ಇ.ಒ/ಎಸ್.ಪಿ.ಒ/ಕೆಪಿಪಿಪಿ/03/2025-26 ದಿನಾಂಕ: 12-05-2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, **ಅವಶ್ಯವಿರುವ ಉಪಕರಣವನ್ನು ಸರಬರಾಜು ಮಾಡಲು ಕೆ.ಜಿ–1, ಟೆಂಡರ್ ನಿಬಂದನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.**

ವಿವರ: ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 26–05–2025 ಸಂಜೆ 4.00 ಘಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28–05–2025 ಸಮಯ ಬೆಳಗ್ಗೆ 10.30 ಕ್ಕೆ**, ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ: 31–05–2025 ಸಮಯ ಬೆಳಗ್ಗೆ 10.30 ಕ್ಕೆ,** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿ ಸಂಖ್ಯೆ: **91–80460 10000, 91–8068948777, support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **080–23630128** ಅನ್ನು ಸಂಪರ್ಕಿಸಬಹುದು .

ಸಹಿ/–
ಆಸ್ತಿ ಅಧಿಕಾರಿಗಳು
DIPR/CP/RO715/2025-26

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್ ಗದಗ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕೊಠಡಿ ಸಂಖ್ಯೆ–101, ಜಿಲ್ಲಾ ಆಡಳಿತ ಭವನ, ಗದಗ.

ಇ–ಮೇಲ್: dhogadag@gmail.com ದೂರವಾಣಿ: 08372–233996

ಕ್ರ.ಸಂ:ಪೂರೈಕೆ/ಇ–ಟೆಂಡರ್/2025–26 ದಿ: 16.05.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿ (ಕರ್ನಾಟಕ ಸರ್ಕಾರದ ಉದ್ಯಮ) ಬೆಂಗಳೂರು ಇವರು ತಾಲೂಕಾ ಆಸ್ಪತ್ರೆ ರೋಣ ಆಸ್ಪತ್ರೆಗೆ ಸಿ.ಎಸ್.ಆರ್ ಅನುದಾನದಡಿಯಲ್ಲಿ ತಾಲೂಕಾ ಆಸ್ಪತ್ರೆ, ರೋಣ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳನ್ನು ಖರೀದಿಸುವ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No: DHFWS/2024-25/IND1472/CALL-2 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗದಗ
ವಾ.ಸಾ.ಇ/ಗದಗ/64/ದೇಶಪಾಂಡೆಪಬ್ಲಿಸಿಟಿ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತ್ ನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಲೇಔಟ್, ಬೆಂಗಳೂರು–62.

ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೆಂದವಿ/ಟೆಂಡರ್/04/2025–26 ದಿನಾಂಕ: 16.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
ದ್ವಿಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ ಕೆಪಿಡಬ್ಲ್ಯೂಡಿ/ ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಸುಬ್ರಮಣ್ಯಪುರ ವಾರ್ಡ್ ನಂ. 203ರಲ್ಲಿನ ವಿನಾಯಕ ಲೇಔಟ್, ನರಸಮ್ಮ ಲೇಔಟ್, ಅಪ್ಪಯ್ಯಸ್ವಾಮಿ ಲೇಔಟ್, ವೈಷ್ಣವಿ ಲೇಔಟ್, ಉತ್ತರಹಳ್ಳಿ ಗ್ರಾಮ, ಗುಬ್ಬಲಾಳ, ಶ್ರೀನಿವಾಸ ಕಾಲೋನಿ, ಜಿ.ಟಿ. ಲೇಔಟ್ ಮತ್ತು ತೂರಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಕಾಮಗಾರಿ.
	ಕಾಮಗಾರಿಯ ಅಂದಾಜು ಮೊತ್ತ: **ರೂ. 500.00 ಲಕ್ಷಗಳು**. ಇಎಂಡಿ: **ರೂ. 7,50,000/–**
2	ಉತ್ತರಹಳ್ಳಿ ವಾರ್ಡ್ ನಂ. 202ರಲ್ಲಿನ ಚಿಕ್ಕಲ್ಲಸಂದ್ರ ಎ.ಕೆ.ಕಾಲೋನಿ, ಮಂಜುನಾಥನಗರ & ಕೆಂಪಣ್ಣ ಲೇಔಟ್, ನಾಯ್ಡು ಲೇಔಟ್ 4ನೇ ಕ್ರಾಸ್ & ಇತರೆ ಅಡ್ಡರಸ್ತೆಗಳು, ರಾಮಚಂದ್ರಾಪುರ, ಅರೇಹಳ್ಳಿ ಮತ್ತು ಹನುಮ ಹಿಲ್ಸ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಹಾಗೂ ವಸಂತಾಪುರ ವಾರ್ಡ್ ನಂ. 204ರಲ್ಲಿ ವಸಂತಾಪುರ ಗ್ರಾಮ, ಯಾದಲಂನಗರ, ಕೋಣನಕುಂಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಕಾಮಗಾರಿ.
	ಕಾಮಗಾರಿಯ ಅಂದಾಜು ಮೊತ್ತ: **ರೂ. 500.00 ಲಕ್ಷಗಳು**. ಇಎಂಡಿ: **ರೂ. 7,50,000/–**
3	ಕೂಡ್ಲು ವಾರ್ಡ್ ನಂ. 225ರಲ್ಲಿ ಕೂಡ್ಲು ಮತ್ತು ಎಇಸಿಎಸ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳು.
	ಕಾಮಗಾರಿಯ ಅಂದಾಜು ಮೊತ್ತ: **ರೂ. 500.00 ಲಕ್ಷಗಳು**. ಇಎಂಡಿ: **ರೂ. 7,50,000/–**

ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ: **180 ದಿನಗಳು**. ಮೀಸಲು : **ಇತರೆ ವರ್ಗಕ್ಕೆ ಮೀಸಲು.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **28.05.2025 ರ ಸಂಜೆ 4.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **30.05.2025ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ, ಬಿಬಿಎಂಪಿ

ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ, ತುಮಕೂರು.

ಇ–ಮೇಲ್: ka.tumakuru.dudc@gmail.com

ನಂಡಿ.ಯು.ಡಿ.ಸಿ/ನಗರೋತ್ಥಾನ (ಮುನ್ಸಿಪಾಲಿಟಿ) ಹಂತ–4/ಸಿಆರ್/01/2022–23 ದಿನಾಂಕ: 15–05–2024

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಡಿ.ಯು.ಡಿ.ಸಿ, ತುಮಕೂರು ರವರಿಂದ ಏಕ ಮತ್ತು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ಬಿಡ್‌ದಾರರಿಂದ ಈ ಕೆಳಗಿನಂತೆ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಇಂಡೆಂಟ್ ನಂ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ	ದಿನಾಂಕ ಮತ್ತು ಅವಧಿ	ಸ್ವೀಕರಿಸುವ ಕೊನೆಯ ದಿನಾಂಕ & ಅವಧಿ	ಬಿಡ್ ತೆರೆಯುವ ದಿನಾಂಕ & ಅವಧಿ
1	DMA/2024-25/BD/WORK_INDENT31610/CALL-3	20.00	0.50	15.05.2025 ರಿಂದ 23.05.2025 ರವರೆಗೆ ಸಮಯ: 17:15 ಗಂಟೆ	23.05.2025 ರವರೆಗೆ ಸಮಯ: 17:15 ಗಂಟೆ	26.05.2025 ರವರೆಗೆ ಸಮಯ: 17:30 ಗಂಟೆ
2	DMA/2024-25/BD/WORK_INDENT35510/CALL-2	190.70	2.86			
3	DMA/2024-25/BD/WORK_INDENT33070/CALL-2	150.00	2.25			
4	DMA/2024-25/EL/WORK_INDENT21597	15.25	0.38			
5	DMA/2024-25/EL/WORK_INDENT22936	6.63	0.17			
6	DMA/2024-25/OW/WORK_INDENT33399/CALL-3	21.90	0.26			
7	DMA/2024-25/WS/WORK_INDENT32245/CALL-3	100.00	2.00			
8	DMA/2024-25/RD/WORK_INDENT32008/CALL-2	12.49	0.31			
9	DMA/2024-25/BD/WORK_INDENT32184/CALL-3	369.94	5.55	15.05.2025 ರಿಂದ 30.05.2025 ರವರೆಗೆ ಸಮಯ: 17:15 ಗಂಟೆ	30.05.2025 ರವರೆಗೆ ಸಮಯ: 17:15 ಗಂಟೆ	31.05.2025 ರವರೆಗೆ ಸಮಯ: 17:30 ಗಂಟೆ

ಬಿಡ್‌ದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕಗಳು ಹಾಗೂ ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು, ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Hassan

ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಪ್ರವಾಸ

Travel

28.05.2025 05.06.2025 ಚಾರ್‌ಧಾಮ್ ಸಮೇತ ಪ್ರವಾಸ 08.06.2025 ನೈಮಿಷಾರಣ್ಯ ಬುದ್ಧಗಯಾ ಕಾಶಿ,ಅಯೋಧ್ಯ ಅಲಹಾಬಾದ್ ನೇಪಾಳ ಪೋಖ್ರಾ,ಮುಕ್ತಿನಾಥ. 23.06.2025 ಸೋಮನಾಥ್ ದ್ವಾರಕಾ ಮಹಾಕಾಳೇಶ್ವರ ಓಂಕಾರೇಶ್ವರ್. 29.06.2025 ಅಮರನಾಥ್‌ಯಾತ್ರೆ ಇತ್ಯಾದಿ. ಏಷ್ಯನ್ ಟ್ರಾವೆಲ್ಸ್ ಏಜೆನ್ಸಿ ಬೆಂಗಳೂರು.04 26574131 8431888138 8317446683

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಘರ್ಷ ಶಮನ, ವಿಶ್ವಾಸ ವೃದ್ಧಿಗೆ ಉಭಯ ದೇಶಗಳು ಮುಂದಾಗಲಿ: ಮಾರಿಯಾ

ಪಾಕ್ ಜತೆ ಮಾತು: ರಷ್ಯಾ ಒತ್ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಂತರ ಭಾರತೀಯ ಪಡೆಗಳು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ ನೆಲೆಗಳನ್ನು ಧ್ವಂಸ ಮಾಡಿದ ನಂತರ ಉಭಯ ದೇಶಗಳ ಉಂಟಾಗಿರುವ ಉದ್ವಿಗ್ನತೆ ಪೂರ್ಣ ಶಮನವಾಗಿಲ್ಲ.

ಮಾರಿಯಾ ಝುಖರೋವಾ

ಈ ಬೆಳವಣಿಗೆ ನಂತರ, ಪಾಕಿಸ್ತಾನದ ಜೊತೆಗಿನ ಮಾತುಕತೆಯನ್ನು ಮತ್ತೆ ಆರಂಭಿಸುವಂತೆ ಭಾರತದ ಮೇಲೆ ಅಮೆರಿಕ ಒತ್ತಡ ಹೇರುತ್ತಲೇ ಬಂದಿದೆ. ಈಗ, ಮಿತ್ರ ರಾಷ್ಟ್ರವಾದ ರಷ್ಯಾ ಕೂಡ ಈ ಕುರಿತು ಭಾರತದ ಮೇಲೆ ಒತ್ತಡ ಹೇರಲು ಆರಂಭಿಸಿದೆ.

ಉಭಯ ದೇಶಗಳು ಗಡಿಯಾಚೆ ನಡೆಸುತ್ತಿರುವ ಮಿಲಿಟರಿ ಕಾರ್ಯಾಚರಣೆಯನ್ನು ಮೇ 10ರಂದು ನಿಲ್ಲಿಸದ ಬೆನ್ನಲ್ಲೇ, ಪ್ರತಿಕ್ರಿಯಿಸಿದ್ದ ಚೀನಾ, ಭಾರತ ಮತ್ತು ಪಾಕಿಸ್ತಾನ ಪರಸ್ಪರ ಮಾತುಕತೆ ನಡೆಸಿ, ಪುನಃ ಸಂಘರ್ಷ ಉದ್ಭವಿಸದಂತೆ ಕ್ರಮ ಕೈಗೊಳ್ಳುವ ವಿಶ್ವಾಸ ಇದೆ ಎಂದು ಚೀನಾ ಹೇಳಿತ್ತು.

'ಭಾರತ ಮತ್ತು ಪಾಕಿಸ್ತಾನ ಮಾತುಕತೆಗೆ ಮತ್ತೆ ಚಾಲನೆ ನೀಡಬೇಕು. ಉಭಯ ದೇಶಗಳು ತಮ್ಮ ನಡುವಿನ ವಿಶ್ವಾಸ ವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂದು ರಷ್ಯಾ ಹೇಳುತ್ತಲೇ ಬಂದಿದೆ' ಎಂದು ರಷ್ಯಾ ವಿದೇಶಾಂಗ ಸಚಿವಾಲಯ ವಕ್ತಾರೆ ಮಾರಿಯಾ ಝುಖರೋವಾ ಹೇಳಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ಕುರಿತಂತೆ ರಷ್ಯಾ ನಿಲುವು ಏನು ಎಂಬ ಪತ್ರಕರ್ತರ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಕಳೆದ 12 ವರ್ಷಗಳಿಂದ ಸ್ಥಗಿತಗೊಂಡಿರುವ ಮಾತುಕತೆಯನ್ನು ಮತ್ತೆ ಆರಂಭಿಸಲು ಭಾರತಕ್ಕೆ ಪಾಕಿಸ್ತಾನ ಮನವಿ ಮಾಡಿದೆ. 'ಆಪರೇಷನ್ ಸಿಂಧೂರ' ಬಳಿಕ ಈ ಬೆಳವಣಿಗೆ ನಡೆದಿದೆ. ಈ ಸಂದರ್ಭದಲ್ಲಿಯೇ ಅಮೆರಿಕ ಮತ್ತು ರಷ್ಯಾ ಕೂಡ ಉಭಯ ದೇಶಗಳ ನಡುವೆ ನೇರ ಮಾತುಕತೆ ಮತ್ತೆ ಆರಂಭವಾಗಬೇಕು ಎಂಬುದಾಗಿ ಹೇಳುತ್ತಿರುವುದು ಗಮನಾರ್ಹ.

ಭಾರತದ ಜೊತೆ ಮಾತುಕತೆ ಆರಂಭಿಸುವುದಕ್ಕೆ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಕೂಡ ಇಚ್ಛೆ ವ್ಯಕ್ತಪಡಿಸಿದ್ದರು.

ಮಾತುಕತೆ ಆರಂಭಕ್ಕೆ ಡಾರ್ ಕರೆ

ಇಸ್ಲಾಮಾಬಾದ್ (ಪಿಟಿಐ): ತಮ್ಮ ನಡುವಿನ ವಿವಾದಾತ್ಮಕ ವಿಷಯಗಳನ್ನು ಬಗೆಹರಿಸಲು ಭಾರತ ಮತ್ತು ಪಾಕಿಸ್ತಾನ ಮಾತುಕತೆಗೆ ಮುಂದಾಗಬೇಕು ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ಡಾರ್ ಕರೆ ನೀಡಿದ್ದಾರೆ.

ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಮತ್ತು ಭಯೋತ್ಪಾದನೆಯ ವಿಷಯದ ಬಗ್ಗೆ ಮಾತ್ರ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವುದಾಗಿ ಭಾರತ ಈಗಾಗಲೇ ಸ್ಪಷ್ಟಪಡಿಸಿದೆ.

ಪಾಕಿಸ್ತಾನದ ಸೆನೆಟ್ ಅನ್ನು ಉದ್ದೇಶಿಸಿ ಮಾತನಾಡಿದ ಡಾರ್, 'ಭಾರತದ ಜತೆ ಮಾತುಕತೆ ನಡೆಸುತ್ತೇವೆ ಎಂದು ನಾವು ಜಗತ್ತಿಗೆ ತಿಳಿಸಿದ್ದೇವೆ' ಎಂದರು.

ಸೇನೆಯ ಅಸಾಧಾರಣ ಶಕ್ತಿಯ ಸಂಕೇತ 'ಆಪರೇಷನ್ ಸಿಂಧೂರ'

ನವದೆಹಲಿ(ಪಿಟಿಐ): ಆಪರೇಷನ್ ಸಿಂಧೂರವು ಪ್ರಧಾನಿ ನರೇಂದ್ರ ಮೋದಿಯವರ ದೃಢವಾದ ರಾಜಕೀಯ ಇಚ್ಛಾಶಕ್ತಿ, ವಿವಿಧ ಏಜೆನ್ಸಿಗಳಿಂದ ನಿಖರವಾದ ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ದೇಶದ ಮೂರು ಸಶಸ್ತ್ರ ಪಡೆಗಳ ಸಾಟಿಯಿಲ್ಲದ ದಾಳಿಯ ಸಾಮರ್ಥ್ಯದ ಪ್ರತಿಬಿಂಬವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಬಣ್ಣಿಸಿದ್ದಾರೆ.

ಅಮಿತ್ ಶಾ

ವಿವಿಧ ಏಜೆನ್ಸಿಗಳ ನಡುವೆ ಗುಪ್ತಚರ ಮಾಹಿತಿಯನ್ನು ಹಂಚಿಕೊಳ್ಳಲು ದೆಹಲಿಯಲ್ಲಿ ಉನ್ನತೀಕರಿಸಿದ ಬಹು ಏಜೆನ್ಸಿ ಕೇಂದ್ರವನ್ನು ಉದ್ಘಾಟಿಸಿದ ನಂತರ ಅವರು ಮಾತನಾಡಿದರು.

26/11ರ ಮುಂಬೈ ಭಯೋತ್ಪಾದಕ ದಾಳಿಯ ನಂತರ ಗುಪ್ತಚರ ಇಲಾಖೆಯು ವಿವಿಧ ಏಜೆನ್ಸಿಗಳಿಂದ ಸಮಯೋಚಿತ ಮಾಹಿತಿಗಳನ್ನು ಹಂಚಿಕೊಳ್ಳುವ ಉದ್ದೇಶದಿಂದ ಬಹು ಏಜೆನ್ಸಿ ಕೇಂದ್ರವನ್ನು ಸ್ಥಾಪಿಸಿದೆ.

'ಪಹಲ್ಗಾಮ್ ದಾಳಿಗೆ ಪ್ರತೀಕಾರ ತೆಗೆದುಕೊಳ್ಳಲು ಪ್ರಧಾನಿ ಮೋದಿಯವರು ತೋರಿದ ದೃಢ ನಿಶ್ಚಯ, ಗುಪ್ತಚರ ಇಲಾಖೆ ವಿವಿಧ ಸಂಸ್ಥೆಗಳಿಂದ ಸಂಗ್ರಹಿಸಿದ ಖಚಿತ ಮಾಹಿತಿ ಆಧರಿಸಿ, 'ಸಿಂಧೂರ' ಕಾರ್ಯಾಚರಣೆ ನಡೆಸಲಾಯಿತು. ಈ ಕಾರ್ಯಾಚರಣೆಯಲ್ಲಿ ನಮ್ಮ ಸಶಸ್ತ್ರ ಪಡೆಯ ಯೋಧರು ತೋರಿದ ಪರಾಕ್ರಮ, ಧೈರ್ಯ, ಸಾಹಸವು ಮೆಚ್ಚುವಂತಹದ್ದು' ಎಂದು ಗೃಹ ಸಚಿವರು ಶ್ಲಾಘಿಸಿದರು.

ಆಪರೇಷನ್ ಸಿಂಧೂರವು ಭಯೋತ್ಪಾದನೆ ವಿರುದ್ಧದ ಭಾರತದ ಹೊಸ ನೀತಿ ಮತ್ತು ನ್ಯಾಯಕ್ಕಾಗಿ ದೇಶದ ಪ್ರತಿಜ್ಞೆಯಾಗಿದೆ ಎಂದು ಮೋದಿ ಹೇಳಿದ್ದರು.

ಪಿಐಎಲ್ ವಿಚಾರಣೆಗೆ 'ಸುಪ್ರೀಂ' ನಕಾರ

ಕರ್ನಲ್ ಸೋಫಿಯಾ ಡೀಪ್‌ಫೇಕ್ ವಿಡಿಯೊ ಪ್ರಸಾರ ಆರೋಪ

ನವದೆಹಲಿ (ಪಿಟಿಐ): ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಬಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ಅಧಿಕೃತವಾದ ಮಾಹಿತಿ ಒದಗಿಸುತ್ತಿದ್ದ ತಂಡದ ಭಾಗವಾಗಿದ್ದ ಕರ್ನಲ್ ಸೋಫಿಯಾ ಖುರೇಷಿ ಅವರ ಡೀಪ್‌ಫೇಕ್ ವಿಡಿಯೊಗಳು ಪ್ರಸಾರವಾಗುತ್ತಿವೆ ಎಂದು ಆರೋಪಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಎ.ಐ ಮೂಲಕ ಸೃಷ್ಟಿಸಿರುವ ಡೀಪ್‌ಫೇಕ್ ವಿಡಿಯೊಗಳು ಆನ್‌ಲೈನ್‌ನಲ್ಲಿ ಪ್ರಸಾರವಾಗುವುದನ್ನು ತಡೆಯಲು ಮಾದರಿ ಕಾನೂನು ರೂಪಿಸಲು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಮಿತಿ ನೇಮಿಸುವಂತೆ ಕೋರಿ ನರೇಂದ್ರ ಕುಮಾರ್ ಗೋಸ್ವಾಮಿ ಅವರು ಪಿಐಎಲ್‌ನಲ್ಲಿ ಕೋರಿದ್ದರು.

ಅರ್ಜಿದಾರರು ಪಿಐಎಲ್‌ನಲ್ಲಿ 'ಗಂಭೀರ ವಿಷಯ'ವನ್ನೇ ಎತ್ತಿದ್ದಾರೆ ಎಂಬುದನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ಪೀಠ ಒಪ್ಪಿಕೊಂಡಿತು. ಆದರೆ ಇದೇ ರೀತಿಯ ಅರ್ಜಿ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ನಡೆಸುತ್ತಿದೆ ಎಂದಿತು.

'ಇದು ಗಂಭೀರ ವಿಷಯವಲ್ಲ ಎಂದು ನಾವು ಹೇಳುತ್ತಿಲ್ಲ. ಆದರೆ ದೆಹಲಿ ಹೈಕೋರ್ಟ್ ಒಂದೆರಡು ವರ್ಷಗಳಿಂದ ಇದೇ ವಿಷಯದ ಬಗ್ಗೆ ವಿಚಾರಣೆ ನಡೆಸುತ್ತಿದೆ. ನಾವು ಈ ಅರ್ಜಿಯನ್ನು ಪರಿಗಣಿಸಿದರೆ, ಹೈಕೋರ್ಟ್ ತಾನು ನಡೆಸುತ್ತಿರುವ ವಿಚಾರಣೆಯನ್ನು ಅರ್ಧಕ್ಕೆ ನಿಲ್ಲಿಸುತ್ತದೆ. ಹಾಗಾದಲ್ಲಿ, ಹಲವು ವರ್ಷಗಳ ಅದರ ಶ್ರಮ ವ್ಯರ್ಥವಾಗುತ್ತದೆ. ಈ ವಿಷಯದ ಬಗ್ಗೆ ನೀವು ದೆಹಲಿ ಹೈಕೋರ್ಟ್ ಮೊರೆ ಹೋಗುವುದು ಸೂಕ್ತ' ಎಂದು ಪೀಠವು ಅರ್ಜಿದಾರರಿಗೆ ಹೇಳಿದೆ.

'ಕರ್ನಲ್ ಸೋಫಿಯಾ ಅವರ ಡೀಪ್‌ಫೇಕ್ ವಿಡಿಯೊಗಳ ಪ್ರಸಾರವು ಮನಸ್ಸಿಗೆ ನೋವುಂಟು ಮಾಡಿದೆ. ನಕಲಿ ವಿಡಿಯೊಗಳು ಆನ್‌ಲೈನ್‌ನಲ್ಲಿ ಪ್ರಸಾರ ಮಾಡಲಾಗುತ್ತಿದೆ' ಎಂದು ಗೋಸ್ವಾಮಿ ಅರ್ಜಿಯಲ್ಲಿ ಹೇಳಿದ್ದಾರೆ.

ಶಾ ಅರ್ಜಿ 19ಕ್ಕೆ 'ಸುಪ್ರೀಂ' ವಿಚಾರಣೆ

ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಗುರಿಯಾಗಿಸಿಕೊಂಡು ಹೇಳಿಕೆ ನೀಡಿರುವ ಮಧ್ಯಪ್ರದೇಶದ ಬಿಜೆಪಿ ಸಚಿವ ವಿಜಯ್ ಶಾ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿರುವುದನ್ನು ಪ್ರಶ್ನಿಸಿರುವ ಅರ್ಜಿಯನ್ನು ಇದೇ 19ರಂದು ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್.ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು, ಶಾ ಅವರ ವಕೀಲ ಮನಿಂದರ್ ಸಿಂಗ್ ಅವರ ಕೋರಿಕೆಯ ಮೇರೆಗೆ ಅವರ ಅರ್ಜಿಯ ವಿಚಾರಣೆಯನ್ನು ಮುಂದೂಡಿತು. ಸೋಫಿಯಾ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ನಿರ್ದೇಶಿಸಿ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಆದೇಶವನ್ನು ಶಾ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಶ್ರದ್ಧಾಂಜಲಿ



ಶ್ರೀ ಎಸ್.ಹೆಚ್. ದೇವರಾಜ್‌ರವರು

ನಿಧನ: ತಾ|| 05-05-2025ನೇ ಸೋಮವಾರ

ಇಂತಿ ದುಃಖತಪ್ತರು :

ಮೃತರ ಪತ್ನಿ: ಶ್ರೀಮತಿ ಅನಿತ. ಜೆ ಮತ್ತು ಮಕ್ಕಳು ಹಾಗೂ ಕುಟುಂಬದವರು

SAD DEMISE

NINGE GOWDA T B

RETIRED PRINCIPAL

DAYANANDASAGAR COLLEGE

(Passed away on 15-5-2025)

Cremation at Chamarajpet on 17-5-2025 at 3:00 pm

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿದ್ದ ಇ.ಡಿ

'ಗುಜರಾತ್ ಸಮಾಚಾರ್' ಮಾಲೀಕನಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದ್ದ, 'ಗುಜರಾತ್ ಸಮಾಚಾರ್' ದಿನಪತ್ರಿಕೆಯ ಮಾಲೀಕರಲ್ಲಿ ಒಬ್ಬರಾದ ಬಾಹುಬಲಿ ಶಾ ಅವರಿಗೆ ನ್ಯಾಯಾಲಯ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ.

ಬಂಧನಕ್ಕೆ ಒಳಗಾದ ನಂತರ, ಅವರು ಅಸ್ವಸ್ಥರಾದರು. ಹೀಗಾಗಿ ಅವರನ್ನು ಗುರುವಾರ ರಾತ್ರಿ ಆಸ್ಪತ್ರೆಗೆ ದಾಖಲಾಗಿದೆ.

ಶಾ ಪರ ವಾದ ಮಂಡಿಸಿದ ವಕೀಲ ದೇವಾಂಗ ವ್ಯಾಸ್, 'ನನ್ನ ಕಕ್ಷಿದಾರ ತನಿಖೆಗೆ ಸಹಕರಿಸುತ್ತಿದ್ದಾರೆ. ತುಸು ಅಸ್ವಸ್ಥರಾಗಿರುವ ಕಾರಣ ವೈದ್ಯಕೀಯ ಕಾರಣಗಳಿಗಾಗಿ ಅವರು ಜಾಮೀನು ಕೋರಿದ್ದಾರೆ' ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಇ.ಡಿ ಅಧಿಕಾರಿಗಳು ಆಕ್ಷೇಪಣೆ ಸಲ್ಲಿಸದ ಕಾರಣ, ವೈದ್ಯಕೀಯ ಕಾರಣಗಳಿಂದಾಗಿ ಅವರಿಗೆ ಮೇ 31ರ ವರೆಗೆ ಜಾಮೀನು ನೀಡಿ, ಪಿಎಂಎಲ್‌ಎ ವಿಶೇಷ ನ್ಯಾಯಾಲಯ ಆದೇಶಿಸಿದೆ.

'ಶಾ ಬಂಧನಕ್ಕೆ ಕಾರಣ ಗೊತ್ತಾಗಿಲ್ಲ. 30 ವರ್ಷಗಳ ಹಳೆಯ ಪ್ರಕರಣಕ್ಕೆ ಸಂಬಂಧಿಸಿ ಅವರನ್ನು ಬಂಧಿಸಿರಬಹುದು' ಎಂದು ಅವರ ಅಣ್ಣ ಶ್ರೇಯಾಂಶ್ ಶಾ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಶಾ ಅವರು 'ಗುಜರಾತ್ ಸಮಾಚಾರ್' ಪತ್ರಿಕೆಯ ಮಾತೃಸಂಸ್ಥೆ ಲೋಕ್ ಪ್ರಕಾಶನ ಲಿಮಿಟೆಡ್ ನಿರ್ದೇಶಕರಾಗಿದ್ದಾರೆ. ಶ್ರೇಯಾಂಶ್ ಶಾ ಅವರು ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿದ್ದಾರೆ.

ಶಾ ಅವರನ್ನು ಇ.ಡಿ ಗುರುವಾರ ತಡರಾತ್ರಿ ವಶಕ್ಕೆ ಪಡೆದಿತ್ತು. ಇದಕ್ಕೂ ಮುನ್ನ ಇ.ಡಿ ಅಧಿಕಾರಿಗಳು ಅವರ ಕಚೇರಿಗಳಲ್ಲಿ ಶೋಧ ನಡೆಸಿದ್ದರು.

ಆದಾಯ ತೆರಿಗೆ ಇಲಾಖೆಯು ಅಹಮದಾಬಾದ್‌ನಲ್ಲಿರುವ ಜಿಎಸ್‌ಟಿವಿ ಕಚೇರಿಯಲ್ಲಿ ಸುಮಾರು 36 ಗಂಟೆ ಶೋಧ ನಡೆಸಿತ್ತು. ಈ ಬೆನ್ನಲ್ಲೇ ಗುರುವಾರ ಸಂಜೆ ಇ.ಡಿ ದಾಳಿ ನಡೆಸಿದೆ ಎಂದು ಜಿಎಸ್‌ಟಿ.ವಿ ('ಗುಜರಾತ್ ಸಮಾಚಾರ್'ನ ಅಂಗಸಂಸ್ಥೆ) ಡಿಜಿಟಲ್ ವಿಭಾಗದ ಮುಖ್ಯಸ್ಥ ತುಷಾರ್ ದವೆ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್ ಖಂಡನೆ

'ಗುಜರಾತ್ ಸಮಾಚಾರ್' ಮಾಲೀಕರ ವಿರುದ್ಧದ ಇ.ಡಿ ಕೈಗೊಂಡಿರುವ ಕ್ರಮವವನ್ನು ಖಂಡಿಸಿರುವ ಕಾಂಗ್ರೆಸ್, 'ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತುವವರು ಅಥವಾ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳದವರು ಜೈಲಿಗೆ ಹೋಗಬೇಕಾಗುತ್ತದೆ' ಎಂದು ಟೀಕಿಸಿದೆ.

'ಸರ್ಕಾರವು ಸ್ವತಂತ್ರ ಮಾಧ್ಯಮಗಳ ಮೇಲೆ ಒತ್ತಡ ಹೇರುತ್ತಿದ್ದು, ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಟೀಕೆಯು ಪ್ರಜಾಪ್ರಭುತ್ವದ ಆತ್ಮ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚಿನ ಸಂದರ್ಶನವೊಂದರಲ್ಲಿ ಹೇಳಿರುವುದನ್ನು ಉಲ್ಲೇಖಿಸಿದ ಖರ್ಗೆ 'ಟೀಕಿಸುವವರನ್ನು ಬಂಧಿಸುವುದು ಭಯಭೀತ ಸರ್ವಾಧಿಕಾರಿಯ ಮೊದಲ ಲಕ್ಷಣ' ಎಂದು ಹೇಳಿದ್ದಾರೆ.

'ಇದು ಮಾಧ್ಯಮಗಳ ಧ್ವನಿ ಅಡಗಿಸುವುದು ಮಾತ್ರವಲ್ಲ, ಪ್ರಜಾಪ್ರಭುತ್ವವನ್ನೂ ದಮನ ಮಾಡುವ ಪ್ರಯತ್ನ' ಎಂದು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಟೀಕಿಸಿದ್ದಾರೆ.

'ಗುಜರಾತ್ ಸಮಾಚಾರ್ ಮತ್ತು ಅದರ ಮಾಲೀಕರನ್ನು ಗುರಿಯಾಗಿಸಲಾಗಿದೆ. ಯಾಕೆಂದರೆ ಈ ಪತ್ರಿಕೆಯು ಕಳೆದ 25 ವರ್ಷಗಳಿಂದ ಕೇಂದ್ರ ಸರ್ಕಾರವನ್ನು ಟೀಕಿಸುತ್ತಿದೆ' ಎಂದು ಕಾಂಗ್ರೆಸ್‌ನ ಮತ್ತೊಬ್ಬ ನಾಯಕ ಜಿಗ್ನೇಶ್ ಮೇವಾನಿ ಹೇಳಿದ್ದಾರೆ.

ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಕೂಡ ಬಾಹುಬಲಿ ಶಾ ಬಂಧನ ಖಂಡಿಸಿದ್ದಾರೆ.

'ಕಾಂಗ್ರೆಸ್‌ಗೆ ಭವಿಷ್ಯ ಇಲ್ಲ'

ಪಿ. ಚಿದಂಬರಂ ಹೇಳಿಕೆ ಉಲ್ಲೇಖಿಸಿ ಕುಟುಕಿದ ಬಿಜೆಪಿ

ವಿರೋಧ ಪಕ್ಷಗಳು ಭವಿಷ್ಯದಲ್ಲಿ ಒಂದಾಗುವುದಿಲ್ಲ ಹಾಗೂ ಬಿಜೆಪಿ ಸಮರ್ಥ ಸಂಘಟನೆ ಎಂದು ಚಿದಂಬರಂ ಭವಿಷ್ಯ ನುಡಿದಿದ್ದಾರೆ
ಪ್ರದೀಪ್ ಭಂಡಾರಿ, ಬಿಜೆಪಿ ವಕ್ತಾರ

ಕುಟುಂಬ ರಾಜಕಾರಣ ಮಾಡುವ ಪಕ್ಷಗಳು ಮಾಡಿಕೊಂಡ ಮೈತ್ರಿಕೂಟವಿದು. ದೇಶದ ಪ್ರಗತಿಗಾಗಿ ಅದು ಯಾವುದೇ ಸಿದ್ಧಾಂತ, ಮುನ್ನೋಟ ಹೊಂದಿಲ್ಲ
ರಾಜೀವ್ ಚಂದ್ರಶೇಖರ್, ಬಿಜೆಪಿ ನಾಯಕ

ನವದೆಹಲಿ- (ಪಿಟಿಐ): ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಕುರಿತು ಪಿ.ಚಿದಂಬರಂ ನೀಡಿದ ಹೇಳಿಕೆಗಳನ್ನು ಉಲ್ಲೇಖಿಸಿ ಕಾಂಗ್ರೆಸ್‌ನ ಕಾಲೆಳೆದಿರುವ ಬಿಜೆಪಿ, 'ಪಕ್ಷಕ್ಕೆ ಭವಿಷ್ಯ ಇಲ್ಲ ಎಂಬುದು ರಾಹುಲ್ ಗಾಂಧಿ ಅವರ ಆಪ್ತರಿಗೂ ಗೊತ್ತಿದೆ' ಎಂದು ಶುಕ್ರವಾರ ಕುಟುಕಿದೆ.

ಪಿ.ಚಿದಂಬರಂ

'ಮೈತ್ರಿಕೂಟದ ನಾಯಕರು ತಮ್ಮ ಸ್ವಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಒಟ್ಟಾಗಿದ್ದಾರೆಯೇ ಹೊರತು, ಜನರ ಸೇವೆ ಮಾಡಲು ಅಲ್ಲ ಎಂಬುದು ಎಲ್ಲರಿಗೂ ಅರ್ಥವಾಗಿದೆ. ಹೀಗಾಗಿ, ಮತದಾರರು 'ದುರಹಂಕಾರ'ದ ಮೈತ್ರಿಕೂಟವನ್ನು ತಿರಸ್ಕರಿಸಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಆರೋಪಿಸಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕ ಸಲ್ಮಾನ್ ಖುರ್ಷಿದ್ ಹಾಗೂ ಮೃತ್ಯುಂಜಯ ಸಿಂಗ್ ಯಾದವ್ ರಚಿಸಿರುವ 'ಕಂಟೆಸ್ಟಿಂಗ್ ಡೆಮಾಕ್ರಟಿಕ್ ಡೆಫಿಸಿಟ್' ಕೃತಿಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ್ದ ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ, 'ಮೃತ್ಯುಂಜಯ ಸಿಂಗ್ ಹೇಳಿರುವ ಹಾಗೆ, 'ಇಂಡಿಯಾ' ಕೂಟದ ಭವಿಷ್ಯ ಉಜ್ವಲ ಇಲ್ಲ. ಈ ಮೈತ್ರಿಕೂಟವು ಒಗ್ಗಟ್ಟಾಗಿದೆ ಎಂದು ಅನಿಸಿದರೂ, ಆ ಬಗ್ಗೆ ನನಗೆ ಖಾತ್ರಿ ಇಲ್ಲ' ಎಂದು ಹೇಳಿದ್ದರು.

'ಮೈತ್ರಿಕೂಟ ಒಗ್ಗಟ್ಟಿನಿಂದ ಇದೆಯೇ? ಹೌದು ಎಂದಾದಲ್ಲಿ ನನಗೆ ಸಂತೋಷವಾಗುತ್ತದೆ. ಆದರೆ, ಹಾಗೆ ಕಾಣುತ್ತಿಲ್ಲ. ಸಲ್ಮಾನ್ ಖುರ್ಷಿದ್ ಅವರು ಇಂಡಿಯಾ ಮೈತ್ರಿಕೂಟ ರಚನೆಗೆ ಸಂಬಂಧಿಸಿ ನಡೆದ ಮಧ್ಯಸ್ಥಿಕೆಯ ಭಾಗವಾಗಿದ್ದರು. ಹೀಗಾಗಿ, ಅವರೇ ಈ ಪ್ರಶ್ನೆಗೆ ಉತ್ತರಿಸಬೇಕು' ಎಂದೂ ಚಿದಂಬರಂ ಹೇಳಿದ್ದರು.

ಕಾಂಗ್ರೆಸ್‌ನ ಹಿರಿಯ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಿಜೆಪಿ ವಕ್ತಾರ ಗೌರವ್ ಭಾಟಿಯಾ,' ಭಾರತ ವಿರೋಧಿ, ಪ್ರಧಾನಿ ನರೇಂದ್ರ ಮೋದಿ ಅವರ ನಿಂದನೆ ಹಾಗೂ ಸಶಸ್ತ್ರ ಪಡೆಗಳ ಮನೋಸ್ಥೈರ್ಯ ಕುಂದಿಸುವಂತಹ ನಿಲುವು ಹೊಂದಿದ್ದ 'ಇಂಡಿಯಾ'ದ ಏಕೈಕ ಉದ್ದೇಶ ಅಧಿಕಾರ ಹಿಡಿಯುವುದಾಗಿತ್ತು' ಎಂದು ವಾಗ್ದಾಳಿ ನಡೆಸಿದ್ದಾರೆ.

'ಇಂಡಿಯಾ ಮೈತ್ರಿಕೂಟ ಅಸ್ತಿತ್ವದಲ್ಲಿಯೇ ಇಲ್ಲ ಎಂದು ಈಗ ಚಿದಂಬರಂ ಅವರೇ ಹೇಳಿದ್ದಾರೆ' ಎಂದೂ ಭಾಟಿಯಾ ಕುಟುಕಿದ್ದಾರೆ.

'ಪಾಕ್‌ಗೆ ನೆರವು: ಮರು ಪರಿಶೀಲಿಸಿ'

ಒಂದನೇ ಪುಟದಿಂದ...

ಒಟ್ಟಾರೆ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಲು ಶುಕ್ರವಾರ ಬೆಳಿಗ್ಗೆ ಭುಜ್ ವಾಯುನೆಲೆಗೆ ಬಂದಿಳಿದ ಸಚಿವರು, ಭಯೋತ್ಪಾದನೆ ವಿರುದ್ಧದ ಕಾರ್ಯಾಚರಣೆಯನ್ನು ಪರಿಣಾಮಕಾರಿಯಾಗಿ ಮುನ್ನಡೆಸುತ್ತಿರುವ ಭಾರತೀಯ ವಾಯುಪಡೆಯನ್ನು ಶ್ಲಾಘಿಸಿದರು. ನಾಲ್ಕು ದಿನ ನಡೆದ ಸೇನಾ ಸಂಘರ್ಷದ ವೇಳೆ ಪಾಕಿಸ್ತಾನವು ಭುಜ್ ವಾಯುನೆಲೆಯನ್ನೂ ಗುರಿಯಾಗಿಸಿತ್ತು.

ಉಗ್ರರಿಗೆ ಪಾಕ್ ಹಣ

ಒಂದನೇ ಪುಟದಿಂದ...

ಪಾಕಿಸ್ತಾನ ಸರ್ಕಾರವು ಭಯೋತ್ಪಾದಕ ಸಂಘಟನೆಗಳ ಜತೆ ಸಂಬಂಧ ಹೊಂದಿರುವುದರಿಂದ ಅಲ್ಲಿನ ಅಣ್ವಸ್ತ್ರಗಳು ಭಯೋತ್ಪಾದಕರ ಕೈಗೆ ಲಭಿಸುವ ಅಪಾಯವನ್ನು ತಳ್ಳಿಹಾಕುವಂತಿಲ್ಲ ಎಂದು ಎಚ್ಚರಿಸಿದರು.

'ಬ್ರಹ್ಮೋಸ್' ಬಳಕೆ ದೃಢಪಡಿಸಿದ ರಕ್ಷಣಾ ಸಚಿವ

'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಭಾರತವು 'ಬ್ರಹ್ಮೋಸ್' ಸೂಪರ್‌ಸಾನಿಕ್ ಕ್ಷಿಪಣಿ ಬಳಸಿರುವುದರನ್ನು ರಕ್ಷಣಾ ಸಚಿವರು ಇದೇ ಮೊದಲ ಬಾರಿ ದೃಢಪಡಿಸಿದ್ದಾರೆ.

'ಬ್ರಹ್ಮೋಸ್' ಕ್ಷಿಪಣಿಯ ಶಕ್ತಿಯನ್ನು ಪಾಕಿಸ್ತಾನವೇ ಒಪ್ಪಿಕೊಂಡಿದೆ. ಈ ಸ್ವದೇಶಿ ನಿರ್ಮಿತ ಕ್ಷಿಪಣಿಯು ಪಾಕಿಸ್ತಾನಕ್ಕೆ ರಾತ್ರಿಯ ಅಂಧಕಾರದಲ್ಲೂ ಬೆಳಕನ್ನು ತೋರಿಸಿದೆ ಎಂದು ಅವರು ಹೇಳಿದರು. ಆಕಾಶ್ ಕ್ಷಿಪಣಿ ವ್ಯವಸ್ಥೆಗಳನ್ನು ಒಳಗೊಂಡ ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಈ ಕಾರ್ಯಾಚರಣೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದೆ ಎಂದರು.

3 ದಿನಗಳಲ್ಲಿ 6 ಉಗ್ರರ ಹತ್ಯೆ

ಅವಂತಿಪುರ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ದಾಳಿಯ ಬಳಿಕ ದಕ್ಷಿಣ ಕಾಶ್ಮೀರದ ವಿವಿಧೆಡೆ ಉಗ್ರರ ನಿಗ್ರಹ ಕಾರ್ಯಾಚರಣೆ ತೀವ್ರಗೊಳಿಸಿರುವ ಸೇನಾ ಪಡೆಗಳು, ಮೂರು ದಿನಗಳಲ್ಲಿ 6 ಮಂದಿ ಭಯೋತ್ಪಾದಕರನ್ನು ಹತ್ಯೆ ಮಾಡಿವೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಈ ಕುರಿತು ಕಾಶ್ಮೀರದ ಐಜಿಪಿ ವಿ.ಕೆ. ಬಿರ್ದಿ ಮಾಹಿತಿ ನೀಡಿದರು.

ಪರ್ಯಟನೆ ಹೈದರಾಬಾದ್‌ನ ಎಐಜಿ ಆಸ್ಪತ್ರೆಗೆ ಶುಕ್ರವಾರ ಭೇಟಿ ನೀಡಿದ ವಿಶ್ವ ಸುಂದರಿ ಸ್ಪರ್ಧಿಗಳು, ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಆರೋಗ್ಯ ವಿಚಾರಿಸಿದರು –ಪಿಟಿಐ ಚಿತ್ರ

ರಶ್ದಿಗೆ ಇರಿದ ವ್ಯಕ್ತಿಗೆ 25 ವರ್ಷ ಜೈಲು

ಮೇವಿಲ್ (ಅಮೆರಿಕ) (ಎಪಿ): ನ್ಯೂಯಾರ್ಕ್‌ನಲ್ಲಿ ಉಪನ್ಯಾಸ ಕಾರ್ಯಕ್ರಮದ ವೇದಿಕೆಯಲ್ಲಿ ಲೇಖಕ ಸಲ್ಮಾನ್ ರಶ್ದಿ ಅವರಿಗೆ ಚಾಕುವಿನಿಂದ ಇರಿದ ಅಪರಾಧಿ ಹದಿ ಮಟರ್‌ಗೆ 25 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.



ಸಲ್ಮಾನ್ ರಶ್ದಿ

ಕೊಲೆ ಯತ್ನ ಮತ್ತು ಹಲ್ಲೆ ಪ್ರಕರಣದಲ್ಲಿ 27 ವರ್ಷದ ಮಟರ್ ತಪ್ಪಿತಸ್ಥ ಎಂದು ಇಲ್ಲಿನ ನ್ಯಾಯಾಲಯ ಫೆಬ್ರುವರಿಯಲ್ಲಿ ಘೋಷಿಸಿತ್ತು. ನ್ಯಾಯಾಧೀಶರು ಶುಕ್ರವಾರ ಶಿಕ್ಷೆಯ ಪ್ರಮಾಣ ಪ್ರಕಟಿಸುವ ಸಮಯದಲ್ಲಿ ರಶ್ದಿ ಅವರು ನ್ಯಾಯಾಲಯದಲ್ಲಿ ಹಾಜರಿರಲಿಲ್ಲ.

2022ರ ಆಗಸ್ಟ್ 12ರಂದು ನ್ಯೂಯಾರ್ಕ್ ಸಮೀಪದ ಷಟೌಕ್ವ ಎಂಬಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಟರ್ ನಡೆಸಿದ ದಾಳಿಯಿಂದ ರಶ್ದಿ ಅವರು ಬಲಗಣ್ಣನ್ನು ಕಳೆದುಕೊಂಡಿದ್ದಾರೆ. ಪೆನ್ಸಿಲ್ವೇನಿಯಾದ ಆಸ್ಪತ್ರೆಯಲ್ಲಿ 17 ದಿನ ಚಿಕಿತ್ಸೆ ಪಡೆದಿದ್ದ ಅವರು ಆ ಬಳಿಕ ನ್ಯೂಯಾರ್ಕ್ ಸಿಟಿ ಪುನಶ್ಚೇತನ ಕೇಂದ್ರದಲ್ಲಿ ಮೂರು ವಾರ ಆರೈಕೆಯಲ್ಲಿದ್ದರು.

'ರಶ್ದಿ ಅವರ ಕೊಲೆಗೆ ಯತ್ನಿಸಿದ್ದಕ್ಕೆ ಅಪರಾಧಿಗೆ ಗರಿಷ್ಠ 25 ವರ್ಷಗಳ ಜೈಲು ಮತ್ತು ಅದೇ ವೇದಿಕೆಯಲ್ಲಿದ್ದ ಇನ್ನೊಬ್ಬ ವ್ಯಕ್ತಿಯನ್ನು ಗಾಯಗೊಳಿಸಿದ್ದಕ್ಕೆ ಏಳು ವರ್ಷ ಜೈಲು ವಿಧಿಸಲಾಗಿದೆ. ಎರಡೂ ಸಂತ್ರಸ್ತರು ಒಂದೇ ಘಟನೆಯಲ್ಲಿ ಗಾಯಗೊಂಡಿರುವ ಕಾರಣ ಅಪರಾಧಿ ಶಿಕ್ಷೆಯನ್ನು ಏಕಕಾಲದಲ್ಲಿ ಅನುಭವಿಸಬೇಕು' ಎಂದು ಷಟೌಕ್ವ ಕೌಂಟಿಯ ಜಿಲ್ಲಾ ಅಟಾರ್ಜಿ ಜೇಸನ್ ಸ್ಮಿತ್ ಹೇಳಿದ್ದಾರೆ.

ಕದನ ವಿರಾಮ 'ದೊಡ್ಡ ಯಶಸ್ಸು': ಟ್ರಂಪ್

ನ್ಯೂಯಾರ್ಕ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ಕದನ ವಿರಾಮಕ್ಕೆ ತಮ್ಮ ಸರ್ಕಾರದ ಪ್ರಯತ್ನವೇ ಕಾರಣ ಎಂದು ಪದೇ ಪದೇ ಹೇಳುತ್ತಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅದು 'ದೊಡ್ಡ ಯಶಸ್ಸು' ಎಂದು ಶುಕ್ರವಾರ ಬಣ್ಣಿಸಿದ್ದಾರೆ.

'ಅಲ್ಲಿ ಏನು ನಡೆಯಿತು (ಕದನ ವಿರಾಮ) ಎಂಬುದರ ಬಗ್ಗೆ ನಮಗೆ ತುಂಬಾ ಸಂತಸವಾಗಿದೆ. ಅದು ಮುಂದುವರಿಯಲಿದೆ ಎಂಬುದೇ ನನ್ನ ಭಾವನೆ' ಎಂದಿದ್ದಾರೆ.

ಎವರೆಸ್ಟ್: ಭಾರತದ ಪರ್ವತಾರೋಹಿ ಸಾವು

ಕಠ್ಮಂಡು (ಪಿಟಿಐ): ವಿಶ್ವದ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್‌ನಿಂದ ಇಳಿಯುವ ವೇಳೆ ಭಾರತದ ಪರ್ವತಾರೋಹಿಯೊಬ್ಬರು ಮೃತಪಟ್ಟಿದ್ದಾರೆ.

'ಎತ್ತರ ಪ್ರದೇಶಗಳಲ್ಲಿ ಸಂಭವಿಸಬಹುದಾದ ಆರೋಗ್ಯ ಸಮಸ್ಯೆಯಿಂದಾಗಿ ಪಶ್ಚಿಮ ಬಂಗಾಳದ ಸುಬತ್ರಾ ಘೋಷ್ ಅವರು ಮೃತಪಟ್ಟಿದ್ದಾರೆ. ಎವರೆಸ್ಟ್ ಶಿಖರದಲ್ಲಿ ಈಚೆಗೆ ಮೃತಪಟ್ಟವರಲ್ಲಿ ಇವರು ಎರಡನೇ ವ್ಯಕ್ತಿಯಾಗಿದ್ದಾರೆ' ಎಂದು 'ಹಿಮಾಲಯನ್ ಟೈಮ್ಸ್' ಪತ್ರಿಕೆ ವರದಿ ಮಾಡಿದೆ.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/11/2025–26 ದಿನಾಂಕ: 16.05.2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

INDENT NO'S	DMA/2025-26/RD/WORK_INDENT40270
	DMA/2025-26/OW/WORK_INDENT40272
	DMA/2025-26/OW/WORK_INDENT40274

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: 31.05.2025 ಸಂಜೆ 5.30 ಗಂಟೆವರೆಗೆ. ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.06.2025 ಬೆಳಿಗ್ಗೆ 10.30 ಗಂಟೆಗೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರ/701/ಸ್ಕ್ಯಾನ್/2025–26

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05 /2025–26 ದಿನಾಂಕ: 13–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ, ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 2216–07–053–0–01–200– ಲೋಕೋಪಯೋಗಿ ವಸತಿ ಗೃಹಗಳು ಹಾಗೂ ನ್ಯಾಯಾಂಗ ವಸತಿಗೃಹಗಳ ನಿರ್ವಹಣೆ, 8443 ಠೇವಣಿ ವಂತಿಕೆ, 5054–04–337–0–01–154 ಜಿಲ್ಲಾ ಮತ್ತು ಇತರ ರಸ್ತೆಗಳು – ಸುಧಾರಣೆಗಳ ಅಡಿಯಲ್ಲಿನ ಒಟ್ಟು 13 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW -1,2,3 &4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಟ ಅಂದಾಜು ಮೊತ್ತ ರೂ.1.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.180.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 13 ಕಾಮಗಾರಿಗಳಿಗೆ(ಇಂ.ಸಂಖ್ಯೆ: 21665, 21573, 21833, 19044 (2ನೇ ಕರೆ), 20797 (2 ನೇ ಕರೆ), 20795 (3 ನೇ ಕರೆ), 20796 (3 ನೇ ಕರೆ), 19067 (2ನೇ ಕರೆ) ದಿನಾಂಕ:21.05.2025, ಇಂ.ಸಂಖ್ಯೆ: 19647(2 ನೇ ಕರೆ), 21473 (2 ನೇಕರೆ), 21475 (2ನೇ ಕರೆ) ದಿನಾಂಕ:22.05.2025, ಇಂ.ಸಂಖ್ಯೆ:21288, 21248 ದಿನಾಂಕ:26.05.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ, ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ,
ಬೆಂಗಳೂರು–560052. ದೂರವಾಣಿ: 080–22535901/918/ಸಹಾಯವಾಣಿ: 8277799990

ಪ್ರಕಟಣೆ

ಸಂಖ್ಯೆ: ಅಸಂನಿ/ಅ/ವಿನಿದಾಖಲಾತಿ/ಸಿಆರ್–08/2025–26 ದಿನಾಂಕ: 16.05.2025

2025–26ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸುವ ಕುರಿತು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್ಖ್, ಭೌದ್ಧ ಮತ್ತು ಪಾರ್ಸಿ) ಹಾಗೂ ಇತರೆ ಸಮುದಾಯಗಳ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ) ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

- ವಿದ್ಯಾರ್ಥಿಗಳು https://shp.karnataka.gov.in ಅನ್ನು ಸಂಪರ್ಕಿಸಿ ಆನ್ ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.06.2025ರವರೆಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿಗೆ ಅವಕಾಶವಿರುತ್ತದೆ.
- ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ: ರೂ.2.50 ಲಕ್ಷಗಳು ಮೀರಿರಬಾರದು.
- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆಗಳ ವಿವರಕ್ಕಾಗಿ Website:- https://dom.karnataka.gov.in ಅನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ Email: directorgokdom@gmail.com ಮುಖಾಂತರ ಅಥವಾ ಇಲಾಖೆಯ Website:- https://dom.karnataka.gov.in ಸಂಪರ್ಕಿಸಬಹುದು.

ಸಹಾಯವಾಣಿ: 8277799990

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

ವಾಸಾಸಂಇ/ವಾಪ್ರ/713/25–26

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ–ವಿಭಾಗ, ಶಿವಮೊಗ್ಗ
email: acfsfshimoga@gmail.com Ph: 08182–223900

ಸಅಸಂ.ಸಾಅಉವಿಶಿ: ಟೆಂಡರ್–1: ಕೆಎಸ್‌ಎಫ್: 2025–26 ದಿ:15/05/2025

ಸಂಕ್ಷಿಪ್ತ ಮರು–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

2025–26 ನೇ ಸಾಲಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗರವರ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಕೆಎಸ್‌ಎಫ್ ಯೋಜನೆಯಡಿ 3 ನೇ ವರ್ಷದ ನೆಡುತೋಪು ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಿಕೊಂಡಿರುವ ಹಾಗೂ ಮರು–ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಇರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಮರು–ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಬಿಡ್‌ಗಳನ್ನು ದಿನಾಂಕ: 29/05/2025 ರಂದು 4.30 ಗಂಟೆಯೊಳಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮರು–ಟೆಂಡರ್‌ನ ಸಂಪೂರ್ಣ ಮಾಹಿತಿಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.
(ಕಛೇರಿ ದೂರವಾಣಿ ಸಂಖ್ಯೆ: 08182–223900)

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ–ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/25–26/102/05/248

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ. ಚಿತ್ರದುರ್ಗ (ಜಿ)
Ph No: 08195-222228 E-Mail:- apmcchallakeresec@gmail.com

ಪತ್ರ ಸಂ:ಕೃಉಮಾಸ(ಚ):ಇ–ಟೆಂಡರ್/ಸ್ವಚ್ಛತಾ/ಭದ್ರತಾ/141/ 2025–26
ದಿನಾಂಕ:12–05–2025

ಟೆಂಡರ್ ಪ್ರಕಟಣೆ

1) ಭದ್ರತಾ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2025-26/SE0590
2) ಪ್ರಾಂಗಣ ಸ್ವಚ್ಛತಾ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2025-26/SE0591
3) ಇ–ಟೆಂಡರ್ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2025-26/SE0592

2025–26ನೇ ಸಾಲಿಗೆ ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರಾಂಗಣದ ಸ್ಥಿರ ಮತ್ತು ಚರಾಸ್ತಿಗಳ ರಕ್ಷಣೆ, ಭದ್ರತೆ, ತನಿಖಾಠಾಣೆಯಲ್ಲಿ ಸಂಚಾರ ನಿಯಂತ್ರಣ, ಕಛೇರಿ ಕಾರ್ಯನಿರ್ವಹಣೆಗೆ 06 ಜನ ಭದ್ರತಾ ಸಿಬ್ಬಂದಿ (ಒಬ್ಬ ಎಲೆಕ್ಟ್ರೀಷಿಯನ್ ಒಳಗೊಂಡಂತೆ) ಹಾಗೂ ಒಬ್ಬ ವಾಹನ ಚಾಲಕರು ಮತ್ತು ಕಂಪ್ಯೂಟರ್ ಅನುಭವವುಳ್ಳ ಒಬ್ಬ ಬೆರಳಚ್ಚುಗಾರು ಒಟ್ಟು 08 ಜನ ಹಾಗೂ ಈ ಸಮಿತಿಯ ವತಿಯಿಂದ ರಾಂಪುರ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಒಬ್ಬ ಭದ್ರತಾ ಸಿಬ್ಬಂದಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾಅಯೋ, ಚಿತ್ರದುರ್ಗರವರ ಕಛೇರಿಗೆ ಒಬ್ಬ ಕಂಪ್ಯೂಟರ್ ಅನುಭವವುಳ್ಳ ಬೆರಳಚ್ಚುಗಾರರು ಸೇರಿ ಒಟ್ಟು 10 ಜನ ಭದ್ರತಾ ಸಿಬ್ಬಂದಿಯವರ ಸೇವೆ ಹಾಗೂ ಪ್ರಾಂಗಣದ ಸ್ವಚ್ಛತಾ ಸೇವೆ ಹಾಗೂ ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿರುವ ಇ–ಟೆಂಡರ್ ಪ್ರಕ್ರಿಯೆಗೆ ಒಬ್ಬ "ಸಿಸ್ಟಮ್ ಅಡ್ಮಿನಿಸ್ಟ್ರೇಟರ್" ಹಾಗೂ 3 ಜನ "ಡಾಟಾ ಎಂಟ್ರಿ ಆಪರೇಟರ್ಸ್" ಒಟ್ಟು 4 ಜನ ಇ–ಟೆಂಡರ್ ಸಿಬ್ಬಂದಿ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆದ ಏಜೆನ್ಸಿಯವರಿಂದ 2025–26ನೇ ಸಾಲಿನ (ಕಾರ್ಯಾದೇಶ ನೀಡಿದ ದಿನಾಂಕದಿಂದ ದಿನಾಂಕ:31–05–2026ರ ವರೆಗೆ) ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸಮಿತಿಯು ನಿಗಧಿಪಡಿಸಿರುವ ಕರಾರುಗಳಿಗೆ ಒಳಪಟ್ಟು ಭದ್ರತಾ/ಸ್ವಚ್ಛತಾ ಏಜೆನ್ಸಿ ಹಾಗೂ ಖಾಸಗಿ ಸಂಘ ಸಂಸ್ಥೆಗಳಿಂದ ಇ–ಟೆಂಡರ್, ಭದ್ರತಾ ಹಾಗೂ ಸ್ವಚ್ಛತಾ ಟೆಂಡರುಗಳನ್ನು ಪ್ರತ್ಯೇಕವಾಗಿ ದ್ವಿ–ಲಕೋಟೆ ಪದ್ದತಿ ಮೂಲಕ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ನ್ನು ಇ–ಪೇಮೆಂಟ್ ಮೂಲಕ ಇ–ಪ್ರಕ್ಯೂರಮೆಂಟ್ ಇವರಿಗೆ ಪಾವತಿಸತಕ್ಕದ್ದು ಸದರಿ ಹಣವನ್ನು ಪಾವತಿಸದೇ ಇರುವ ಏಜೆನ್ಸಿರವರ ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಮ್ಮ ಕಛೇರಿಯಿಂದ ಅಥವಾ ಸರ್ಕಾರಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ 1) ಟೆಂಡರ್ Queries / Clarifications ಸಲ್ಲಿಸಲು ಕೊನೆಯ ದಿನಾಂಕ:23–05–2025 ಸಂಜೆ 4.00 ರವರೆಗೆ 2)ಇ–ಟೆಂಡರ್ ಮೂಲಕ ಟೆಂಡರ್‌ನ್ನು ಭರ್ತಿ ಮಾಡಿ ಸಲ್ಲಿಸುವ ಅಂತಿಮ ದಿನಾಂಕ:: 31–05–2025 ಸಂಜೆ 4.00 ಗಂಟೆರವರೆಗೆ 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:02–06–2025 ಬೆಳಗ್ಗೆ 11.00ಗಂಟೆ ತೆರೆಯಲಾಗುವುದು 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ದಿನಾಂಕ:04–06–2025 ಬೆಳಗ್ಗೆ 11.30ಗಂಟೆಗೆ ತೆರೆಯಲಾಗುವುದು 5) ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ 6) ಸಮಿತಿಗೆ ನೇಮಿಸಿಕೊಳ್ಳುವ ಇ–ಟೆಂಡರ್/ಭದ್ರತಾ /ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆಯನ್ನು ಮಂಜೂರಾತಿಗೆ ಅನುಗುಣವಾಗಿ ಮತ್ತು ಸಮಿತಿಯ ಆದಾಯದ ಅನುಗುಣವಾಗಿ ಕಡಿತಗೊಳಿಸುವ/ ಹೆಚ್ಚಿಸುವ ಅಧಿಕಾರವನ್ನು ಸಮಿತಿಯುವ ಹೊಂದಿದ್ದು, ಈ ಬಗ್ಗೆ ಸಮಿತಿಯ ಸೂಚನೆಗೆ ಭದ್ರತಾ ಏಜೆನ್ಸೀಯು ಬದ್ದರಾಗಿರತಕ್ಕದ್ದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ.
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ.

DIPR/CTA/KSMCA/83/2025-26

ಆರ್‌ಸಿಬಿಗೆ ಪ್ಲೇಆಫ್‌ನತ್ತ ಚಿತ್ತ

ಕೋಲ್ಕತ್ತ ನೈಟ್ ರೈಡರ್ಸ್‌ಗೆ ಜಯಿಸಲೇಬೇಕಾದ ಒತ್ತಡ • ಅಭಿಮಾನಿಗಳಿಗೆ ವಿರಾಟ್ ಮೇಲೆ ಕಣ್ಣು

• ಗಿರೀಶ ದೊಡ್ಡಮನಿ

- ಒಂದು ವಾರದ ನಂತರ ಐಪಿಎಲ್ ಪುನರಾರಂಭ ಇಂದು
- ವೇಗಿ ಭುವನೇಶ್ವರ್ ಕುಮಾರ್ ಮೇಲೆ ನಿರೀಕ್ಷೆ
- ನಾಯಕ ರಜತ್ ಪಾಟೀದಾರ್ ಕಣಕ್ಕಿಳಿಯುವ ಭರವಸೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರ ವರ್ಣರಂಜಿತ ಚಿತ್ರಗಳಿರುವ ಬಸ್ ಶುಕ್ರವಾರ ಮಧ್ಯಾಹ್ನ ಚಿನ್ನಸ್ವಾಮಿ ಕ್ರೀಡಾಂಗಣದ ಮುಖ್ಯದ್ವಾರವನ್ನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿದ್ದ ಅಭಿಮಾನಿಗಳ ಗುಂಪುಗಳಲ್ಲಿ ಮಿಂಚಿನ ಸಂಚಲನವಾಯಿತು. ಬಸ್ ಕಿಟಕಿಯ ಹಿಂದೆ ವಿರಾಟ್ ಕೊಹ್ಲಿ ಕಂಡಾಗ ಅಭಿಮಾನಿಗಳ ಉತ್ಸಾಹ ದುಪ್ಪಟ್ಟಾಯಿತು. ‘ವಿರಾಟ್.. ವಿರಾಟ್.. ಕಿಂಗ್ ಕೊಹ್ಲಿ.. ಆರ್‌ಸಿಬಿ.. ಆರ್‌ಸಿಬಿ..’ ಎಂಬ ಕೂಗುಗಳು ಕಾವೇರಿಸಿದವು.

ಸಿಲಿಕಾನ್ ಸಿಟಿಯ ಕ್ರಿಕೆಟ್‌ಪ್ರೇಮಿಗಳಿಗೆ ಆರ್‌ಸಿಬಿ ಮತ್ತು ವಿರಾಟ್ ಎಂದರೆ ಮೊದಲೇ ಅಚ್ಚುಮೆಚ್ಚು. ಕೆಲ ದಿನಗಳ ಹಿಂದಷ್ಟೇ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿ ಬಂದಿರುವ ವಿರಾಟ್ ಬಗೆಗಿನ ಆಕರ್ಷಣೆ ಹೆಚ್ಚಿದೆ. ಶನಿವಾರ ಇಲ್ಲಿ ನಡೆಯಲಿರುವ ಆರ್‌ಸಿಬಿ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ನಡುವಣ ಪಂದ್ಯದಲ್ಲಿ ಅವರ ಆಟವನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳೂ ತುದಿಗಾಲಿನಲ್ಲಿ ನಿಂತಿದ್ದಾರೆ.

‘ವಿರಾಟ್ ಕೊಹ್ಲಿ ಅವರ ನಡವಳಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಮೊದಲಿನಂತೆಯೇ ಇದ್ದಾರೆ. ಈ ವರ್ಷ ಆರ್‌ಸಿಬಿಗಾಗಿ ಏನನ್ನು ಸಾಧಿಸಬೇಕು ಎಂಬುದರ ಬಗ್ಗೆ ಅಷ್ಟೇ ಅವರ ಗಮನ ಕೇಂದ್ರಿಕೃತವಾಗಿದೆ. ಅವರಿಗೆ ತಮ್ಮ ನಿರ್ಧಾರಗಳು ಮತ್ತು ಭವಿಷ್ಯದ ಯೋಜನೆಗಳ ಕುರಿತು ಸ್ಪಷ್ಟತೆ ಇದೆ. ಆದ್ದರಿಂದ ಅವರು ಭಾವೋದ್ವೇಗಕ್ಕೆ ಒಳಗಾಗುವವರಲ್ಲ’ ಎಂದು ಆರ್‌ಸಿಬಿ ತಂಡದ ನಿರ್ದೇಶಕ ಮೊ ಬೊಬಾಟ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ತಂಡವು ಸದ್ಯ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದು, ಪ್ಲೇ ಆಫ್ ಪ್ರವೇಶಿಸುವ ಸುಲಭ ಅವಕಾಶ ಇದೆ. ರಜತ್ ಪಾಟೀದಾರ್ ನಾಯಕತ್ವದ ಬಳಗವು ಸಮತೋಲನದಿಂದ ಕೂಡಿರುವುದರಿಂದ ಪ್ರಶಸ್ತಿ ಕನಸು ನನಸಾಗುವ ಆಸೆಯೂ ಚಿಗುರಿದೆ. ಹಾಲಿ ಚಾಂಪಿಯನ್ ಕೋಲ್ಕತ್ತ ತಂಡವು ಈ ಬಾರಿ ನಿರೀಕ್ಷಿತ ಮಟ್ಟದಲ್ಲಿ ಆಡಿಲ್ಲ. ಪ್ಲೇ ಆಫ್ ಹಾದಿಯಿಂದ ಬಹುತೇಕ ಹೊರಬಿದ್ದಿದೆ. ತಂಡದ ಪ್ರಮುಖ ಆಟಗಾರರಾದ ಸುನಿಲ್ ನಾರಾಯಣ್, ಆ್ಯಂಡ್ರೆ ರಸೆಲ್, ರಿಂಕು ಸಿಂಗ್, ಕ್ವಿಂಟನ್ ಡಿ ಕಾಕ್, ರಮಣದೀಪ್ ಸಿಂಗ್, ಬೌಲರ್ ವರುಣ್ ಚಕ್ರವರ್ತಿ, ವೈಭವ್ ಅರೋರಾ, ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರ ಫಾರ್ಮ್ ಸ್ಥಿರವಾಗಿಲ್ಲ. ಇದರ ಲಾಭವನ್ನು ಪಡೆಯಲು ಆರ್‌ಸಿಬಿ ಸಿದ್ಧವಾಗಿದೆ.

ಆತಿಥೇಯ ತಂಡದ ನಾಯಕ ರಜತ್ ಬೆರಳಿನ ಗಾಯದಿಂದ ಬಹುತೇಕ ಚೇತರಿಸಿಕೊಂಡಿದ್ದಾರೆ. ನೆಟ್ಸ್‌ನಲ್ಲಿ ಬಹಳ ಹೊತ್ತು ಬ್ಯಾಟಿಂಗ್ ಅಭ್ಯಾಸ ಕೂಡ ನಡೆಸಿದರು. ಆದರೆ ಅವರು ಕಣಕ್ಕಿಳಿಯುವ ಬಗ್ಗೆ ಪಂದ್ಯದ ದಿನ ಸ್ಪಷ್ಟವಾಗಲಿದೆ. ಕಳೆದ ಪಂದ್ಯದಲ್ಲಿ ಅಬ್ಬರಿಸಿದ್ದ ರೊಮೆರಿಯೊ ಶೆಫರ್ಡ್, ದಕ್ಷಿಣ ಆಫ್ರಿಕಾದ ಬೌಲರ್ ಲುಂಗಿ ಗಿಡಿ, ಆಲ್‌ರೌಂಡರ್ ಟಿಮ್ ಡೇವಿಡ್, ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್, ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರು ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ.

ಭಾರತ ಮತ್ತು ಪಾಕ್ ನಡುವಣ ಸೇನಾ ಸಂಘರ್ಷದಿಂದಾಗಿ ಒಂದು ವಾರ ಟೂರ್ನಿಗೆ ಬಿಡುವು ಲಭಿಸಿತ್ತು. ಆರ್‌ಸಿಬಿಯಲ್ಲಿದ್ದ ವಿದೇಶಿ ಆಟಗಾರರು ಈ ಅವಧಿಯಲ್ಲಿ ತಮ್ಮ ತವರಿಗೆ ಹೋಗಿ ಮರಳಿ ಬಂದಿದ್ದಾರೆ. ಇದರಿಂದಾಗಿ ಆರ್‌ಸಿಬಿ ಬಳಗದ ಆತ್ಮವಿಶ್ವಾಸ ವೃದ್ಧಿಸಿದೆ. ತನ್ನ ಪಾಲಿನಲ್ಲಿ ಉಳಿದಿರುವ ಮೂರು ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದರೂ ಪ್ಲೇಆಫ್ ಸ್ಥಾನವನ್ನು ಖಚಿತಪಡಿಸಿಕೊಳ್ಳಲಿದೆ. ಶನಿವಾರವೇ ಆ ಸಿಹಿಸುದ್ದಿಯನ್ನು ತನ್ನ ಅಭಿಮಾನಿಗಳಿಗೆ ನೀಡಲು ಆರ್‌ಸಿಬಿ ಸಿದ್ಧವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಆರ್‌ಸಿಬಿ ತಂಡದ ಫಿಲ್ ಸಾಲ್ಟ್ ಹಾಗೂ ರಜತ್ ಪಾಟೀದಾರ್ ಅಭ್ಯಾಸದಲ್ಲಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರಗಳು/ ಕೃಷ್ಣ ಕುಮಾರ್ ಪಿ.ಎಸ್.

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯ ರಹಾನೆ

ಹೇಜಲ್‌ವುಡ್ ಗೈರು?

ವೇಗದ ಬೌಲರ್ ಜೋಶ್ ಹೇಜಲ್‌ವುಡ್ ಅವರು ತಮ್ಮ ತವರು ಆಸ್ಟ್ರೇಲಿಯಾದಲ್ಲಿ ಭುಜದ ಗಾಯಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದ್ದರಿಂದ ಅವರಿನ್ನೂ ಆರ್‌ಸಿಬಿ ತಂಡಕ್ಕೆ ಮರಳಿಬಂದಿಲ್ಲ.

‘ನಮ್ಮ ವಿದೇಶಿ ಆಟಗಾರರಲ್ಲಿ ಹೇಜಲ್‌ವುಡ್ ಒಬ್ಬರೇ ಇನ್ನೂ ಮರಳಿಬಂದಿಲ್ಲ. ಅವರು ಭುಜದ ನೋವಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಕ್ರಿಕೆಟ್ ಆಸ್ಟ್ರೇಲಿಯಾ ವೈದ್ಯಕೀಯ ತಂಡ ಆರೈಕೆ ಮಾಡುತ್ತಿದೆ. ಆರ್‌ಸಿಬಿ ವೈದ್ಯಕೀಯ ಬಳಗ ಮತ್ತು ಆಸ್ಟ್ರೇಲಿಯಾ ವೈದ್ಯರು ಸಂಪರ್ಕದಲ್ಲಿದ್ದಾರೆ. ಹೇಜಲ್‌ವುಡ್ ಅವರ ಚೇತರಿಕೆ ಕುರಿತ ಮಾಹಿತಿಗಳನ್ನು ಪಡೆಯಲಾಗುತ್ತಿದೆ’ ಎಂದು ಆರ್‌ಸಿಬಿ ನಿರ್ದೇಶಕ ಮೊ ಬೊಬಾಟ್ ತಿಳಿಸಿದರು.

ಇಂದು ಮಳೆ ಸಾಧ್ಯತೆ

ಕಳೆದ ಮೂರು ದಿನಗಳಿಂದ ಬೆಂಗಳೂರಿನಲ್ಲಿ ರಾತ್ರಿ ಹೊತ್ತು ಮಳೆ ಸುರಿಯುತ್ತಿದೆ. ಇನ್ನೂ ಮೂರ್ನಾಲ್ಕು ದಿನ ಮಳೆ ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಶನಿವಾರ ಪಂದ್ಯ ನಡೆಯುವ ಸಂದರ್ಭದಲ್ಲಿಯೂ ಮಳೆ ಬರುವ ಸಾಧ್ಯತೆ ದಟ್ಟವಾಗಿದೆ.

ಒಂದು ವಾರ ಬಿಡುವಿನ ನಂತರ ಮತ್ತೆ ಐಪಿಎಲ್ ಶುರುವಾಗುವ ಭರವಸೆ ನಮಗಿತ್ತು. ಆದ್ದರಿಂದ ತರಬೇತಿಯನ್ನು ನಿಲ್ಲಿಸಿರಲಿಲ್ಲ. ಸೋಲು, ಗೆಲುವುಗಳು ಆಟದಲ್ಲಿ ಸಾಮಾನ್ಯ ಸಂಗತಿ. ಆದರೆ ಪ್ರತಿ ಪಂದ್ಯದಲ್ಲಿ ಜಯಿಸುವ ಉತ್ಸಾಹದಿಂದಲೇ ಆಡುತ್ತೇವೆ

ಮನೀಷ್ ಪಾಂಡೆ ಕೋಲ್ಕತ್ತ ನೈಟ್ ರೈಡರ್ಸ್ ಆಟಗಾರ

ಮಳೆನೀರಲ್ಲಿ ಈಜಾಡಿದ ಡೇವಿಡ್

ಗುರುವಾರ ಸಂಜೆ ಆರ್‌ಸಿಬಿ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸುತ್ತಿದ್ದಾಗಲೇ ಮಳೆ ಸುರಿಯಿತು. ಈ ಸಂದರ್ಭದಲ್ಲಿ ಕ್ರೀಡಾಂಗಣದ ಸಿಬ್ಬಂದಿಯು ಪಿಚ್ ಮತ್ತು ಹೊರಾಂಗಣದಲ್ಲಿ ಹಾಕಿದ್ದ ಹೊದಿಕೆಯ ಮೇಲೆ ನೀರು ತುಂಬಿಕೊಂಡಿತ್ತು. ಆರ್‌ಸಿಬಿ ಆಟಗಾರ ಟಿಮ್ ಡೇವಿಡ್ ಅವರು ಈ ಹೊದಿಕೆಯ ಮೇಲೆ ನಿಂತಿದ್ದ ನೀರಿನಲ್ಲಿ ಈಜಾಡಿದರು. ಮಳೆಯಲ್ಲಿ ನೆನೆದು ಆನಂದಿಸಿದರು. ಅವರ ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಡೈಮಂಡ್ ಲೀಗ್: ಜರ್ಮನಿಯ ವೆಬರ್‌ಗೆ ಅಗ್ರಸ್ಥಾನ

90 ಮೀ. ಗಡಿ ದಾಟಿದ ನೀರಜ್

ದೋಹಾ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಚೋಪ್ರಾ ಅವರು ದೋಹಾದಲ್ಲಿ ಶುಕ್ರವಾರ ರಾತ್ರಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ಜಾವೆಲಿನ್ ಅನ್ನು 90.23 ಮೀಟರ್ ದೂರ ಎಸೆದು, ವೈಯಕ್ತಿಕ ಶ್ರೇಷ್ಠ ಸಾಧನೆ ಪ್ರದರ್ಶಿಸಿದರು.

ದೋಹಾದ ಸುಹೀಮ್ ಬಿನ್ ಹಮದ್ ಕ್ರೀಡಾಂಗಣದಲ್ಲಿ ಏರಿಳಿತ ಕಂಡ ಪುರುಷರ ಜಾವೆಲಿನ್ ಸ್ಪರ್ಧೆಯಲ್ಲಿ 91.06 ಮೀಟರ್ ಸಾಧನೆಯೊಂದಿಗೆ ಜರ್ಮನಿಯ ಜೂಲಿಯನ್ ವೆಬರ್ ಅಗ್ರಸ್ಥಾನ ಪಡೆದರು. ವೆಬರ್ ಅವರ ಕೊನೆಯ ಪ್ರಯತ್ನಕ್ಕೂ ಮುನ್ನ ಮುನ್ನಡೆ ಕಾಯ್ದುಕೊಂಡಿದ್ದ ನೀರಜ್ ಅಂತಿಮವಾಗಿ ಎರಡನೇ ಸ್ಥಾನ ಗಳಿಸಿದರು.

27 ವರ್ಷ ವಯಸ್ಸಿನ ನೀರಜ್ ಇದೇ ಮೊದಲ ಬಾರಿ 90 ಮೀಟರ್ ಮೈಲಿಗಲ್ಲು ದಾಟಿದರು. ಈ ಸಾಧನೆ ಮಾಡಿದ ವಿಶ್ವದ 25ನೇ ಮತ್ತು ಏಷ್ಯಾದ ಮೂರನೇ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಒಲಿಂಪಿಕ್ ಚಾಂಪಿಯನ್, ಪಾಕಿಸ್ತಾನದ ಅರ್ಷದ್ ನದೀಂ (92.97 ಮೀ), ಮತ್ತು ಚೀನಾ ತೈಪೆಯ ಚೆಂಗ್ ಚಾವೊ ಸುನ್ (91.36 ಮೀ) ಈ ಸಾಧನೆ ಮಾಡಿದ ಏಷ್ಯಾದ ಇನ್ನಿಬ್ಬರು. ಅರ್ಷದ್ ಇಲ್ಲಿ ಭಾಗವಹಿಸಿರಲಿಲ್ಲ.

ಹಲವು ಬಾರಿಯ ಒಲಿಂಪಿಕ್ ಚಾಂಪಿಯನ್ ಯಾನ್ ಝೆಲೆಜ್ನಿ ಮಾರ್ಗದರ್ಶನದಲ್ಲಿ ಕಣಕ್ಕೆ ಇಳಿದ ನೀರಜ್ ಮೂರನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದರು. ಮೊದಲ ಪ್ರಯತ್ನದಲ್ಲಿ 88.44 ಮೀಟರ್ ಈಟಿ ಎಸೆದರೆ, ಎರಡನೇ ಮತ್ತು ಐದನೇ ಪ್ರಯತ್ನಗಳು ಫೌಲ್ ಆದವು. ನಾಲ್ಕನೇ ಮತ್ತು ಆರನೇ ಪ್ರಯತ್ನದಲ್ಲಿ ಕ್ರಮವಾಗಿ 80.56 ಮೀ ಮತ್ತು 88.20 ಮೀ ಸಾಧನೆ ಮೂಡಿಬಂತು. ಮೂರನೇ ಪ್ರಯತ್ನದಲ್ಲಿ ತನ್ನ ಬಹುಕಾಲದ ಗುರಿಯನ್ನು ಈಡೇರಿಸಿಕೊಳ್ಳುತ್ತಿದ್ದಂತೆ ನೀರಜ್ ಅವರನ್ನು ಭಾರತದ ಕಿಶೋರ್ ಜೇನಾ ಸೇರಿದಂತೆ ಸಹ ಸ್ಪರ್ಧಿಗಳು ಅವರನ್ನು ಅಭಿನಂದಿಸಿದರು.

ಜೆಕ್ ರಿಪಬ್ಲಿಕ್‌ನ ಝೆಲೆಜ್ನಿ ಅವರನ್ನು ತಮ್ಮ ವೈಯಕ್ತಿಕ ಕೋಚ್ ಆಗಿ ನೇಮಿಸಿಕೊಂಡ ಕೆಲವೇ ತಿಂಗಳುಗಳ ನಂತರ ನೀರಜ್ ಈ ಸಾಧನೆ ಮಾಡಿರುವುದು ವಿಶೇಷ. ಝೆಲೆಜ್ನಿ (98.48 ಮೀ) ಹೆಸರಿನಲ್ಲಿ ಇದೇ ಸ್ಪರ್ಧೆಯ ವಿಶ್ವದಾಖಲೆಯೂ ಇದೆ.

‘90 ಮೀಟರ್ ಗಡಿ ದಾಟಿದ್ದಕ್ಕೆ ತುಂಬಾ ಸಂತೋಷವಾಗಿದೆ. ಆದರೆ ಇದು ಕಹಿ-ಸಿಹಿ ಅನುಭವ. ಮುಂಬರುವ ಕೂಟಗಳಲ್ಲಿ ಇದಕ್ಕಿಂತ ಹೆಚ್ಚು ದೂರ ಎಸೆಯಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿದೆ’ ಎಂದು ಚೋಪ್ರಾ ಸ್ಪರ್ಧೆಯ ನಂತರ ಪ್ರತಿಕ್ರಿಯಿಸಿದರು.

30 ವರ್ಷ ವಯಸ್ಸಿನ ವೆಬರ್ ಕೊನೆಯ ಮತ್ತು ಆರನೇ ಪ್ರಯತ್ನದಲ್ಲಿ ನೀರಜ್ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನ ಪಡೆದರು. ಜರ್ಮನಿಯ ಈ ಅಥ್ಲೀಟ್ ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿಗೆ 90 ಮೀಟರ್ ಗಡಿ ದಾಟಿ ವೈಯಕ್ತಿಕ ಅತ್ಯುತ್ತಮ ಸಾಧನೆ ಮಾಡಿದರು. ಅವರು ನಾಲ್ಕು ಬಾರಿ 88 ಮೀಟರ್‌ಗಿಂತ ಹೆಚ್ಚು ದೂರ ಈಟಿಯನ್ನು ಎಸೆದು ಸ್ಥಿರ ಪ್ರದರ್ಶನ ನೀಡಿದರು. ಮೊದಲೆರಡು ಪ್ರಯತ್ನದಲ್ಲಿ ಕ್ರಮವಾಗಿ 83.82 ಮೀ ಮತ್ತು 85.57 ಮೀ ಎಸೆದರು. ನಂತರದ ನಾಲ್ಕು ಪ್ರಯತ್ನದಲ್ಲಿ 89.06 ಮೀ, 88.05 ಮೀ, 89.84 ಮೀ ಮತ್ತು 91.06 ಮೀ ಎಸೆತಗಳೊಂದಿಗೆ ತನ್ನ ಸಾಧನೆಯನ್ನು ಸುಧಾರಿಸಿಕೊಂಡರು.

ಎರಡು ಬಾರಿಯ ವಿಶ್ವ ಚಾಂಪಿಯನ್ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಗ್ರೆನೆಡಾದ ಆಂಡರ್ಸನ್ ಪೀಟರ್ಸ್ (85.64 ಮೀ.) ಮೂರನೇ ಸ್ಥಾನ ಪಡೆದರು. ಕಿಶೋರ್ ಜೇನಾ (78.60 ಮೀ) ಎಂಟನೇ ಸ್ಥಾನ ಗಳಿಸಿದರು.

ನೀರಜ್ ಚೋಪ್ರಾ ಜಾವೆಲಿನ್ ಎಸೆತದ ಭಂಗಿ ಎಎಫ್‌ಪಿ ಚಿತ್ರ

ಪಾರುಲ್ ಚೌಧರಿಗೆ ಆರನೇ ಸ್ಥಾನ

ಭಾರತದ ಪಾರುಲ್ ಚೌಧರಿ ಮಹಿಳೆಯರ 3000 ಮೀಟರ್ ಸ್ಟೀಪಲ್‌ಚೇಸ್ ಓಟದಲ್ಲಿ 9 ನಿ. 13.39 ಸೆ. ಗಳೊಡನೆ ಆರನೇ ಸ್ಥಾನ ಪಡೆದು ಉತ್ತಮ ಸಾಧನೆ ಪ್ರದರ್ಶಿದರಲ್ಲದೇ, ಆ ಹಾದಿಯಲ್ಲಿ ರಾಷ್ಟ್ರೀಯ ದಾಖಲೆಯನ್ನೂ ಸ್ಥಾಪಿಸಿದರು.

ಕಳೆದ ವರ್ಷ ಯುಜೇನ್ ಡೈಮಂಡ್ ಲೀಗ್‌ನಲ್ಲಿ ಪದಾರ್ಪಣೆ ಮಾಡಿದ್ದ ವೇಳೆ ಅವರು 16ನೇ ಸ್ಥಾನ ಪಡೆದಿದ್ದರು. ಆದರೆ ಇಲ್ಲಿ ಗಮನಾರ್ಹ ಪ್ರದರ್ಶನ ನೀಡಿದರು. 29 ವರ್ಷ ವಯಸ್ಸಿನ ಪಾರುಲ್ 2023ರಲ್ಲಿ ರಾಷ್ಟ್ರೀಯ ದಾಖಲೆ (9:15.31) ಸ್ಥಾಪಿಸಿದ್ದರು.

ಮೇ 30ರಿಂದ ಇಂಗ್ಲೆಂಡ್ ಪ್ರವಾಸ: ಜೈಸ್ವಾಲ್‌ಗೂ ಸ್ಥಾನ

ಭಾರತ ‘ಎ’ ತಂಡದಲ್ಲಿ ಕರುಣ್

ನವದೆಹಲಿ (ಪಿಟಿಐ): ಯಶಸ್ವಿ ಜೈಸ್ವಾಲ್, ನಿತೀಶ್ ಕುಮಾರ್ ರೆಡ್ಡಿ ಮತ್ತು ಧ್ರುವ್ ಜುರೇಲ್ ಸೇರಿದಂತೆ ಭಾರತ ಟೆಸ್ಟ್ ತಂಡದ ಕೆಲವು ಕಾಯಂ ಆಟಗಾರರು ಇಂಗ್ಲೆಂಡ್ ಪ್ರವಾಸ ಕೈಗೊಳ್ಳುವ ಭಾರತ ‘ಎ’ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ತಂಡದಲ್ಲಿ ಕನ್ನಡಿಗ ಕರುಣ್ ನಾಯರ್ ಸಹ ಅವಕಾಶ ಪಡೆದಿದ್ದಾರೆ.

ಈ ತಂಡವು, ಇಂಗ್ಲೆಂಡ್ ಲಯನ್ಸ್ ವಿರುದ್ಧ ಎರಡು ಪಂದ್ಯಗಳ ಸರಣಿಯನ್ನು ಆಡಲಿದೆ. ನಾಲ್ಕು ದಿನಗಳ ಅವಧಿಯ ಮೊದಲ ಪಂದ್ಯ ಮೇ 30ರಂದು ಕ್ಯಾಂಟರ್‌ಬರಿಯಲ್ಲಿ ಆರಂಭವಾಗಲಿದೆ.

ರೋಹಿತ್ ಶರ್ಮಾ ನಿವೃತ್ತರಾಗಿರುವ ಕಾರಣ ಭಾರತ ಟೆಸ್ಟ್ ತಂಡದ ನಾಯಕತ್ವ ವಹಿಸುವವರೆಂದು ನಿರೀಕ್ಷಿಸಲಾಗಿರುವ ಶುಭಮನ್ ಗಿಲ್ ಮತ್ತು ಬಿ.ಸಾಯಿ ಸುದರ್ಶನ್ ಅವರು ಎರಡನೇ ಪಂದ್ಯದ ವೇಳೆ ತಂಡವನ್ನು ಸೇರಿಕೊಳ್ಳಲಿದ್ದಾರೆ. ಎರಡನೇ ಪಂದ್ಯ ಜೂನ್ 6 ರಿಂದ 9ರವರೆಗೆ ನಡೆಯಲಿದೆ.

ಇಂಗ್ಲೆಂಡ್ ವಿರುದ್ಧ ಐದು ಟೆಸ್ಟ್‌ಗಳನ್ನು ಆಡಲಿರುವ ಭಾರತ ತಂಡದ ಪ್ರವಾಸಕ್ಕೆ ಪೂರ್ವಭಾವಿಯಾಗಿ ಭಾರತ ‘ಎ’ ತಂಡದ ಸರಣಿ ನಡೆಯುತ್ತಿದೆ. ‘ಎ’ ತಂಡವು, ಜೂನ್ 13 ರಿಂದ 16ರವರೆಗೆ ಸೀನಿಯರ್ ತಂಡದ ಜೊತೆಗೂಡಿ ಬೆಕೆನ್‌ಹ್ಯಾಮ್‌ನಲ್ಲಿ ಅಭ್ಯಾಸ ಪಂದ್ಯಗಳನ್ನು ಆಡಲಿದೆ.

ಭಾರತ ತಂಡದ ಮೊದಲ ಟೆಸ್ಟ್ ಜೂನ್ 20ರಿಂದ ಲೀಡ್ಸ್‌ನಲ್ಲಿ ನಡೆಯಲಿದೆ.

ದೇಶಿ ಕ್ರಿಕೆಟ್‌ನಲ್ಲಿ ವಿದರ್ಭ ತಂಡದ ಪರ ರನ್‌ಹೊಳೆ ಹರಿಸಿದ್ದ ಕರುಣ್ ನಾಯರ್ ಅವರು ಎಂಟು ವರ್ಷಗಳ ನಂತರ ರಾಷ್ಟ್ರೀಯ ತಂಡದ ಸೇರ್ಪಡೆಗೆ ಹತ್ತಿರವಾಗಿದ್ದಾರೆ. ರಣಜಿ ಚಾಂಪಿಯನ್ ವಿದರ್ಭ ತಂಡದ ಪರ ರಣಜಿಯಲ್ಲಿ 69 ವಿಕೆಟ್ ಪಡೆದಿದ್ದ ಎಡಗೈ ಸ್ಪಿನ್ನರ್ ಹರ್ಷ ದುಬೆ ಅವರೂ ‘ಎ’ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾದ ಇಶಾನ್ ಕಿಶನ್ ಅವರು ಈ ತಂಡದಲ್ಲಿ ಎರಡನೇ ವಿಕೆಟ್ ಕೀಪರ್ ಆಗಿ ಅವಕಾಶ ಪಡೆದಿದ್ದಾರೆ.

ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಟೆಸ್ಟ್‌ಗೆ ನಿವೃತ್ತಿ ಪ್ರಕಟಿಸಿದ ಕಾರಣ, ಭಾರತ ತಂಡ ಈಗ ಬದಲಾವಣೆಯ ಪರ್ವದಲ್ಲಿದೆ.

ಗಿಲ್ ಈ ಹಿಂದೆ ಇಂಗ್ಲೆಂಡ್‌ನಲ್ಲಿ ಅಂಥ ಯಶಸನ್ನು ಕಂಡಿರಲಿಲ್ಲ. ಹೀಗಾಗಿ ಅವರು ಎರಡನೇ ಪಂದ್ಯದಲ್ಲಿ ತಮ್ಮ ಸಾಮರ್ಥ್ಯವನ್ನು ಪಣಕ್ಕೊಡುವ ಅವಕಾಶ ಪಡೆದಿದ್ದರೆ. ಗುಜರಾತ್ ಟೈಟನ್ಸ್‌ನಲ್ಲಿ ಅವರ ಜೊತೆಗಾರ ಸಾಯಿ ಸುದರ್ಶನ್ ಅವರೂ ಟೆಸ್ಟ್ ತಂಡ ಸೇರುವ ನಿರೀಕ್ಷೆಯಿದೆ.

ಭಾರತ ‘ಎ’ ತಂಡ: ಅಭಿಮನ್ಯು ಈಶ್ವರನ್ (ನಾಯಕ), ಯಶಸ್ವಿ ಜೈಸ್ವಾಲ್, ಕರುಣ್ ನಾಯರ್, ಧ್ರುವ್ ಜುರೇಲ್ (ಉಪ ನಾಯಕ/ ವಿಕೆಟ್ ಕೀಪರ್), ನಿತೀಶ್ ಕುಮಾರ್ ರೆಡ್ಡಿ, ಶಾರ್ದೂಲ್ ಠಾಕೂರ್, ಇಶಾನ್ ಕಿಶನ್ (ವಿಕೆಟ್ ಕೀಪರ್), ಮಾನವ್ ಸುತಾರ್, ತನುಷ್ ಕೋಟ್ಯಾನ್, ಮುಕೇಶ್ ಕುಮಾರ್, ಆಕಾಶ್ ದೀಪ್, ಹರ್ಷಿತ್ ರಾಣಾ, ಅನ್ಶುಲ್ ಕಾಂಬೋಜ್, ಖಲೀಲ್ ಅಹ್ಮದ್, ಋತುರಾಜ್ ಗಾಯಕವಾಡ್, ಸರ್ಫರಾಜ್ ಖಾನ್, ತುಷಾರ ದೇಶಪಾಂಡೆ ಮತ್ತು ಹರ್ಷ ದುಬೆ.

ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಅವರು ಎರಡನೆ ಪಂದ್ಯಕ್ಕೆ ಮೊದಲು ತಂಡ ಸೇರಿಕೊಳ್ಳುವರು.

ಕರುಣ್ ನಾಯರ್

ಶಿವಮೊಗ್ಗ: ನಾಳೆಯಿಂದ ನೌಕರರ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಮೇ 18ರಿಂದ 20ರವರೆಗೆ ಶಿವಮೊಗ್ಗ ನಗರದಲ್ಲಿ ಆಯೋಜಿಸಲಾಗಿದ್ದು, 15,000 ನೌಕರರು ಭಾಗವಹಿಸುತ್ತಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ನೆಹರೂ ಕ್ರೀಡಾಂಗಣದಲ್ಲಿ 18ರಂದು ಸಂಜೆ 4ಕ್ಕೆ ಕ್ರೀಡಾಕೂಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹಾಗೂ ಸಂಸದ ಬಿ.ವೈ. ರಾಘವೇಂದ್ರ ಪಾಲ್ಗೊಳ್ಳಲಿದ್ದಾರೆ ಎಂದರು.

ಕ್ರೀಡಾಕೂಟದ ವೈಯಕ್ತಿಕ ವಿಭಾಗದಲ್ಲಿ 97, ಗುಂಪು ವಿಭಾಗದಲ್ಲಿ 16, ಸಾಂಸ್ಕೃತಿಕ ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲಿ 15 ಹಾಗೂ ಗುಂಪು ವಿಭಾಗದಲ್ಲಿ 16 ಸ್ಪರ್ಧೆಗಳು ನಡೆಯಲಿವೆ. ಭಾಗವಹಿಸುವ ನೌಕರರಿಗೆ ಸಾಂದರ್ಭಿಕ ರಜೆ ಸೌಲಭ್ಯವನ್ನು ಸರ್ಕಾರ ಮಂಜೂರು ಮಾಡಿದೆ. ಎಲ್ಲ ಕ್ರೀಡಾಪಟುಗಳಿಗೂ ಜರ್ಸಿ, ಊಟೋಪಚಾರ ಮತ್ತು ವಸತಿ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

ಒತ್ತಡದಲ್ಲೇ ಕೆಲಸ ಮಾಡುವ ನೌಕರರಿಗೆ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ ಹೊಸ ಚೈತನ್ಯ ಮೂಡಿಸುತ್ತವೆ. ವಿವಿಧ ಜಿಲ್ಲೆಗಳಿಂದ ಬರುವವರಿಗೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ

ಸಿ.ಎಸ್. ಷಡಾಕ್ಷರಿ ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮೋಹನಕುಮಾರ್, ಪ್ರಧಾನ ಕಾರ್ಯದರ್ಶಿ ಪಾಪಣ್ಣ, ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿದ್ಧಬಸಪ್ಪ ಮತ್ತಿತರರು ಕಾರ್ಯಕ್ರಮದ ಉಸ್ತುವಾರಿ ನಿರ್ವಹಿಸಲಿದ್ದಾರೆ. ಉದ್ಘಾಟನೆಯ ದಿನ ಸಂಜೆ 7ಕ್ಕೆ ಗಾಯಕ ರಾಜೇಶ್ ಕೃಷ್ಣನ್ ಅವರಿಂದ ಗಾನಸುಧೆ– ಸಂಗೀತ ಸಂಜೆ ಹಾಗೂ ಮೇ 19ರಂದು ಸ್ಥಳೀಯ ಕಲೆ, ಸಂಸ್ಕೃತಿ, ಜಾನಪದ ಬಿಂಬಿಸುವ ‘ಜನಪದ ದಿಬ್ಬಣ’ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಶೇಷವಾಗಿ ಮಕ್ಕಳಿಗೆ ವಿಶೇಷ ಮನರಂಜನಾ ಕಾರ್ಯಕ್ರಮ ಇರುತ್ತದೆ ಎಂದರು.

ವಾಂಖೆಡೆ: ಸ್ಟ್ಯಾಂಡ್‌ಗೆ ರೋಹಿತ್ ಹೆಸರು

ಮುಂಬೈ (ಪಿಟಿಐ): ಇಲ್ಲಿನ ಹೆಗ್ಗುರುತಾದ ವಾಂಖೆಡೆ ಕ್ರೀಡಾಂಗಣದ ಒಂದು ಸ್ಟ್ಯಾಂಡ್‌ಗೆ ದಿಗ್ಗಜ ಆಟಗಾರ ರೋಹಿತ್ ಶರ್ಮಾ ಅವರ ಹೆಸರಿಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ರೋಹಿತ್, ತಮ್ಮ ಹೆಸರಿನ ಸ್ಟ್ಯಾಂಡ್ ಇರುವ ಕ್ರೀಡಾಂಗಣದಲ್ಲಿ ಭಾರತ ತಂಡದ ಜರ್ಸಿ ಧರಿಸಿ ಏಕದಿನ ಪಂದ್ಯ ಆಡುವುದು ವಿಶೇಷ ಅನುಭವ ಎನಿಸಲಿದೆ ಎಂದು ಹೇಳಿದ್ದಾರೆ.

ಮುಂಬೈ ಕ್ರಿಕೆಟ್ ಸಂಸ್ಥೆ ಶುಕ್ರವಾರ ಮೂರು ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಿದೆ. ಇನ್ನೆರಡು ಸ್ಟ್ಯಾಂಡ್‌ಗಳಿಗೆ ಭಾರತ ತಂಡದ ಮಾಜಿ ನಾಯಕ ಅಜಿತ್ ವಾಡೇಕರ್ ಮತ್ತು ಬಿಸಿಸಿಐ ಮಾಜಿ ಅಧ್ಯಕ್ಷ ಶರದ್ ಪವಾರ್ ಅವರ ಹೆಸರುಗಳನ್ನು ಇಡಲಾಗಿದೆ.

‘ಇಂಥ (ಸ್ಟ್ಯಾಂಡ್‌ಗೆ ಹೆಸರು ಇಡುವ) ಕಾರ್ಯಕ್ರಮವನ್ನು ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ನಾವು ಸಾಕಷ್ಟು ಮೈಲಿಗಲ್ಲುಗಳನ್ನು ಸಾಧಿಸಲು ಯತ್ನಿಸುತ್ತೇವೆ. ಆದರೆ ಇಂಥ ಕಾರ್ಯ ಕ್ರಮ ವಿಶೇಷವಾದುದು. ವಾಂಖೆಡೆ ಕ್ರೀಡಾಂಗಣ ಕ್ರಿಕೆಟ್‌ನ ಹೆಗ್ಗುರುತು. ಬಹಳಷ್ಟು ಸ್ಮರಣೀಯ ಕ್ಷಣಗಳು ಇಲ್ಲಿ ಸೃಷ್ಟಿಯಾಗಿವೆ’ ಎಂದು ರೋಹಿತ್ ಪ್ರತಿ ಕ್ರಿಯಿಸಿದರು. ಮೇ 7ರಂದು ರೋಹಿತ್ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

‘ಆಟದ ದಿಗ್ಗಜರ ಜೊತೆ ಮತ್ತು ವಿಶ್ವದ ಉತ್ತಮ ರಾಜಕೀಯ ನಾಯಕನ ಜೊತೆ ನನ್ನ ಹೆಸರೂ ಇಲ್ಲಿ ಇದ್ದು, ನನ್ನ ಭಾವನೆ ವ್ಯಕ್ತಪಡಿಸಲಾಗದು. ಇದಕ್ಕೆ ಆಭಾರಿ’ ಎಂದು ಹೇಳಿದರು.

ಸ್ಟಾರ್ಕ್ ಅಲಭ್ಯ: ಡೆಲ್ಲಿಗೆ ಹಿನ್ನಡೆ ಪ್ಲೇ ಆಫ್‌ಗಿಲ್ಲ ಟ್ರಿಸ್ಟನ್ ಸ್ಟಬ್ಸ್

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪ್ರಮುಖ ವೇಗಿ ಮಿಚೆಲ್ ಸ್ಟಾರ್ಕ್ ಮತ್ತು ಬ್ಯಾಟರ್ ಡೊನೊವನ್ ಫೆರೀರಾ ಅವರು ಐಪಿಎಲ್‌ನ ಉಳಿದ ಪಂದ್ಯಗಳಿಗೆ ಮರಳದಿರಲು ನಿರ್ಧರಿಸಿದ್ದಾರೆ. ಇಂಗ್ಲೆಂಡ್‌ನ ಆಲ್‌ರೌಂಡರ್ ವಿಲ್ ಜಾಕ್ಸ್ ಅವರು ಮುಂಬೈ ಇಂಡಿಯನ್ಸ್‌ನ ಕೊನೆಯ ಎರಡು ಲೀಗ್ ಪಂದ್ಯಗಳನ್ನು ಮಾತ್ರ ಆಡಲಿದ್ದಾರೆ.

ಆಸ್ಟ್ರೇಲಿಯಾದ ವೇಗಿ ಸ್ಟಾರ್ಕ್ ಮತ್ತು ದಕ್ಷಿಣ ಆಫ್ರಿಕಾದ ಬ್ಯಾಟರ್ ಫೆರೀರಾ ಅವರು ತಮ್ಮ ನಿರ್ಧಾರವನ್ನು ಡೆಲ್ಲಿ ಕ್ಯಾಪಿಟಲ್ಸ್ ಆಡಳಿತ ಮಂಡಳಿಗೆ ತಿಳಿಸಿದ್ದಾರೆ. ಸ್ಟಾರ್ಕ್ 11 ಪಂದ್ಯಗಳಿಂದ 26.14ರ ಸರಾಸರಿಯಲ್ಲಿ 14 ವಿಕೆಟ್‌ಗಳನ್ನು ಪಡೆದಿದ್ದರು. ಅವರ ನಿರ್ಧಾರವು ಪ್ಲೇ ಆಫ್ ಯತ್ನದಲ್ಲಿರುವ ಡೆಲ್ಲಿಗೆ ತಂಡಕ್ಕೆ ನಿರಾಸೆ ಮೂಡಿಸಿದೆ.

ಫೆರೀರಾ ಈ ಋತುವಿನಲ್ಲಿ ಕೇವಲ ಒಂದು ಪಂದ್ಯ ಆಡಿದ್ದರು. ದಕ್ಷಿಣ ಆಫ್ರಿಕಾದ ಇನ್ನೊಬ್ಬ ಬ್ಯಾಟರ್ ಟ್ರಿಸ್ಟನ್ ಸ್ಟಬ್ಸ್ ಅವರು ಡೆಲ್ಲಿ ತಂಡದ ಕೊನೆಯ ಮೂರು ಲೀಗ್ ಪಂದ್ಯಗಳನ್ನು ಆಡಿ ತವರಿಗೆ ಮರಳಲಿದ್ದಾರೆ. ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ತಂಡದಲ್ಲಿದ್ದಾರೆ. ಆದರೆ ಡೆಲ್ಲಿ ಉಪನಾಯಕ, ದಕ್ಷಿಣ ಆಫ್ರಿಕಾದ ಇನ್ನೊಬ್ಬ ಬ್ಯಾಟರ್ ಫಾಫ್ ಡುಪ್ಲೆಸಿಸ್ ಲಭ್ಯತೆ ಬಗ್ಗೆ ಇನ್ನೂ ಸ್ಪಷ್ಟತೆ ಮೂಡಿಲ್ಲ.

ಕಿಂಗ್ಸ್ ನಿಟ್ಟುಸಿರು: ಪಂಜಾಬ್ ಕಿಂಗ್ಸ್‌ನ ಮಾರ್ಕಸ್ ಸ್ಟೊಯಿನಿಸ್ ಮತ್ತು ಜೋಶ್ ಇಂಗ್ಲಿಸ್ ಅವರು ಪುನರಾರಂಭದ ಮೊದಲ ಪಂದ್ಯಕ್ಕೆ ಲಭ್ಯರಿರುವುದಿಲ್ಲ. ಆದರೆ ಉಳಿದ ಪಂದ್ಯಗಳಲ್ಲಿ ಆಡಲು ಒಪ್ಪಿಕೊಂಡಿದ್ದಾರೆ. 18ರಂದು ಪಂಜಾಬ್ ಕಿಂಗ್ಸ್ ಮರು ಆರಂಭದ ಮೊದಲ ಪಂದ್ಯ ಆಡಲಿದೆ.

ವಿಲ್ ಜಾಕ್ಸ್ ಅವರು ಶುಕ್ರವಾರ ಇನ್‌ಸ್ಟಾಗ್ರಾಮ್‌ನಲ್ಲಿ ವಿಮಾನದ ಟಿಕೆಟ್ ಪೋಸ್ಟ್ ಹಾಕುವ ಮೂಲಕ ಲೀಗ್‌ನಲ್ಲಿ ಆಡುವುದನ್ನು ಖಚಿತಪಡಿಸಿದ್ದಾರೆ. ಆದರೆ ಸ್ವದೇಶದ ಬಟ್ಲರ್ ಅವರ ಹಾಗೆಯೇ ಪ್ಲೇ ಆಫ್ ನಂತರ ಜಾಕ್ಸ್ ಕೂಡ ತಮ್ಮ ರಾಷ್ಟ್ರೀಯ ತಂಡ ಸೇರಿಕೊಳ್ಳಲಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಸರಣಿಯಲ್ಲಿ ಇವರಿಬ್ಬರು ಆಡಲಿದ್ದಾರೆ. ಮುಂಬೈ ಇಂಡಿಯನ್ಸ್ ಸದ್ಯ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದು, ಉಳಿದೆರಡೂ ಪಂದ್ಯ ಗೆದ್ದರೆ ಪ್ಲೇಆಫ್ ಖಚಿತವಾಗುತ್ತದೆ.

ಮಿಚೆಲ್ ಸ್ಟಾರ್ಕ್

31ರಿಂದ ಅಲ್ಟಿಮೇಟ್ ಟಿಟಿ

ನವದೆಹಲಿ (ಪಿಟಿಐ): ಅಲ್ಟಿಮೇಟ್ ಟೇಬಲ್ ಟೆನಿಸ್ ಟೂರ್ನಿಯ ಆರನೇ ಆವೃತ್ತಿಯು ಅಹಮದಾಬಾದಿನಲ್ಲಿ ಇದೇ ತಿಂಗಳ 31ರಂದು ಆರಂಭವಾಗಲಿದೆ. ಎಂಟು ಫ್ರಾಂಚೈಸಿ ತಂಡಗಳು ಭಾಗವಹಿಸುವ ಈ ಲೀಗ್ ಅಂದು ಎರಡು ಪಂದ್ಯದೊಡನೆ (ಡಬಲ್ ಹೆಡರ್) ಆರಂಭವಾಗಲಿದೆ.

ಅಂದು ಹಾಲಿ ಚಾಂಪಿಯನ್ ಡೆಂಪೊ ಗೋವಾ ಚಾಲೆಂಜರ್ಸ್ ತಂಡವು, ಅಹಮದಾಬಾದ್ ಎಸ್‌ಸಿ ಪೈಪರ್ಸ್ ತಂಡವನ್ನು ಎದುರಿಸಲಿದೆ. ಅದೇ ದಿನ, ಎರಡನೇ ಆವೃತ್ತಿಯ ವಿಜೇತ ದಬಾಂಗ್ ಡೆಲ್ಲಿ ಟಿಟಿಸಿ ತಂಡವು, ಶ್ರೀಜಾ ಅಕುಲಾ ನೇತೃತ್ವದ ಜೈಪುರ ಪೇಟ್ರಿಯಟ್ಸ್ ತಂಡದ ವಿರುದ್ಧ ಆಡಲಿದೆ.

ಒಟ್ಟು 23 ಪಂದ್ಯಗಳು ನಡೆಯಲಿದ್ದು, ಫೈನಲ್ ಪಂದ್ಯ ಜೂನ್ 15ರಂದು ನಿಗದಿಯಾಗಿದೆ. ಸೆಮಿಫೈನಲ್ ಪಂದ್ಯಗಳು ಜೂನ್ 13 ಮತ್ತು 14ರಂದು ನಡೆಯಲಿವೆ.

ವಿಶ್ವದ 14ನೇ ನಂಬರ್ ಆಟಗಾರ್ತಿ ಬೆರ್ನಾಡೆಟೆ ಸೋಕ್ಸ್ ಮುಂಬೈ ತಂಡದ ನಾಯಕಿಯಾಗಿದ್ದು, ಉದಯೋನ್ಮುಖ ತಾರೆ ಯಶಸ್ವಿನಿ ಘೋರ್ಪಡೆ ಆ ತಂಡದಲ್ಲಿದ್ದಾರೆ. ಯಶಸ್ವಿನಿ ಕರ್ನಾಟಕದವರು.

ಪ್ರತಿ ತಂಡವು ಗುಂಪು ಹಂತದಲ್ಲಿ ಐದು ಪಂದ್ಯಗಳನ್ನು ಆಡಲಿದೆ. ಪ್ರತಿ ಪಂದ್ಯವು ಎರಡು ಪುರುಷರ ಸಿಂಗಲ್ಸ್, ಎರಡು ಮಹಿಳಾ ಸಿಂಗಲ್ಸ್ ಮತ್ತು ಒಂದು ಮಿಶ್ರ ಡಬಲ್ಸ್ ಪಂದ್ಯಗಳನ್ನು ಹೊಂದಿದೆ. ಲೀಗ್ ಹಂತದ ನಂತರ ಅಗ್ರ ನಾಲ್ಕು ತಂಡಗಳು ನಾಕೌಟ್ ಹಂತಕ್ಕೆ ಮುನ್ನಡೆಯಲಿವೆ.

ಚೆಸ್: ಪ್ರಜ್ಞಾನಂದ ಚಾಂಪಿಯನ್

ಬುಕಾರೆಸ್ಟ್: ಭಾರತದ ಪ್ರಜ್ಞಾನಂದ ರಮೇಶಬಾಬು ಅವರು ಸೂಪರ್‌ಬೆಟ್ ಕ್ಲಾಸಿಕ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿದರು. ಶುಕ್ರವಾರ ರಾತ್ರಿ ಮೂವರು ಆಟಗಾರರ ನಡುವೆ ಟೈ ಆದ ನಂತರ ಅವರು ಬ್ಲಿಟ್ಜ್ ಪ್ಲೇಆಫ್‌ನಲ್ಲಿ ವಿಜೇತರಾದರು.

ಟೂರ್ನಿಯ 9 ಸುತ್ತುಗಳ ಬಳಿಕ ಪ್ರಜ್ಞಾನಂದ, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಮತ್ತು ಅಲಿರೇಝಾ ಫಿರೋಝ್‌ಜಾ ಅವರು ತಲಾ 5.5 ಅಂಕ ಸಂಗ್ರಹಿಸಿದ್ದರು. ಪ್ಲೇಆಫ್ ಬಳಿಕ ಲಗ್ರಾವ್ ಎರಡನೇ ಮತ್ತು ಅಲಿರೇಝಾ ಮೂರನೇ ಸ್ಥಾನ ಪಡೆದರು. ವಿಶ್ವ ಚಾಂಪಿಯನ್ ಹಾಗೂ ಕಣದಲ್ಲಿದ್ದ ಭಾರತದ ಮತ್ತೊಬ್ಬ ಆಟಗಾರ ಗುಕೇಶ್ (3.5 ಅಂಕ) 10 ಆಟಗಾರರಲ್ಲಿ ಎಂಟನೇ ಸ್ಥಾನ ಪಡೆದರು.

ಪ್ರಜ್ಞಾನಂದ ಅವರಿಗೆ ಚೆಸ್ ಗ್ರ್ಯಾಂಡ್ ಟೂರ್ ಸರಣಿಯ ಟೂರ್ನಿಯೊಂದರಲ್ಲಿ ಮೊದಲ ಪ್ರಶಸ್ತಿ ಇದಾಗಿದೆ. ಬಹುಮಾನವಾಗಿ ₹66.50 ಲಕ್ಷ ಜೇಬಿಗಿಳಿಸಿದರು.

ಸ್ಯಾಫ್ ಫುಟ್‌ಬಾಲ್: ಫೈನಲ್‌ಗೆ ಭಾರತ

ಯುಪಿಯಾ (ಅರುಣಾಚಲ ಪ್ರದೇಶ), (ಪಿಟಿಐ): ತವರಿನ ಪ್ರೇಕ್ಷಕರೆದುರು ಅಮೋಘ ಪ್ರದರ್ಶನ ನೀಡಿದ ಹಾಲಿ ಚಾಂಪಿಯನ್ ಭಾರತ ತಂಡ ಶುಕ್ರವಾರ 3–0 ಯಿಂದ ಮಾಲ್ದೀವ್ಸ್ ತಂಡದ ಮೇಲೆ ಗೆದ್ದು ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿತು.

ಡ್ಯಾನಿ ಮೈಥೇಯಿ ಲೈಶ್ರಮ್ (14ನೇ ನಿಮಿಷ), ಒಮುಂಗ್ ದೊಡಮ್ (21ನೇ) ಮತ್ತು ಪ್ರಶಾಂತ್ ಜಾಜೊ (66ನೇ ನಿಮಿಷ) ಅವರು ಗೋಲುಗಳನ್ನು ಗಳಿಸಿದರು.

ಭಾರತ ತಂಡ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ. ಬಾಂಗ್ಲಾದೇಶ ಇದಕ್ಕೆ ಮೊದಲು ನಡೆದ ಇನ್ನೊಂದು ಸೆಮಿಫೈನಲ್‌ನಲ್ಲಿ 2–1 ಗೋಲುಗಳಿಂದ ನೇಪಾಳ ತಂಡವನ್ನು ಮಣಿಸಿತು.

ಬ್ಯಾಕ್‌ಯಾರ್ಡ್ ಅಲ್ಟ್ರಾ ರನ್ ಕರ್ನಾಟಕದ ಅಶ್ವಿನಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಕ್‌ಯಾರ್ಡ್ ಅಲ್ಟ್ರಾ ರನ್ ಎಂಬ ಹೊಸ ಮಾದರಿಯ ಮ್ಯಾರಥಾನ್‌ನಲ್ಲಿ ಕನ್ನಡತಿ ಅಶ್ವಿನಿ ಅವರು ಸುಮಾರು 28 ಗಂಟೆಗಳ ಕಾಲ ಓಡಿ ಮಹಿಳಾ ವಿಭಾಗದಲ್ಲಿ ದಾಖಲೆ ನಿರ್ಮಿಸಿದ್ದಾರೆ.

ಬೆಂಗಳೂರಿನ ಕನಕಪುರ ಮಾರ್ಗದ ಹಾರೋಹಳ್ಳಿ ಬಳಿ ಈಚೆಗೆ ನಡೆದ ಬಿಗ್ ಫೂಟ್ ಬ್ಯಾಕ್‌ಯಾರ್ಡ್ ಅಲ್ಟ್ರಾ ಸ್ಪರ್ಧೆಯಲ್ಲಿ 39 ವರ್ಷ ವಯಸ್ಸಿನ ಅಶ್ವಿನಿ ಅವರು 28 ಗಂಟೆಯಲ್ಲಿ 187.6 ಕಿಲೋಮೀಟರ್ ದೂರ ಕ್ರಮಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಈ ಹಿಂದೆ ನಿರ್ಮಾಣವಾಗಿದ್ದ (27 ಗಂಟೆ) ದಾಖಲೆಯನ್ನು ಮುರಿದಿದ್ದಾರೆ.

ಸ್ಪರ್ಧೆಯಲ್ಲಿ ಒಟ್ಟು 20 ಮಂದಿ ಸ್ಪರ್ಧಿಸಿದ್ದರು. ಅಶ್ವಿನಿ ಮತ್ತು ಮಣಿಪುರದ ಒಪೆಂಡ್ರೋಸಿಂಗ್ ಮಾತ್ರ ರೇಸ್‌ನಲ್ಲಿ ಕೊನೆಯವರೆಗೆ ಉಳಿದರು. ಅಶ್ವಿನಿ ಅವರು 187.6 ಕಿ.ಮೀ ಕ್ರಮಿಸಿ ಓಟವನ್ನು ನಿಲ್ಲಿಸಿದರು. ಆದರೆ, ಒಪೆಂಡ್ರೋಸಿಂಗ್ ಅವರು 29 ಗಂಟೆ ಓಡಿ ವಿಜೇತರಾದರು. ಆದರೆ, ಅಶ್ವಿನಿ ಅದಾಗಲೇ ಮಹಿಳಾ ವಿಭಾಗದ ದಾಖಲೆಯನ್ನು ಮೀರಿದರು.

ಸಾಗರ ಮೂಲದ ಅಶ್ವಿನಿ ಅವರು ಕಳೆದ ವರ್ಷ ದಕ್ಷಿಣ ಕೊರಿಯಾದಲ್ಲಿ ನಡೆದ ಏಷ್ಯಾ ಪೆಸಿಫಿಕ್ ಟ್ರೇಲ್ ರನ್ ಓಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಸದ್ಯ ಬೆಂಗಳೂರು ಗಿರಿನಗರದ ನಿವಾಸಿಯಾಗಿರುವ ಅವರು ಮ್ಯಾರಥಾನ್ ಮತ್ತು ಕ್ರೀಡಾಸಕ್ತರಿಗೆ ತರಬೇತಿ ನೀಡುತ್ತಿದ್ದಾರೆ.

ಬ್ಯಾಕ್ ಯಾರ್ಡ್ ಎಂದರೇನು?: ಬ್ಯಾಕ್ ಯಾರ್ಡ್ ಎಂದರೆ ಗಂಟೆಗೆ 6.7 ಕಿ.ಮೀ. ನಂತೆ ಸತತವಾಗಿ ಓಡಬೇಕು. ಈ ಓಟದಲ್ಲಿ ಅತಿ ಹೆಚ್ಚು ಕಾಲ ಹೆಚ್ಚು ದೂರವನ್ನು ಕ್ರಮಿಸಿ ಅಂತಿಮವಾಗಿ ಓಟದಲ್ಲಿ ಉಳಿಯುವ ಒಬ್ಬ ಸ್ಪರ್ಧಿ ವಿಜೇತರಾಗುತ್ತಾರೆ.

ಅಶ್ವಿನಿ

ಡ್ರೀಮ್ ಯುನೈಟೆಡ್‌ಗೆ ಪ್ರಶಸ್ತಿ

ಬೆಂಗಳೂರು: ಜೈಹರಿ ಬರ್ಮನ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್ಎ ‘ಎ’ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ತಂಡವು 4–2 ರಿಂದ ಡಿವೈಇಎಸ್ ಎಫ್‌ಸಿ ತಂಡವನ್ನು ಮಣಿಸಿತು. ಚಾಂಪಿಯನ್ ಡ್ರೀಮ್ ಯುನೈಟೆಡ್ ಮತ್ತು ರನ್ನರ್ ಅಪ್ ಬೆಂಗಳೂರು ಸಿಟಿ ಎಫ್‌ಸಿ ತಂಡಗಳು 2025–26ರ ಸಾಲಿಗೆ ಸೂಪರ್ ಡಿವಿಷನ್‌ಗೆ ಮುಂಬಡ್ತಿ ಪಡೆದವು.

ಉತ್ತಮ ಗೋಲ್‌ಕೀಪರ್ ರಾಜು ಬಾಸ್ಫೋರ್ (ಬಿಡಿಯುಎಫ್‌ಸಿ), ಉತ್ತಮ ಡಿಫೆಂಡರ್ ಮೆಂಗ್ಲೆನ್‌ಪಾವೊ ಕಿಪ್‌ಗಾವೊ (ಬಿಸಿಎಫ್‌ಸಿ), ಉತ್ತಮ ಮಿಡ್ ಫೀಲ್ಡರ್ ಸತೀಶ್ ಕೆ. (ಎಸ್‌ಜಿಎಫ್‌ಸಿ), ಮೌಲ್ಯಯುತ ಆಟಗಾರ ಕೆ. ಲಾಲ್ರಿನ್‌ಫೆಲಾ (ಬಿಡಿಯುಎಫ್‌ಸಿ), ಗರಿಷ್ಠ ಸ್ಕೋರರ್ ಜೈಹರಿ ಬರ್ಮನ್ (ಬಿಡಿಯುಎಫ್‌ಸಿ, 20 ಗೋಲು) ಗೌರವಕ್ಕೆ ಪಾತ್ರವಾದರು.

ಮೇ 31ರಿಂದ ಆಟಗಾರರ ಹರಾಜು

ಮುಂಬೈ: ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) 12ನೇ ಆವೃತ್ತಿಯ ಆಟಗಾರರ ಹರಾಜು ಪ್ರಕ್ರಿಯೆ ಮೇ 31 ಮತ್ತು ಜೂನ್ 1ರಂದು ಮುಂಬೈನಲ್ಲಿ ನಡೆಯಲಿದೆ.

2014ರಲ್ಲಿ ಪಿಕೆಎಲ್ ಆರಂಭವಾಗಿದ್ದು, ಕಳೆದ 11 ವರ್ಷಗಳಲ್ಲಿ ಎಂಟು ಬೇರೆ ಬೇರೆ ತಂಡಗಳು ಪ್ರಶಸ್ತಿಯನ್ನು ಗೆದ್ದುಕೊಂಡಿವೆ. ಪಟ್ನಾ ಪೈರೇಟ್ಸ್ ತಂಡವು ಮೂರು ಬಾರಿ ಚಾಂಪಿಯನ್ ಆಗಿದ್ದರೆ, ಜೈಪುರ ಪಿಂಕ್ ಪ್ಯಾಂಥರ್ಸ್ ಎರಡು ಬಾರಿ ಕಿರೀಟ ಮುಡಿಗೇರಿಸಿಕೊಂಡಿದೆ. ಆರು ತಂಡಗಳು ತಲಾ ಒಂದು ಬಾರಿ ಪ್ರಶಸ್ತಿ ಗೆದ್ದಿವೆ.

ಕಳೆದ ಡಿಸೆಂಬರ್‌ನಲ್ಲಿ ನಡೆದ 11ನೇ ಆವೃತ್ತಿಯ ಫೈನಲ್‌ನಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿ ಹರಿಯಾಣ ಸ್ಟೀಲರ್ಸ್ ತಂಡವು ಮೊದಲ ಬಾರಿ ಕಿರೀಟವನ್ನು ಮುಡಿಗೇರಿಸಿಕೊಂಡಿತ್ತು.

ಇದೀಗ ಮತ್ತೊಂದು ಆವೃತ್ತಿಗೆ ಸಿದ್ಧತೆ ನಡೆದಿದ್ದು, ಹರಾಜಿನಲ್ಲಿ ಬಲಿಷ್ಠ ಆಟಗಾರರನ್ನು ತಮ್ಮತ್ತ ಸೆಳೆಯಲು ಲೀಗ್‌ನಲ್ಲಿರುವ 12 ಫ್ರಾಂಚೈಸಿಗಳು ಪೈಪೋಟಿ ನಡೆಸಲಿವೆ.

‘ಆಟಗಾರರ ಹರಾಜು ಪ್ರಕ್ರಿಯೆಯು ಬಲಿಷ್ಠ ತಂಡವನ್ನು ಕಟ್ಟಲು ಫ್ರಾಂಚೈಸಿಗಳಿಗೆ ಉತ್ತಮ ವೇದಿಕೆ. ತಮ್ಮ ಕಾರ್ಯತಂತ್ರ ಮತ್ತು ಮಹತ್ವಾಕಾಂಕ್ಷೆಯನ್ನು ಪ್ರದರ್ಶಿಸಲು ತಂಡಗಳಿಗೆ ಅವಕಾಶ ಸಿಗಲಿದೆ’ ಎಂದು ಆಯೋಜಕರಾದ ಮಶಾಲ್ ಸ್ಪೋರ್ಟ್ಸ್ ಬಿಸಿನೆಸ್ ಹೆಡ್ ಅನುಪಮ್ ಗೋಸ್ವಾಮಿ ಹೇಳಿದ್ದಾರೆ.

ಶನಿವಾರ, ಮೇ 17, 2025 | ₹ 7.00
www.prajavani.net
prajavani.net prajavani prajavani prajavani
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ರಸಾಸ್ವಾದ

ಮಾವಿನ ಹಣ್ಣಿನ ಸಿಹಿತಿನಿಸು

ವೇದಾವತಿ ಎಚ್.ಎಸ್.

ಕೊಕೊನಟ್ ಲಡ್ಡು

ಬೇಕಾಗುವ ಸಾಮಗ್ರಿಗಳು: ಡೆಸಿಕೇಟೆಡ್ ಕೊಕೊನಟ್ 1 ಕಪ್, ಸಿಹಿ ಮಾವಿನ ಹಣ್ಣಿನ ಪ್ಯೂರಿ (ಗಟ್ಟಿಯಾದ ರಸ), ಕಂಡೆನ್ಸಡ್ ಮಿಲ್ಕ್ 1/2 ಕಪ್.

ತಯಾರಿಸುವ ವಿಧಾನ: ಸಿಹಿ ಮಾವಿನ ಹಣ್ಣನ್ನು ತೆಗೆದುಕೊಂಡು ಅದರ ಸಿಪ್ಪೆ ತೆಗೆದು ಮಿಕ್ಸಿ ಜಾರಿಗೆ ಹಾಕಿ ಪ್ಯೂರಿ ತಯಾರಿಸಿಕೊಳ್ಳಿ. ಡೆಸಿಕೇಟೆಡ್ ಕೊಕೊನಟ್ ಬಾಣಲೆಗೆ ಹಾಕಿ ಸಣ್ಣ ಉರಿಯಲ್ಲಿ ಒಂದು ನಿಮಿಷ ಹುರಿಯಿರಿ. ಬಳಿಕ ಮಾವಿನ ಹಣ್ಣಿನ ಪ್ಯೂರಿ, ಕಂಡೆನ್ಸಡ್ ಮಿಲ್ಕ್ ಹಾಕಿ ಮಿಶ್ರಣ ಮಾಡಿ. ಗಟ್ಟಿಯಾಗುವವರೆಗೆ ಮಧ್ಯಮ ಉರಿಯಲ್ಲಿ ಮಗುಚಿ. ಗಟ್ಟಿಯಾಗಲು ಐದಾರು ನಿಮಿಷ ಸಾಕು. ಆರಿದ ಬಳಿಕ ನಿಮಗೆ ಬೇಕಾದ ಗಾತ್ರಕ್ಕೆ ಉಂಡೆಗಳನ್ನು ಕಟ್ಟಿ. ಕೊನೆಯಲ್ಲಿ ಡೆಸಿಕೇಟೆಡ್ ಕೊಕೊನಟ್‌ನಲ್ಲಿ ಉರುಳಿಸಿ.

ಬರ್ಫಿ

ಬೇಕಾಗುವ ಸಾಮಗ್ರಿಗಳು: ಹಾಲು 2 ಕಪ್ (500 ಎಮ್ ಎಲ್), ಸಕ್ಕರೆ 1 ಕಪ್, ಡೆಸಿಕೇಟೆಡ್ ಕೊಕನಟ್ ಮೂರುವರೆ ಕಪ್ (250 ಗ್ರಾಂ), ಸಿಹಿ ಮಾವಿನ ಹಣ್ಣು ಮಧ್ಯಮ ಗಾತ್ರದ್ದು 2, ಏಲಕ್ಕಿ ಪುಡಿ 1/2 ಟೀ ಚಮಚ, ತುಪ್ಪ 1 ಟೇಬಲ್ ಚಮಚ.

ತಯಾರಿಸುವ ವಿಧಾನ: ಮಾವಿನ ಹಣ್ಣಿನ ಸಿಪ್ಪೆ ತೆಗೆದು ಮಿಕ್ಸಿ ಜಾರಿಗೆ ಹಾಕಿ ಪೇಸ್ಟ್ ತಯಾರಿಸಿಕೊಳ್ಳಿ. ಹಾಲು ಮತ್ತು ಸಕ್ಕರೆಯನ್ನು ಬಾಣಲೆಗೆ ಹಾಕಿ ಸಕ್ಕರೆ ಕರಗುವವರೆಗೆ ಮಿಶ್ರಣ ಮಾಡಿ. ಬಳಿಕ ಡೆಸಿಕೇಟೆಡ್ ಕೊಕೊನಟ್ ಪೌಡರ್ ಸೇರಿಸಿ ಮಿಶ್ರಣ ಮಾಡಿ. ನಂತರ ತಯಾರಿಸಿಕೊಂಡ ಮಾವಿನ ಹಣ್ಣಿನ ಪೇಸ್ಟ್, ಏಲಕ್ಕಿ ಪುಡಿ ಸೇರಿಸಿ ಮಿಶ್ರಣ ಮಾಡಿ. ಮಿಶ್ರಣವು ಪೂರ್ತಿ ಗಟ್ಟಿಯಾಗುವವರೆಗೆ ಮಧ್ಯಮ ಉರಿಯಲ್ಲಿ ಮಗುಚಿ. ಮಿಶ್ರಣವು ಗಟ್ಟಿಯಾದ ಬಳಿಕ ತುಪ್ಪ ಸವರಿದ ತಟ್ಟೆಗೆ ಹಾಕಿ ಸಮತಟ್ಟಾಗಿ ಮಾಡಿ. ಈ ಬರ್ಫಿಯು ಗಟ್ಟಿಯಾಗಲು ಮೂರರಿಂದ ನಾಲ್ಕು ಗಂಟೆ ಬೇಕಾಗುತ್ತದೆ. ಬಳಿಕ ಕತ್ತರಿಸಿ ಸವಿಯಿರಿ.

ಕುಲ್ಫಿ

ಬೇಕಾಗುವ ಸಮಗ್ರಿಗಳು: ಹಾಲು 1 ಲೀಟರ್, ಸಕ್ಕರೆ 4 ಟೇಬಲ್ ಚಮಚ, ಸಿಹಿ ಮಾವಿನ ಹಣ್ಣು 2, ಏಲಕ್ಕಿ ಪುಡಿ 1/4 ಟೀ ಚಮಚ, ಅಲಂಕರಿಸಲು ಪಿಸ್ತಾ ಚೂರುಗಳು.

ತಯಾರಿಸುವ ವಿಧಾನ: ಹಾಲನ್ನು ಬಾಣಲೆಗೆ ಹಾಕಿ ಮಧ್ಯಮ ಉರಿಯಲ್ಲಿ ಕುದಿಸಿ. ಹಾಲು ಗಟ್ಟಿಯಾಗಿ ಅರ್ಧಕ್ಕೆ ಬಂದಾಗ ಸಕ್ಕರೆ ಸೇರಿಸಿ. ಸಕ್ಕರೆ ಪೂರ್ತಿ ಕರಗಿದ ಬಳಿಕ ಒಲೆಯನ್ನು ಆರಿಸಿ ಆರಲು ಬಿಡಿ. ಮಾವಿನ ಹಣ್ಣಿನ ಸಿಪ್ಪೆ ತೆಗೆದು ಮಿಕ್ಸಿ ಜಾರಿಗೆ ಹಾಕಿ. ಜೊತೆಗೆ ತಯಾರಿಸಿಕೊಂಡ ಹಾಲನ್ನು, ಏಲಕ್ಕಿ ಪುಡಿಯನ್ನು ಸೇರಿಸಿ ನುಣ್ಣಗೆ ಪೇಸ್ಟ್ ತಯಾರಿಸಿಕೊಳ್ಳಿ. ಇದನ್ನು ಚಿಕ್ಕ ಗ್ಲಾಸ್ ಅಥವಾ ಐಸ್‌ಕ್ರೀಮ್ ತಯಾರಿಸುವ ಮೌಲ್ಡ್ ಹಾಕಿ ಗಟ್ಟಿಯಾಗಿ ಮುಚ್ಚಿ ನಾಲ್ಕರಿಂದ ಐದು ಗಂಟೆ ರೆಫ್ರಿಜರೇಟರ್‌ನಲ್ಲಿಟ್ಟು ಬಳಿಕ ತೆಗೆದು ಕತ್ತರಿಸಿ. ಕೊನೆಯಲ್ಲಿ ಪಿಸ್ತಾದಿಂದ ಅಲಂಕರಿಸಿ ಸವಿಯಿರಿ.

ಸಾಬುದಾನಿ ಮ್ಯಾಂಗೋ ಫ್ರೂಟ್ಸ್

ಬೇಕಾಗುವ ಸಾಮಗ್ರಿಗಳು: ಸಾಬುದಾನಿ 1 ಕಪ್, ನೀರು ಒಂದೂವರೆ ಕಪ್, ಹಾಲು 1/2 ಲೀಟರ್, ವೆನಿಲ್ಲಾ ಕಸ್ಟರ್ಡ್ ಪೌಡರ್ 2 ಟೇಬಲ್ ಚಮಚ, ಸಕ್ಕರೆ ಒಂದೂವರೆ ಕಪ್ ಹಣ್ಣುಗಳು: ಸಿಹಿ ಮಾವಿನ ಹಣ್ಣು 1 ಕಪ್, ದ್ರಾಕ್ಷಿ 1/2 ಕಪ್, ಸೇಬು 1/2 ಕಪ್, ಸಪೋಟ 1/2 ಕಪ್, ದಾಳಿಂಬೆ 1/2 ಕಪ್, ಬಾಳೆಹಣ್ಣು 1/2 ಕಪ್, ಎಲ್ಲಾ ಹಣ್ಣುಗಳನ್ನು ಒಂದೇ ರೀತಿಯಲ್ಲಿ ಚಿಕ್ಕದಾಗಿ ಕತ್ತರಿಸಿಕೊಳ್ಳಿ. ನಿಮಗೆ ಇಷ್ಟವಾದ ಹಣ್ಣುಗಳನ್ನು ಹಾಕಬಹುದು.

ತಯಾರಿಸುವ ವಿಧಾನ: ಸಾಬುದಾನಿಯನ್ನು ತೊಳೆದು ನಂತರ ಬಾಣಲೆಯಲ್ಲಿ ನೀರನ್ನು ಹಾಕಿ ಮೆತ್ತಗೆ ಬೇಯಿಸಿಕೊಳ್ಳಿ. ಅದಕ್ಕೆ ಹಾಲು ಮತ್ತು ಸಕ್ಕರೆಯನ್ನು ಸೇರಿಸಿ ಕುದಿಸಿ. ವೆನಿಲ್ಲಾ ಕಸ್ಟರ್ಡ್ ಪೌಡರ್‌ಗೆ ಸ್ವಲ್ಪ ತಣ್ಣನೆಯ ಹಾಲನ್ನು ಹಾಕಿ ಮಿಶ್ರಣ ಮಾಡಿ. ಕುದಿಸಿದ ಮಿಶ್ರಣಕ್ಕೆ ಕರಗಿಸಿಕೊಂಡ ಕಸ್ಟರ್ಡ್ ಪೌಡರ್ ಮಿಶ್ರಣವನ್ನು ಹಾಕಿ. ಈ ಮಿಶ್ರಣವೂ ಗಟ್ಟಿಯಾಗುತ್ತಾ ಬಂದಾಗ ಒಲೆಯನ್ನು ಆರಿಸಿ ಪೂರ್ತಿ ಆರಲು ಬಿಡಿ. ಆರಿದ ನಂತರ ಹಣ್ಣುಗಳನ್ನು ಹಾಕಿ ಮಿಶ್ರಣ ಮಾಡಿ. ನಂತರ ಒಂದರಿಂದ ಎರಡು ಗಂಟೆ ಫ್ರಿಡ್ಜ್ ನಲ್ಲಿಟ್ಟು ತಣ್ಣಗೆ ಮಾಡಿ ಸವಿಯಿರಿ.

❖

ದಾಂಪತ್ಯ ಬಯಸುವುದೇನು?

ಮದುವೆಯ ಸಂದರ್ಭವೋ, ಎಂದೋ ನಡೆದ ವಿಷಮ ಘಟನೆಗಳನ್ನೋ ಕೆಲವರು ಜೀವನಪೂರ್ತಿ ಮನಸ್ಸಿನಲ್ಲೇ ಇಟ್ಟುಕೊಂಡು ತಾವೂ ಕೊರಗಿ, ಜತೆಗಾರ/ಗಾರ್ತಿಯನ್ನೂ ಹೀಯಾಳಿಸಿ ಮಾತನಾಡುವುದುಂಟು. ವರ್ಷಗಟ್ಟಲೇ ಹೀಯಾಳಿಕೆ, ಮೂದಲಿಕೆ, ಅವಮಾನ, ಹಿಂಸೆಯನ್ನು ತಾಳಿಕೊಂಡವರೂ ವೃದ್ಧಾಪ್ಯದಲ್ಲಿ ದಾಂಪತ್ಯದಿಂದ ವಿಮುಖವಾಗುವುದುಂಟು.

ಮಂಜುಶ್ರೀ ಎಂ. ಕಡಕೋಳ

ಎರಡು ಹೆಸರು, ಒಂದೆ ಉಸಿರು
ನಾನು ಪತಿ, ನೀನು ಸತಿ
ಒಂದೆ ದಂಪತಿ
–ಕುವೆಂಪು

ಮದುವೆಯಾದ ಹೊಸತರಲ್ಲಿ ಪ್ರತಿ ದಂಪತಿಗೂ ಈ ಮೇಲಿನ ಸಾಲುಗಳು ಅನ್ವಯ. ಆದರೆ, ದಾಂಪತ್ಯದ ಆರಂಭದಲ್ಲಿದ್ದ ಆ ಪ್ರೀತಿ, ಪ್ರಣಯ ವರುಷಗಳು ಉರುಳಿದಂತೆ ನಿಧಾನಕ್ಕೆ ನೇಪಥ್ಯಕ್ಕೆ ಸರಿಯತೊಡಗುತ್ತವೆ. ಅದುವರೆಗೆ ಕಾಣದ ಐಬು, ಸಬೂಬುಗಳು ಪರಸ್ಪರರಲ್ಲಿ ಕಾಣತೊಡಗುತ್ತವೆ. ಮಕ್ಕಳು, ಕುಟುಂಬದ ಜವಾಬ್ದಾರಿಗಳ ನಡುವೆ ಗಂಡ–ಹೆಂಡತಿ ಇಬ್ಬರೂ ಬದಲಾಗಿ, ತಮ್ಮೊಳಗಿನ ದಾಂಪತ್ಯ ಬಯಸಿದ್ದೇನು ಎಂದು ಪ್ರಶ್ನಿಸಿಕೊಂಡರೆ ಬಹುತೇಕರಿಗೆ ಉತ್ತರ ದೊರೆಯುವುದು ದುರ್ಲಭ.

ಗಂಡು–ಹೆಣ್ಣು ಪರಸ್ಪರರ ದೈಹಿಕ–ಮಾನಸಿಕ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಲುವಾಗಿ ರೂಪುಗೊಂಡಿರುವಂಥದ್ದೇ ವಿವಾಹ. ‘ಮದುವೆಯಾಗಿ ತಿಂಗಳಿಲ್ಲ, ನೋಡಿರಣ್ಣ ಹೇಗಿದೆ/ನಾನು ಕರೆದಾಗಲೆಲ್ಲಾ ಬರುವಳೆನ್ನ ಶಾರದೆ...’ ಅನ್ನುವ ಭಾವದಲ್ಲಿರುವ ಗಂಡನಿಗೆ ಹೆಂಡತಿ ತಾಯಿಯಾಗಿ ಬಡ್ತಿ ಪಡೆದಾಗಲೇ ತಾನೂ ಅಪ್ಪನಾದೆ ಎನ್ನುವ ಅರಿವು ಮೂಡುತ್ತದೆ. ತಂದೆ–ತಾಯಿಯಾಗಿ ಬಡ್ತಿ ಪಡೆದ ದಂಪತಿಗೆ, ತಮ್ಮೊಳಗಿನ ಗಂಡ–ಹೆಂಡತಿಯ ಸ್ಥಾನ ಸದ್ದಿಲ್ಲದೆ ನೇಪಥ್ಯಕ್ಕೆ ಸರಿಯುವುದೂ ಅರಿವಿಗೆ ಬಾರದು.

ಗಂಡು–ಹೆಣ್ಣಿನ ನಡುವಿನ ದಾಂಪತ್ಯ ಬಯಸುವುದು ಪರಸ್ಪರರ ಸುರಕ್ಷತಾ ಭಾವ. ಪರಸ್ಪರರ ಅಗತ್ಯಗಳನ್ನು ಪೂರೈಸಿಕೊಳ್ಳುವುದಷ್ಟೇ ಅಲ್ಲದೆ, ಇಬ್ಬರ ವ್ಯಕ್ತಿತ್ವಗಳೂ ಬೆಳಗಬೇಕೆನ್ನುವುದೇ ದಾಂಪತ್ಯದ ಉದ್ದೇಶ. ಆದರೆ, ಪುರುಷ ಪ್ರಧಾನ ಸಮಾಜದಲ್ಲಿ ಹೆಂಡತಿಯಾದವಳು ಎಂದಿಗೂ ಗಂಡ, ಆತನ ಮನೆಯವರು, ಮಕ್ಕಳ ಸೇವೆಗಷ್ಟೇ ಸೀಮಿತ ಅನ್ನುವಂಥ ಭಾವ ಇನ್ನೂ ಇರುವುದರಿಂದ ಅಲ್ಲಿ ಹೆಣ್ಣಿನ ನಿರ್ಧಾರ, ಅಸ್ತಿತ್ವ, ಸ್ವಾಭಿಮಾನಕ್ಕೆ ಜಾಗವಿಲ್ಲದಾಗಿದೆ. ಉದ್ಯೋಗಸ್ಥೆಯಾದರೂ, ಮನೆಕೆಲಸ, ಕೌಟುಂಬಿಕ ಜವಾಬ್ದಾರಿಗಳಿಂದ ಆಕೆಗೆ ಗಂಡಿನಷ್ಟು ವಿರಾಮ ದೊರೆಯುವುದು ಕಡಿಮೆಯೇ. ಕೆಲವರು ಇದಕ್ಕೆ ವ್ಯತಿರಿಕ್ತರೂ ಇರುತ್ತಾರೆ. ಗಂಡ–ಹೆಂಡತಿ ಇಬ್ಬರೂ ಪರಸ್ಪರರ ಬದ್ಧತೆ ಅರಿತುಕೊಂಡು, ಸಮಾನವಾಗಿ ಜವಾಬ್ದಾರಿ ಹಂಚಿಕೊಂಡಷ್ಟು ದಾಂಪತ್ಯದ ಚೆಲುವು ಹೆಚ್ಚುತ್ತದೆ.

ಭಾವನಾತ್ಮಕವಾಗಿ ಗಂಡಿನ ಆಸರೆ ಬಯಸುವ ಹೆಣ್ಣಿನ ಮಾನಸಿಕ ತುಮುಲಗಳನ್ನು ಗಂಡನಾದವನು ಅರ್ಥೈಸಿಕೊಳ್ಳುವಲ್ಲಿ ವಿಫಲನಾದಾಗಲೇ ದಾಂಪತ್ಯದಲ್ಲಿ ಏರುಪೇರಾಗುತ್ತದೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ಪಿತೃಪ್ರಧಾನ ಮೌಲ್ಯಗಳ ಅಚ್ಚಿನ ಪ್ರಭಾವದಲ್ಲಿರುವ ಗಂಡು, ಅದರಿಂದ ಹೊರಬರಲಾಗದೇ ಹೆಣ್ಣನ್ನು ನಿಯಂತ್ರಿಸುವ ಮೂಲಕ ದಾಂಪತ್ಯದಲ್ಲೂ ಮೇಲುಗೈ ಸಾಧಿಸಲು ಪ್ರಯತ್ನಿಸುತ್ತಾನೆ. ಲೈಂಗಿಕತೆ, ಮಕ್ಕಳ ಮೂಲಕ ಹೆಣ್ಣನ್ನು ನಿಯಂತ್ರಿಸಬಹುದೆಂಬುದೇ ಇಂದಿಗೂ ಬಹುತೇಕ ಪುರುಷರ ನಂಬಿಕೆಯಾಗಿದೆ.

ತವರುಮನೆ ಬಿಟ್ಟು ತನಗಾಗಿ ಬಂದ ಹೆಣ್ಣನ್ನು ಇಂದಿಗೂ ಮನೆಗೆಲಸದವಳಂತೆಯೇ ನಡೆಸಿಕೊಳ್ಳುವುದುಂಟು. ತನ್ನ ವ್ಯಕ್ತಿತ್ವ, ಉದ್ಯೋಗ, ಸಮಾಜದಲ್ಲಿನ ಸ್ಥಾನಮಾನಕ್ಕೆ ಪರೋಕ್ಷವಾಗಿ ಹೆಂಡತಿಯೂ ಉತ್ಪಾದಕತೆಯ ಭಾಗವಾಗಿರುತ್ತಾಳೆ ಎಂಬುದನ್ನೇ ಮರೆತವನಿಗೆ ದಾಂಪತ್ಯದಲ್ಲಿ ಒಲುಮೆಯ ಕೊರತೆ ಕಾಡಿದಾಗಲೂ ತನ್ನ ಅಹಂಕಾರವೇ ಮುಖ್ಯವಾಗುತ್ತದೆ.

ಗಂಡ ಇರುವುದೇ ದುಡಿಯಲು, ಸ್ಟೇಟಸ್ ಕಾಪಾಡಿಕೊಳ್ಳಲು ಒಡವೆ, ವಸ್ತ್ರದಲ್ಲೇ ಮೈಮರೆಯುವ ಹೆಂಡತಿಗೆ ಆತನೊಳಗಿನ ಒತ್ತಡದ ಬದುಕು ಅರಿವಿಗೂ ಬಾರದು. ಹಾಗಿದ್ದರೆ ದಾಂಪತ್ಯ ಬಯಸುವುದೇನು ಎಂಬುದನ್ನು ಗಂಡ–ಹೆಂಡತಿ ಇಬ್ಬರೂ ಪ್ರಶ್ನಿಸಿಕೊಂಡರೆ, ಪ್ರೀತಿ, ಗೌರವ, ನಂಬಿಕೆ, ವಿಶ್ವಾಸ ಎಂಬ ಸರಳ ಉತ್ತರವೇನೋ ದೊರೆಯಬಲ್ಲದು. ಆದರೆ, ಅದನ್ನು ದಾಂಪತ್ಯದಲ್ಲಿ ಅಳವಡಿಸಿಕೊಳ್ಳಲು ಹೊರಟಾಗ ಕಾಡುವ ಸಮಸ್ಯೆಗಳು ನೂರಾರು. ಅಹಂ, ಅನುಮಾನ, ಒತ್ತಡ, ಕೋಪಗಳನ್ನು ನಿಯಂತ್ರಿಸಿಕೊಳ್ಳದ ಹೊರತು ದಾಂಪತ್ಯದಲ್ಲಿ ಅನುರಾಗ ಅರಳದು ಎನ್ನುವ ಸತ್ಯವನ್ನು ಅವರವರೇ ಕಂಡುಕೊಳ್ಳಬೇಕು ಎನ್ನುತ್ತಾರೆ ಆಪ್ತ ಸಮಾಲೋಚಕಿ ವೇದಾವತಿ ಹಿರೇಮಠ.

ಮದುವೆಯ ಸಂದರ್ಭವೋ, ಎಂದೋ ನಡೆದ ವಿಷಮ ಘಟನೆಗಳನ್ನೋ ಕೆಲವರು ಜೀವನಪೂರ್ತಿ ಮನಸ್ಸಿನಲ್ಲೇ ಇಟ್ಟುಕೊಂಡು ತಾವೂ ಕೊರಗಿ, ಜತೆಗಾರ/ಗಾರ್ತಿಯನ್ನೂ ಹೀಯಾಳಿಸಿ ಮಾತನಾಡುವುದುಂಟು. ವರ್ಷಗಟ್ಟಲೇ ಹೀಯಾಳಿಕೆ, ಮೂದಲಿಕೆ, ಅವಮಾನ, ಹಿಂಸೆಯನ್ನು ತಾಳಿಕೊಂಡವರೂ ವೃದ್ಧಾಪ್ಯದಲ್ಲಿ ದಾಂಪತ್ಯದಿಂದ ವಿಮುಖವಾಗುವುದುಂಟು. ತಪ್ಪುಗಳು ನಡೆದಾಗ ಪರಸ್ಪರರು ಕ್ಷಮಿಸಿ, ಮುಂದೆ ನಡೆಯಬೇಕಾದ ಹಾದಿಯ ಕುರಿತು ಯೋಚಿಸುವುದು ಇಬ್ಬರಿಗೂ ಕ್ಷೇಮ. ಆದರೆ, ಪದೇ ಪದೇ ಅಂಥವೇ ತಪ್ಪುಗಳು ನಡೆದಾಗ ವಿಮುಖರಾಗುವುದು ಉತ್ತಮ ಎಂಬುದು ವೇದಾ ಅವರ ಅಭಿಮತ.

ಗಂಡ–ಹೆಂಡತಿ ಇಬ್ಬರಲ್ಲೂ ಮುಕ್ತತೆ, ವಿಶ್ವಾಸ, ನಂಬಿಕೆಯ ಜತೆಗೆ ಯಾವುದೇ ಸಂದರ್ಭವನ್ನೂ ಒಟ್ಟಾಗಿ ಎದುರಿಸುವ ಮನೋಭಾವ ಇದ್ದಲ್ಲಿ ಮಾತ್ರ ದಾಂಪತ್ಯ ಯಶಸ್ವಿಯಾಗಲ್ಲದು. ‘ಯಶಸ್ವಿ ಪುರುಷನ ಹಿಂದೆ ಹೆಣ್ಣು ಇರುತ್ತಾಳೆ’ ಎಂಬ ಮಾತಿನಂತೆ ಯಶಸ್ವಿ ಮಹಿಳೆಯ ಹಿಂದೆ ಪುರುಷನೂ ಇರುತ್ತಾನೆ ಎಂಬ ಭಾವ ಮೂಡದ ಹೊರತು ದಾಂಪತ್ಯ ಪರಿಪೂರ್ಣವಾಗದು. ಅರ್ಧನಾರೀಶ್ವರನ ಹಿಂದಿನ ಆಶಯವೂ ಅದೇ ಅಲ್ಲವೇ?

❖

ಅರ್ಥ ಮಾಡಿಕೊಳ್ಳಬೇಕು

ಗಂಡ, ಹೆಂಡತಿ ಇಬ್ಬರೂ ಪರಸ್ಪರ ಅರ್ಥ ಮಾಡಿಕೊಳ್ಳುವುದು ಮುಖ್ಯ. ನಮ್ಮಲ್ಲಿನ ನೆಗೆಟಿವ್ ಗುಣಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ, ಅದನ್ನು ನಿವಾರಿಸಿಕೊಳ್ಳುವುದು ಮುಖ್ಯ. ನಿರ್ಲಕ್ಷಿಸಿದಷ್ಟೂ ಅದು ಸಮಸ್ಯೆಯಾಗಿ ಬೆಳೆಯುತ್ತದೆ. ಹಿಂದೆ ಗಂಡ– ಹೆಂಡತಿ ನಡುವೆ ವಯಸ್ಸಿನ ಅಂತರ ಜಾಸ್ತಿ ಇರುತ್ತಿತ್ತು. ಆಗ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿತ್ತು. ಆದರೆ, ಈಗ ವಯಸ್ಸಿನ ಅಂತರ ಕಡಿಮೆಯಾಗಿರುವುದರಿಂದ ಇಬ್ಬರೂ ಅರ್ಥ ಮಾಡಿಕೊಳ್ಳಲು ಸುಲಭವಾಗಿದೆ. ಅಹಂ ಇಬ್ಬರ ನಡುವೆ ಸುಳಿಯದಂತೆ ನೋಡಕೊಳ್ಳಬೇಕು. ಅಗತ್ಯಬಿದ್ದರೆ ಕೌನ್ಸೆಲಿಂಗ್ ಮಾಡಿಸಿಕೊಳ್ಳುವುದು ಒಳ್ಳೆಯದು. ಇಬ್ಬರೂ ತಾಳ್ಮೆ ವಹಿಸಿ ತಿದ್ದಿಕೊಳ್ಳಲು ಅವಕಾಶ ನೀಡಬೇಕು. ಇನ್ನು ಹೊಂದಾಣಿಕೆ ಸಾಧ್ಯವೇ ಇಲ್ಲ ಅನ್ನುವಂಥ ಸಂದರ್ಭದಲ್ಲಿ ದೂರವಾಗುವುದೇ ಲೇಸು.

ಸಮುದ್ಯತಾ ಕಂಜರ್ಪಣೆ, ಲೇಖಕಿ

ಜಗಳವಿದ್ದರೆ ಪ್ರೀತಿ ಹೆಚ್ಚು!

ಹೆಂಡತಿ, ಗಂಡನ ಗುಲಾಮಳಲ್ಲ ಎಂಬುದನ್ನು ಮೊದಲು ಅರಿಯಬೇಕು. ಜೀವನ ಸಂವಿಧಾನಕ್ಕೆ ಉನ್ನತ ಶಿಕ್ಷಣ ಬೇಕಿಲ್ಲ. ಸಾಮಾನ್ಯ ಜ್ಞಾನವಿದ್ದರೆ ಸಾಕು. ಗಂಡ–ಹೆಂಡತಿ ಜಗಳ ಆಡಲೇಬೇಕು. ಆದರೆ, ಎಲ್ಲರೆದುರು ಜಗಳವಾಗಬೇಡಿ. ಜಗಳವಾಡದಿದ್ದರೆ ಪ್ರೀತಿಗೆ ಅರ್ಥವಿರುವುದಿಲ್ಲ. ಆ ಜಗಳ ಉಲ್ಬಣವಾಗಬಾರದು, ಅಹಂಗೆ ಕಾರಣವಾಗಬಾರದು. ಅತಿರೇಕಕ್ಕೆ ಹೋದಾಗ ಆ ವಿಷಯವನ್ನು ಬಿಟ್ಟು ಬೇರೆಯತ್ತ ಗಮನ ಹರಿಸಿ, ಆಮೇಲೆ ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ಸಂಸಾರದಲ್ಲಿ ಏನೇ ನಿರ್ಧಾರ ಕೈಗೊಳ್ಳುವುದಕ್ಕೂ ಮುನ್ನ ನಿಮ್ಮಾಕೆಗೆ ಒಂದು ಮಾತು ಕೇಳಿ. ದುಡ್ಡೇ ಮುಖ್ಯವಲ್ಲ, ಸಾಮರಸ್ಯ, ಪ್ರೀತಿ, ಅವರ ಇಷ್ಟಾನಿಷ್ಟಗಳ ಕಡೆಗೆ ಗಮನವಿರಲಿ. ಕೆಲವೊಮ್ಮೆ ಅಂತಿಮ ನಿರ್ಧಾರ ಕೈಗೊಳ್ಳುವುದನ್ನು ಅವರಿಗೇ ಬಿಡಿ. ಹೆಣ್ಣುಮಕ್ಕಳಿಗೆ ಗೌರವ ಕೊಟ್ಟರೆ ದಾಂಪತ್ಯದಲ್ಲಿ ಪ್ರೀತಿ ತಾನಾಗಿಯೇ ಹೆಚ್ಚುತ್ತದೆ.

‘ಮುಖ್ಯಮಂತ್ರಿ’ ಚಂದ್ರು

ಮೂರನೆಯವರನ್ನು ದೂರವಿಡಿ

ಗಂಡ–ಹೆಂಡತಿ ಇಬ್ಬರೂ ತಮ್ಮ ಜೀವನದಲ್ಲಿ ಮೂರನೆಯವರನ್ನು ಆದಷ್ಟು ದೂರವಿಡುವುದು ಕ್ಷೇಮಕರ. ಊಟದಲ್ಲಿ ಉಪ್ಪಿನಕಾಯಿ, ಪಲ್ಯದಂತೆ ನಿಮ್ಮ ಪೋಷಕರು, ಸ್ನೇಹಿತರು, ಸಂಬಂಧಿಕರು ಇರಬೇಕು. ಆದರೆ, ಅವರೇ ನಿಮ್ಮಿಬ್ಬರ ಮೇಲೆ ಮೇಲುಗೈ ಸಾಧಿಸುವಂತಿರಬಾರದು.

ವೇದಾವತಿ ಹಿರೇಮಠ
ಆಪ್ತ ಸಮಾಲೋಚಕಿ

ಪ್ರೀತಿಯೇ ಮುಖ್ಯ

ಮದುವೆಯಾದ ಹೊಸತರಲ್ಲಿ ಚಂದ್ರು ದಿನಕ್ಕೆ ಮೂರು ಸಿನಿಮಾದಲ್ಲಿ ನಟಿಸುತ್ತಿದ್ದರು. ಆಗೆಲ್ಲ ಜೀವನವೇ ಇಷ್ಟೇ ಅಂದುಕೊಂಡಿದ್ದೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದ ನನಗೆ ಸಿಟಿ ಜೀವನ ಹೊಸದಾಗಿತ್ತು. ಆದರೆ, ಗಂಡನ ಪ್ರೀತಿ, ಗೌರವ ನನ್ನನ್ನು ಬೆಳೆಸಿತು. ಮನೆಗೇ ಸೀಮಿತವಾಗಬೇಡ. ಹೊರಗೆ ಪ್ರಪಂಚ ನೋಡು ಅಂತ ಅವರು ಪ್ರೋತ್ಸಾಹಿಸಿದರು. ಹಾಗಾಗಿ, ಇಂದು ರಂಗಭೂಮಿ, ಸಿನಿಮಾ, ರಾಜಕಾರಣದಲ್ಲಿ ನನಗೂ ಒಡನಾಟವಿದೆ.

42 ವರ್ಷಗಳ ನಮ್ಮ ದಾಂಪತ್ಯದಲ್ಲಿ ಇಬ್ಬರೂ ಅನುಸರಿಸಿಕೊಂಡು ಹೋಗಿದ್ದೇವೆ. ಏಳುಬೀಳು ಕಂಡಿದ್ದೇವೆ. ಆದರೆ, ಯಾವುದಕ್ಕೂ ಧೈರ್ಯಗೆಟ್ಟಿಲ್ಲ. ಪರಸ್ಪರ ಗೌರವ, ಪ್ರೀತಿಯೇ ನಮ್ಮನ್ನು ಕಾಪಾಡಿದೆ.

ಪದ್ಮಾ ಚಂದ್ರು, ‘ಮುಖ್ಯಮಂತ್ರಿ’ ಚಂದ್ರು ಪತ್ನಿ

ಟ್ರೆಂಡಿ ಬ್ರೇಸ್‌ಲೆಟ್ಸ್

ಫ್ಯಾಷನ್

ಪವಿತ್ರಾ ಭಟ್



ಹೆಣ್ಣುಮಕ್ಕಳು ಕೈಗೆ ಬಳೆ ತೊಡುವುದು ಸಂಪ್ರದಾಯ. ಆದರೆ ಈಗಿನ ಫ್ಯಾಷನ್ ಯುಗದಲ್ಲಿ ಬಳೆಗಳಿಗೆ ಪರ್ಯಾಯವಾಗಿ ಬ್ರೇಸ್‌ಲೆಟ್ಸ್ ಅಥವಾ ಬ್ಯಾಂಡ್‌ಗಳು ಟ್ರೆಂಡ್‌ನಲ್ಲಿವೆ.

ಕಾಲೇಜು ಹುಡುಗಿಯರಿಂದ ಹಿಡಿದು ಕಚೇರಿಗೆ ಹೋಗುವ ಮಹಿಳೆಯರವರೆಗೂ ಬ್ರೇಸ್‌ಲೆಟ್ಸ್‌ಗಳಿಗೆ ಮರುಳಾಗದಿರುವವರು ಯಾರಿಲ್ಲ. ಅಂಗಡಿಯ ಮುಂದೆ ನಿಂತಾಗಲೆಲ್ಲ ತರಹೇವಾರಿ ಬ್ರೇಸ್‌ಲೆಟ್ಸ್ ನೋಡಿ ಒಂದಾದರೂ ಕೊಳ್ಳುವ ಮನಸ್ಸಾಗುವುದು ನಿಶ್ಚಿತ. ಬೆಳ್ಳಿ, ಚಿನ್ನದ ಬ್ರೇಸ್‌ಲೆಟ್ಸ್ ದುಬಾರಿಯಾಗಬಹುದು. ಅವುಗಳನ್ನು ಒಮ್ಮೆ ಕೊಂಡರೂ ಎಲ್ಲಾ ಉಡುಪಿಗೆ ಹೊಂದಾಣಿಕೆಯಾಗದಿರಬಹುದು. ಹೀಗಾಗಿ ಟ್ರೆಂಡ್‌ಗೆ ತಕ್ಕಹಾಗೆ ಕೈಗೆ ಆಭರಣ ಧರಿಸಬಹುದು. ಹಾಗಾದರೆ ಯಾವೆಲ್ಲಾ ವಿಧದ ಬ್ರೇಸ್‌ಲೆಟ್ಸ್ ಕೊಳ್ಳಬಹುದು ಎನ್ನುವುದಕ್ಕೆ ಇಲ್ಲಿವೆ ಟ್ರೆಂಡಿ ಐಡಿಯಾ.

ಉಲ್ಲನ್ ಬ್ರೇಸ್‌ಲೆಟ್ಸ್: ಕಡಿಮೆ ದರದಲ್ಲಿ ವಿವಿಧ ಬಣ್ಣಗಳಲ್ಲಿ ಉಲ್ಲನ್ ಬ್ರೇಸ್‌ಲೆಟ್ಸ್‌ಗಳು ದೊರೆಯುತ್ತವೆ. ಧರಿಸಲೂ ಹಗುರವಾಗಿರುವ ಇವು ಟ್ರೆಂಡಿಯಾಗಿಯೂ ಕಾಣಿಸುತ್ತವೆ. ಮಣಿಗಳ ಅಥವಾ ಮುತ್ತು ಪೋಣಿಸಿರುವ ಉಲ್ಲನ್ ಬ್ರೇಸ್‌ಲೆಟ್ಸ್‌ಗಳನ್ನು ವಿವಿಧ ವಿನ್ಯಾಸಗಳಲ್ಲಿ ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದು.

ಮಣಿಗಳ ಬ್ರೇಸ್‌ಲೆಟ್ಸ್: ಬಣ್ಣ ಬಣ್ಣದ ಮಣಿಗಳು ಅಥವಾ ಬಣ್ಣದ ಪುಟ್ಟ ಪುಟ್ಟ ಕಲ್ಲುಗಳಿಂದ ತಯಾರು ಮಾಡಿರುವ ಬ್ರೇಸ್‌ಲೆಟ್ಸ್‌ಗಳು ಕೈಗಳ ಅಂದವನ್ನು ಹೆಚ್ಚಿಸುತ್ತವೆ. ಪೋಣಿಸಿದ ಮಣಿಗಳ ನಡುವೆ ಚಿಕ್ಕ ಗೆಜ್ಜೆ ಇದ್ದರೆ ಇನ್ನೂ ಆಕರ್ಷಕ.

ಲೆದರ್ ಬ್ರೇಸ್‌ಲೆಟ್ಸ್: ಜಡೆಯಂತೆ ಹೆಣೆದಿರುವ, ಒಂದಕ್ಕೊಂದು ಬೆಸೆದಿರುವಂತೆ ಸುತ್ತಿರುವ ಲೆದರ್ ಬ್ರೇಸ್‌ಲೆಟ್ಸ್‌ಗಳು ಟ್ರೆಂಡಿಯಾಗಿ ಕಾಣಿಸುತ್ತವೆ. ಜೀನ್ಸ್, ಸಿಂಗಲ್ ಪೀಸ್ ಡ್ರೆಸ್‌ಗಳಿಗೆ ಉತ್ತಮ ಕಾಂಬಿನೇಷನ್ ಆಗಿರುತ್ತದೆ. ಧರಿಸಲೂ ಆರಾಮದಾಯಕ ಎನಿಸುತ್ತದೆ.

ಬಟ್ಟೆಯ ಬ್ರೇಸ್‌ಲೆಟ್ಸ್: ಹತ್ತಿ, ರೇಷ್ಮೆ ಅಥವಾ ಮೃದು ಬಟ್ಟೆಗಳಿಂದ ತಯಾರಿಸಿದ ಬ್ರೇಸ್‌ಲೆಟ್ಸ್‌ಗಳು ಎಲ್ಲಾ ರೀತಿಯ ಉಡುಪುಗಳಿಗೆ ಒಪ್ಪುವಂತಿರುತ್ತವೆ. ಬಟ್ಟೆಯ ಬ್ರೇಸ್‌ಲೆಟ್ಸ್‌ಗಳನ್ನು ವಿವಿಧ ರೀತಿಯಲ್ಲಿ ವಿನ್ಯಾಸ ಮಾಡಿಕೊಳ್ಳಬಹುದು. ಬಳೆಗಳಿಗೆ ನೇಯಬಹುದು, ಬಟ್ಟೆಯ ಮೇಲೆ ಕಸೂತಿ ಮಾಡಿ ಎಲಾಸ್ಟಿಕ್ ಎಳೆಗಳಿಗೆ ಸುತ್ತಿಕೊಳ್ಳಬಹುದು. ಇವು ಕೈಗಳಿಗೆ ಅಂದವಾಗಿಯೂ ಕಾಣುತ್ತವೆ.

ರಬ್ಬರ್ ಬ್ರೇಸ್‌ಲೆಟ್ಸ್: ಈಗೀಗ ರಬ್ಬರ್ ಬ್ರೇಸ್‌ಲೆಟ್ಸ್‌ಗಳನ್ನು ಹೆಚ್ಚು ಕಾಣಬಹುದು. ಫಿಟ್‌ನೆಸ್, ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು ರಬ್ಬರ್ ಬ್ರೇಸ್‌ಲೆಟ್ಸ್ ಬಳಸುತ್ತಾರೆ. ಇವುಗಳಿಗೆ ನೀರು ತಾಗಿದರೂ ಹಾಳಾಗುವುದಿಲ್ಲ. ದೀರ್ಘ ಬಾಳಿಕೆಗೆ ಇವು ಉತ್ತಮ ಆಯ್ಕೆ. ಕೆಲವು ಕಾರ್ಯಕ್ರಮಗಳಲ್ಲಿ ಗುರುತಿಸುವಿಕೆಯ ಭಾಗವಾಗಿ ರಬ್ಬರ್ ಬ್ರೇಸ್‌ಲೆಟ್ಸ್‌ಗಳನ್ನು ನೀಡುವ ರೂಢಿಯೂ ಇದೆ.

ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಬ್ರೇಸ್‌ಲೆಟ್ಸ್‌ಗಳೂ ಮಾರುಕಟ್ಟೆಯಲ್ಲಿ ಲಭ್ಯ ಇವೆ. ಥೇಟ್ ವಾಚ್‌ನಂತೆಯೇ ಕಾಣುವ ಬ್ರೇಸ್‌ಲೆಟ್ಸ್‌ಗಳು ದೈಹಿಕ ಚಟುವಟಿಕೆ, ಆರೋಗ್ಯವನ್ನು ಟ್ರ್ಯಾಕ್ ಮಾಡಲು ನೆರವಾಗುತ್ತವೆ. ಮಣಿಕಟ್ಟಿನ ಮೇಲೆ ಪುಟ್ಟ ಬ್ಯಾಂಡ್‌ನಂತೆ ಕಾಣುವ ಇವು ಟ್ರೆಂಡಿಯಾಗಿ ಕಾಣಿಸುತ್ತವೆ.

❖

ಸಿಟ್ಟು ತೋರುವುದೇಕೆ?

ಅಂತರಂಗ

ಅಕ್ಷರ ದಾಮ್ಲೆ

- **ಸರ್, ನನಗೆ ವಿಪರೀತ ಕೋಪ ಬರುತ್ತದೆ. ಸಿಟ್ಟು ಸಕಾರಣವಾದರೂ, ಹೊಡೆಯುವಷ್ಟು, ಕೆಟ್ಟದಾಗಿ ಬೈದುಕೊಳ್ಳುವಷ್ಟು ಕೋಪ ಬರುತ್ತದೆ. ಬದುಕಿನುದ್ದಕ್ಕೂ ಅನುಭವಿಸಿದ ಹತಾಶೆಗಳು, ಸೋಲು, ಅವಮಾನ. ಹತಾಶೆ ಮತ್ತು ಕೋಪ ಒಟ್ಟೊಟ್ಟಿಗೆ ನನ್ನನ್ನು ವ್ಯಗ್ರ್ಯಳನ್ನಾಗಿ ಮಾಡುತ್ತಿದೆ. ಇದರಿಂದ ನಿಜಕ್ಕೂ ಹೊರಬರುವುದು ಹೇಗೆ?**

‘ಕೋಪ ಬರುವುದು ತಪ್ಪಾ?’ ಅಂತ ಮೊದಲು ಒಂದು ಜಿಜ್ಞಾಸೆ ಮಾಡೋಣ. ಕೋಪ ಒಂದು ಕೆಟ್ಟ ವಿಷಯ ಅಂತ ಒಂದು ತಪ್ಪು ಕಲ್ಪನೆ ಅನೇಕರಲ್ಲಿದೆ. ಕೋಪ ಬರುತ್ತದೆ ಅಂತಾದಾಗ ಜನರು ಅದನ್ನು ಒಂದು ಋಣಾತ್ಮಕ ಅಂಶವಾಗಿ ಪರಿಗಣಿಸುತ್ತಾರೆ. ಎಷ್ಟೋ ಬಾರಿ, ಕೋಪವನ್ನು ತಮ್ಮೊಳಗೇ ಅದುಮಿಟ್ಟುಕೊಳ್ಳುತ್ತಾರೆ. ಸಮಾಧಾನಿಗಳು ಅಥವಾ ತಾಳ್ಮೆ ಇರುವವರು ಅಂತ ಹೊರ ಪ್ರಪಂಚಕ್ಕೆ ಬಿಂಬಿಸುತ್ತಾರೆ. ಆದರೆ, ಇದನ್ನು ಮನಃಶ್ಶಾಸ್ತ್ರೀಯ ನೆಲೆಯಲ್ಲಿ ಪ್ಯಾಸಿವ್ ಅಗ್ರೆಷನ್ (passive aggression) ಕರೆಯುತ್ತೇವೆ.

ಇಂತಹ ವ್ಯಕ್ತಿಗಳು ತಮ್ಮ ಅಸಮಾಧಾನವನ್ನು ಅಸಹಕಾರ ತೋರಿಸಿ, ಮಾತಾಡದೇ ವ್ಯಕ್ತಪಡಿಸುತ್ತಾರೆ. ಎಷ್ಟೋ ಬಾರಿ ಇದು ಹೊರ ಪ್ರಪಂಚಕ್ಕೆ ತಿಳಿಯದೇ ಹೋದರೂ, ಅಂತಹವರ ಜೊತೆ ಇರುವವರಿಗೆ ಸಂಕಟವನ್ನುಂಟುಮಾಡುತ್ತದೆ. ತಮ್ಮ ಬಗ್ಗೆಯೇ ಪ್ರಶ್ನೆ ಕೇಳಿಕೊಳ್ಳುವಂತೆ ಮಾಡುತ್ತದೆ. ಪ್ಯಾಸಿವ್ ಅಗ್ರೆಷನ್ ಇರುವವರು ತಮ್ಮೊಳಗೇ ಜ್ವಾಲಾಮುಖಿಯನ್ನು ಪೋಷಿಸುತ್ತಿರುತ್ತಾರೆ. ಆಮೇಲೆ ಇನ್ಯಾವುದೋ ಒಂದು ದಿನ ಅದು ಒಂದು ಸಣ್ಣ ವಿಷಯಕ್ಕೆ ಹೊರಬರಬಹುದು. ಅಥವಾ ಅದು ಅವರ ಆರೋಗ್ಯದ ಮೇಲೆಯೇ ಪರಿಣಾಮ ಬೀರಬಹುದು. ಸಾಮಾನ್ಯವಾಗಿ ಪ್ಯಾಸಿವ್ ಅಗ್ರೆಷನ್ ಒಳ್ಳೆಯ ವಿಚಾರವಲ್ಲ.

ಕೋಪವನ್ನು ತೀಕ್ಷ್ಣವಾಗಿ ಬಿಂಬಿಸಿದರೆ ಅದು ಸರಿಯಾದ ವರ್ತನೆಯೇ? ಕೆಟ್ಟದಾಗಿ ಬೈದು, ಹೊಡೆದು ತೋರಿಸುವುದೂ ಸಮಸ್ಯಾತ್ಮಕವೇ. ಕೋಪಕ್ಕೆ ತುತ್ತಾದವರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕೋಪಿಷ್ಠರನ್ನು ದ್ವೇಷಿಸಲು ಅಥವಾ ದೂರವಿರಲು ಆರಂಭಿಸಬಹುದು. ಸಾಮಾಜಿಕ ಆರೋಗ್ಯದ ಮೇಲೆಯೂ ದುಷ್ಪರಿಣಾಮ ಉಂಟಾಗುತ್ತದೆ. ಅದರ ಜೊತೆಗೆ, ಜನರು ತಪ್ಪು ಅವರದ್ದೇ ಇದ್ದರೂ, ತಮ್ಮದೇ ಆದಂತಹ ಪ್ರತಿರೋಧವನ್ನು ತೋರಿಸುತ್ತಾರೆ. ತಮ್ಮ ತಪ್ಪನ್ನು ತಿದ್ದಿಕೊಳ್ಳುವ ಬದಲು, ಸಮರ್ಥಿಸಲು ತೊಡಗುತ್ತಾರೆ. ಇದರಿಂದ ಸಮಸ್ಯೆ ಪರಿಹಾರವಾಗುವ ಬದಲು, ಇನ್ನೂ ಜಟಿಲವಾಗುತ್ತದೆ.

ಮುಂದಿನವಾರಕ್ಕೆ ಸಾತ್ವಿಕ ಕೋಪ ತೋರಿಸುವುದು ಹೇಗೆ?

ಶನಿವಾರ, ಮೇ 17, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿರಾಟ್..ವಿರಾಟ್...

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ತಾಲೀಮು ನಡೆಸಿದರು

ಪ್ರಸಕ್ತ ಐಪಿಎಲ್‌ನಲ್ಲಿ ಸಾಧನೆ

ಪಂದ್ಯ	ರನ್	ಅರ್ಧಶತಕ	ಶ್ರೇಷ್ಠ
11	505	7	73

ಕರ್ನಾಟಕಕ್ಕೆ ನೆರವು ನೀಡಲು ಕ್ರಮ: ಕುಮಾರಸ್ವಾಮಿ

ಎಲೆಕ್ಟ್ರಿಕ್ ಬಸ್: ಕೇಂದ್ರಕ್ಕೆ ಪ್ರಸ್ತಾವ 4

ರಾಜ್ಯವ್ಯಾಪಿ ಶೇ 73, ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 36ರಷ್ಟು ಪ್ರಗತಿ: ನ್ಯಾ.ನಾಗಮೋಹನ ದಾಸ್

ಸಮೀಕ್ಷೆ: 25ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳ ದತ್ತಾಂಶ ಸಂಗ್ರಹಕ್ಕೆ ನಡೆದಿರುವ ಸಮೀಕ್ಷೆಯ ಅವಧಿಯನ್ನು ಇದೇ 25ರವರೆಗೆ ವಿಸ್ತರಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಒಳ ಮೀಸಲಾತಿ ಕುರಿತ ಏಕಸದಸ್ಯ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಅವರು ಈ ವಿಷಯ ತಿಳಿಸಿದರು.

ಮೇ 16ರವರೆಗೆ ಪರಿಶಿಷ್ಟ ಜಾತಿಯ ಸುಮಾರು 20 ಲಕ್ಷ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ. ರಾಜ್ಯವ್ಯಾಪಿ ಶೇ 73.22 ರಷ್ಟು ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 36 ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ ಎಂದು ಅವರು ಹೇಳಿದರು.

ಸಮೀಕ್ಷೆ ವೇಳೆ ಉದ್ಭವಿಸಿರುವ ಕೆಲವು ಸಮಸ್ಯೆಗಳನ್ನು ಸರಿಪಡಿಸಲು ಜನ ಪ್ರತಿನಿಧಿಗಳು ಮತ್ತು ಸಂಘ ಸಂಸ್ಥೆಗಳು ಸಮೀಕ್ಷೆಯ ದಿನಾಂಕ ವಿಸ್ತರಿಸಬೇಕು ಎಂದು ಮನವಿ ಸಲ್ಲಿಸಿದ್ದಾರೆ. ಇದಕ್ಕೆ ಸ್ಪಂದಿಸಿದ್ದು, ಮನೆ-ಮನೆ ಸಮೀಕ್ಷೆ ದಿನಾಂಕವನ್ನು ಇದೇ 25 ರವರೆಗೆ ವಿಸ್ತರಿಸಲಾಗಿದೆ. ಅಲ್ಲದೇ, ವಿಶೇಷ ಶಿಬಿರಗಳನ್ನು (ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ) ಇದೇ 26ರಿಂದ 28ರವರೆಗೆ ಮರುನಿಗದಿ ಮಾಡಲಾಗಿದೆ. ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಇದೇ 19ರಿಂದ 28ಕ್ಕೆ ನಿಗದಿ ಮಾಡಲಾಗಿದೆ ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕುಂಠಿತ: ವಿವಿಧ ಕಾರಣಗಳಿಂದಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆಯ ಪ್ರಗತಿ ಕುಂಠಿತವಾಗಿದೆ. ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ವಲಯ ಆಯುಕ್ತರೊಂದಿಗೆ ಸಭೆ ನಡೆಸಲಾಗಿದೆ. ಇಲ್ಲಿ ಸರ್ಕಾರಿ ಶಿಕ್ಷಕರ ಕೊರತೆ ಇದೆ. ಇದರಿಂದಾಗಿ ಸಮೀಕ್ಷೆಯನ್ನು ಸಮರ್ಪಕವಾಗಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅವರು ಹೇಳಿದರು.

ಈ ಸಮಸ್ಯೆಯನ್ನು ಬಗೆಹರಿಸಲು ಇಂಗ್ಲಿಷ್ ಜ್ಞಾನ ಹೊಂದಿರುವ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಖಾಸಗಿ ಶಾಲಾ ಶಿಕ್ಷಕರನ್ನು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ 2ನೇ ಹಂತದ ತರಬೇತಿಯನ್ನು ಈಗಾಗಲೇ ನೀಡಲಾಗಿದೆ. ಸಮೀಕ್ಷೆ ನಡೆಸುವವರಿಗೆ ₹5,000 ಭತ್ಯೆ, ಜತೆಗೆ ಪ್ರತಿ ಒಂದು ಪರಿಶಿಷ್ಟರ ಮನೆ ಸಮೀಕ್ಷೆಗೆ ತಲಾ ₹100 ನೀಡಲಾಗುವುದು ಎಂದರು.

ನಿಗದಿತ ಸಮಯಕ್ಕೆ ವರದಿ: 'ದತ್ತಾಂಶ ಸಂಗ್ರಹದ ಬಳಿಕ, ವೈಜ್ಞಾನಿಕವಾಗಿ ವಿಶ್ಲೇಷಣೆ ನಡೆಸಿ ಸಮಯ ವ್ಯರ್ಥ ಮಾಡದೇ ಸಕಾಲದಲ್ಲಿಯೇ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿಯೇ ಜಾತಿಗಳ ವರ್ಗೀಕರಣ ಮಾಡಲಾಗುವುದು' ಎಂದೂ ನಾಗಮೋಹನ ದಾಸ್ ಹೇಳಿದರು.

'101 ಜಾತಿಗಳ ಪಟ್ಟಿಯಲ್ಲಿ ಇಲ್ಲದ ಮೇರ, ಮನ್ಸ, ಕೆಂಬಟ್ಟಿ ಮತ್ತು ಮಾದಿಗ ದಾಸರಿ ಜಾತಿಗಳನ್ನು ಎಲ್ಲಿಗೆ ಸೇರಿಸಬೇಕು ಎಂಬ ಬಗ್ಗೆ ಕಾನೂನಿನಲ್ಲಿರುವ ಅವಕಾಶಗಳನ್ನು ನೋಡಿ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ತೀರ್ಮಾನಿಸಲಾಗುವುದು. ಇವರು ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ಬರೆಸುತ್ತಾ ಬಂದಿದ್ದು, ಮೂಲ ಜಾತಿಯನ್ನು ಬರೆಸಿಲ್ಲ' ಎಂದರು.

4ನೇ ಪುಟ ನೋಡಿ

'ಸಮೀಕ್ಷೆಗೆ ಅಡ್ಡಿಪಡಿಸಿದರೆ ಕ್ರಮ'

ಬಿಬಿಎಂಪಿ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗಳಲ್ಲಿ ಸಮೀಕ್ಷೆಗೆ ಹೋದವರಿಗೆ ಮಾಹಿತಿ ನೀಡಲು ನಿರಾಕರಿಸಿದರೆ ಅಥವಾ ಸಮೀಕ್ಷೆಗೆ ಅಡ್ಡಿಪಡಿಸಿದರೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ ಎಂದು ನಾಗಮೋಹನ ದಾಸ್ ತಿಳಿಸಿದರು.

ಅಗತ್ಯ ಬಿದ್ದರೆ ಅಂತಹ ಅಪಾರ್ಟ್‌ಮೆಂಟ್‌ಗಳ ವಿದ್ಯುತ್ ಮತ್ತು ಕುಡಿಯುವ ನೀರಿನ ಸಂಪರ್ಕವನ್ನು ಕಡಿತಗೊಳಿಸಲೂ ಸೂಚಿಸಲಾಗಿದೆ. ಆದ್ದರಿಂದ ಎಲ್ಲ ನಾಗರಿಕರು ಸಮೀಕ್ಷೆಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ನಗರ ಪ್ರದೇಶಗಳಲ್ಲಿ ಪರಿಶಿಷ್ಟರು ಮತ್ತು ಇತರ ಸಮುದಾಯದವರು ಸಹಜೀವನ ನಡೆಸುತ್ತಿದ್ದಾರೆ. ಇದೊಂದು ಉತ್ತಮ ಅಂಶ. ಆದರೆ ಅಸ್ಪೃಶ್ಯತೆ ಸಂಪೂರ್ಣ ನಿವಾರಣೆ ಆಗಿದೆ ಎನ್ನಲಾಗದು

ನ್ಯಾ. ಎಚ್.ಎನ್. ನಾಗಮೋಹನ ದಾಸ್

ಜಿಲ್ಲಾವಾರು ಮಾಹಿತಿ

ಜಿಲ್ಲೆ	ಸಮೀಕ್ಷೆಗೆ ಒಳಪಟ್ಟ ಎಸ್‌ಸಿ ಕುಟುಂಬಗಳು
ಬಾಗಲಕೋಟೆ	61,758
ಬಳ್ಳಾರಿ	46,774
ಬೆಂಗಳೂರು(ಗ್ರಾ)	43,536
ಬಿಬಿಎಂಪಿ	55,027
ಬೆಳಗಾವಿ	1,15,686
ಬೆಂಗಳೂರು	38,769
ಬೀದರ್	61,139
ಚಾಮರಾಜನಗರ	52,860
ಚಿಕ್ಕಬಳ್ಳಾಪುರ	63,879
ಚಿಕ್ಕಮಗಳೂರು	47,527
ಚಿತ್ರದುರ್ಗ	79,313
ದಕ್ಷಿಣಕನ್ನಡ	26,262
ದಾವಣಗೆರೆ	74,557
ಧಾರವಾಡ	35,171
ಗದಗ	34,759
ಹಾಸನ	73,910
ಹಾವೇರಿ	49,748
ಕಲಬುರಗಿ	1,15,940
ಕೊಡಗು	15,494
ಕೋಲಾರ	80,355
ಕೊಪ್ಪಳ	47,766
ಮಂಡ್ಯ	61,481
ಮೈಸೂರು	10,4,939
ರಾಯಚೂರು	79194
ರಾಮನಗರ	42,044
ಶಿವಮೊಗ್ಗ	54,209
ತುಮಕೂರು	1,10,235
ಉಡುಪಿ	14,631
ಉತ್ತರಕನ್ನಡ	23,965
ವಿಜಯನಗರ	57,363
ವಿಜಯಪುರ	77,449
ಯಾದಗಿರಿ	50,545
ಒಟ್ಟು	18,96,285

ಪ್ರತಿಭಟನೆ ಬೆಳಗಾವಿ ತಾಲ್ಲೂಕಿನ ಸಂತಿಬಸ್ತವಾಡ ಗ್ರಾಮದಲ್ಲಿ ಈಚೆಗೆ ಕುರಾನ್ ಗ್ರಂಥ ಸುಟ್ಟುಹಾಕಿದ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ, ಅಪಾರ ಸಂಖ್ಯೆಯ ಮುಸ್ಲಿಮರು ರಾಣಿ ಚನ್ನಮ್ಮ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಪಿಯು ಪರೀಕ್ಷೆ–2: ಶೇ 31.27 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–2 ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ಪರೀಕ್ಷೆ ತೆಗೆದುಕೊಂಡಿದ್ದ 1.94 ಲಕ್ಷ ವಿದ್ಯಾರ್ಥಿಗಳಲ್ಲಿ 60,692 (ಶೇ 31.27) ಮಂದಿ ತೇರ್ಗಡೆಯಾಗಿದ್ದಾರೆ.

ಪರೀಕ್ಷೆ–1ರಲ್ಲಿ 4.76 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಎರಡೂ ಪರೀಕ್ಷೆಗಳಿಂದ ಉತ್ತೀರ್ಣರಾದವರ ಸಂಖ್ಯೆ 5.36 ಲಕ್ಷಕ್ಕೆ ಏರಿಕೆಯಾಗಿದೆ. ಒಟ್ಟಾರೆ ಫಲಿತಾಂಶ ಶೇ 77.96ಕ್ಕೆ ಮುಟ್ಟಿದೆ.

ಫಲಿತಾಂಶ ಸುಧಾರಣೆ ಬಯಸಿ ಮತ್ತೊಮ್ಮೆ ಪರೀಕ್ಷೆ ಬರೆದಿದ್ದ 71,964 ವಿದ್ಯಾರ್ಥಿಗಳಲ್ಲಿ 41,719 ವಿದ್ಯಾರ್ಥಿಗಳು ಮೊದಲ ಪರೀಕ್ಷೆಗಿಂತ ಅಧಿಕ ಅಂಕ ಪಡೆದಿದ್ದಾರೆ. ರಸಾಯನ ವಿಜ್ಞಾನದಲ್ಲಿ 31,974, ಭೌತ ವಿಜ್ಞಾನದಲ್ಲಿ 26,518 ಹಾಗೂ ಗಣಿತ ವಿಷಯದಲ್ಲಿ 25,477 ವಿದ್ಯಾರ್ಥಿಗಳು ಫಲಿತಾಂಶ ವೃದ್ಧಿಸಿಕೊಂಡಿದ್ದಾರೆ. ಈ ಎಲ್ಲ ವಿದ್ಯಾರ್ಥಿಗಳು ಸಿಇಟಿ ರ‍್ಯಾಂಕಿಂಗ್ ಉತ್ತಮಪಡಿಸಿಕೊಳ್ಳಲು ಈ ಫಲಿತಾಂಶ ವರವಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ಬಸವರಾಜೇಂದ್ರ ಹೇಳಿದ್ದಾರೆ.

ಜೂನ್ 9ರಿಂದ ಪರೀಕ್ಷೆ–3: ಶುಲ್ಕ ಇಲ್ಲ

ಮೊದಲ ಮತ್ತು ಎರಡನೇ ಪರೀಕ್ಷೆಯಲ್ಲಿ ತೇರ್ಗಡೆಯಾಗದ ವಿದ್ಯಾರ್ಥಿಗಳಿಗೆ ಜೂನ್ 9ರಿಂದ 20ರವರೆಗೆ ಪರೀಕ್ಷೆ–3 ನಡೆಸಲಾಗುತ್ತದೆ. ಮೂರನೇ ಪರೀಕ್ಷೆಗೂ ಪರೀಕ್ಷಾ ಶುಲ್ಕ ಇರುವುದಿಲ್ಲ.

ಉತ್ತರ ಪತ್ರಿಕೆಗಳ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಲು ಮೇ 22, ಮರು ಮೌಲ್ಯಮಾಪನ, ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಮೇ 25 ಕೊನೆಯ ದಿನ. ಪರೀಕ್ಷೆ–3ಕ್ಕೆ ಆಯಾ ಕಾಲೇಜುಗಳಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಮೇ 26, ಫಲಿತಾಂಶ ವೃದ್ಧಿಗೆ ಶುಲ್ಕ ಪಾವತಿಸಲು ಮೇ 28 ಕೊನೆಯ ದಿನ.

ಆಶಾ ಕಾರ್ಯಕರ್ತೆ ಗೌರವಧನ ₹1 ಸಾವಿರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಶಾ ಕಾರ್ಯಕರ್ತೆಯರ ಗೌರವಧನವನ್ನು ತಿಂಗಳಿಗೆ ₹1 ಸಾವಿರ ಹೆಚ್ಚಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಈ ಬಗ್ಗೆ 2025-26ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಘೋಷಿಸಿತ್ತು. ಈ ಘೋಷಣೆ ಅನ್ವಯ ಆಯುಷ್ಮಾನ್ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರದ ಆರೋಗ್ಯ ಉಪಕೇಂದ್ರಗಳು ಮತ್ತು ನಗರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ತಂಡ ಆಧಾರಿತ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಿಂದಾಗಿ ಗೌರವಧನ ₹1 ಸಾವಿರ ಹೆಚ್ಚಳವಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಹಾಗೂ ನಗರ ಪ್ರದೇಶದಲ್ಲಿ ಎರಡೂವರೆ ಸಾವಿರ ಜನಸಂಖ್ಯೆಗೆ ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ನೇಮಕ ಮಾಡಲಾಗುತ್ತಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 42,524 ಹುದ್ದೆಗಳು ಮಂಜೂರಾಗಿದ್ದು, ರಾಜ್ಯದಲ್ಲಿ ಸದ್ಯ 41 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆದೇಶ ಹೇಳಿದೆ.

ಸೇನೆಗೆ ಬೆಂಬಲ ಜಮ್ಮುವಿನ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳು ಸೇನೆಗೆ ಬೆಂಬಲ ಸೂಚಿಸಿ ಶುಕ್ರವಾರ ತ್ರಿವರ್ಣ ಧ್ವಜ ಪ್ರದರ್ಶಿಸಿದರು ಪಿಟಿಐ ಚಿತ್ರ

ಇಸ್ಕಾನ್ ಆಸ್ತಿ ವಿವಾದಕ್ಕೆ 'ಸುಪ್ರೀಂ' ತೆರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ಕಾನ್ ಬೆಂಗಳೂರು ಹಾಗೂ ಇಸ್ಕಾನ್ ಮುಂಬೈ ನಡುವಿನ 25 ವರ್ಷಗಳ ಹಳೆಯ ಆಸ್ತಿ ವಿವಾದವನ್ನು ಶುಕ್ರವಾರ ಬಗೆಹರಿಸಿರುವ ಸುಪ್ರೀಂ ಕೋರ್ಟ್, 'ಬೆಂಗಳೂರಿನ ಹರೇ ಕೃಷ್ಣಗಿರಿಯ ದೇವಸ್ಥಾನವು ಇಸ್ಕಾನ್-ಬೆಂಗಳೂರು ಸಂಸ್ಥೆಗೆ ಸೇರಿದ್ದು' ಎಂದು ತೀರ್ಪು ನೀಡಿದೆ.

ಬೆಂಗಳೂರಿನಲ್ಲಿರುವ ಐತಿಹಾಸಿಕ ಹರೇ ಕೃಷ್ಣ ದೇವಸ್ಥಾನದ ಹಕ್ಕಿನ ಕುರಿತು ಇಸ್ಕಾನ್ ಮುಂಬೈ ಪರವಾಗಿ ತೀರ್ಪು ನೀಡಿದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಇಸ್ಕಾನ್ ಬೆಂಗಳೂರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಓಕಾ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನೊಳಗೊಂಡ ಪೀಠವು, 'ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿರುವ ಇಸ್ಕಾನ್ ಬೆಂಗಳೂರಿಗೆ ಈ ದೇವಸ್ಥಾನ ಸೇರಿದ್ದು' ಎಂದು ತೀರ್ಪು ನೀಡಿದೆ.

ಹೈಕೋರ್ಟ್ 2011ರ ಮೇ 23ರಂದು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಇಸ್ಕಾನ್ ಬೆಂಗಳೂರು 2011ರ ಜೂನ್ 2ರಂದು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು. ಬೆಂಗಳೂರಿನ ಸ್ಥಳೀಯ ನ್ಯಾಯಾಲಯ 2009ರಲ್ಲಿ ನೀಡಿದ್ದ ಆದೇಶ ರದ್ದುಗೊಳಿಸಿದ್ದ ಹೈಕೋರ್ಟ್‌ನ ತೀರ್ಪನ್ನು ಇಸ್ಕಾನ್ ಬೆಂಗಳೂರಿನ ಕೋದಂಡರಾಮ ದಾಸ ಅರ್ಜಿಯಲ್ಲಿ ಪ್ರಶ್ನಿಸಿದ್ದರು.

4ನೇ ಪುಟ ನೋಡಿ

ಟರ್ಕಿ ಆಭರಣಕ್ಕೂ ಬಹಿಷ್ಕಾರದ ಬಿಸಿ

ಲಖನೌ (ಪಿಟಿಐ): ಟರ್ಕಿಯಿಂದ ಭಾರತಕ್ಕೆ ಪೂರೈಕೆಯಾಗುವ ಸೇಬು ಮತ್ತು ಅಮೃತಶಿಲೆಗೆ ತಟ್ಟಿರುವ ಬಹಿಷ್ಕಾರದ ಬಿಸಿಯು, ಈಗ ಆ ದೇಶದ ಚಿನ್ನಾಭರಣಗಳಿಗೂ ವಿಸ್ತರಿಸಿದೆ.

ಉತ್ತರ ಪ್ರದೇಶದ ಲಖನೌದಲ್ಲಿ ವರ್ತಕರು ಟರ್ಕಿ ಆಭರಣಗಳ ಖರೀದಿ, ಮಾರಾಟ ಮತ್ತು ಪ್ರದರ್ಶನಕ್ಕೆ ಬಹಿಷ್ಕಾರ ಹಾಕಿದ್ದಾರೆ. ಸಂಪೂರ್ಣವಾಗಿ ಅಲ್ಲಿನ ಆಭರಣಗಳ ಆಮದನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಗೆ ಪ್ರತೀಕಾರವಾಗಿ ಭಾರತವು 'ಸಿಂಧೂರ ಕಾರ್ಯಾಚರಣೆ' ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ನಡೆಸಿದ ದಾಳಿಯಲ್ಲಿ ಟರ್ಕಿ ನಿರ್ಮಿಸಿದ ಡ್ರೋನ್‌ಗಳನ್ನು ಬಳಸಲಾಗಿತ್ತು. ಇದನ್ನು ಖಂಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಟರ್ಕಿಯಿಂದ ಪೂರೈಕೆಯಾಗುವ ಸರಕುಗಳ ಬಹಿಷ್ಕಾರಕ್ಕೆ ಅಭಿಯಾನ ನಡೆಯುತ್ತಿದೆ.

'ಅಕ್ಷಯ ತೃತೀಯದಂದು ಟರ್ಕಿ ಆಭರಣಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಆದರೆ, ಆ ದೇಶವು ಪಾಕಿಸ್ತಾನಕ್ಕೆ ಬೆಂಬಲ ನೀಡಿದೆ. ಟರ್ಕಿ ಆಭರಣಗಳ ಖರೀದಿಗೆ ಗ್ರಾಹಕರು ಮುಂದಾಗುವುದಿಲ್ಲ. ಹಾಗಾಗಿ, ಆಮದು ಸ್ಥಗಿತಗೊಳಿಸಲು ನಿರ್ಧರಿಸಿದ್ದೇವೆ' ಎಂದು ಲಖನೌ ಚೌಕ್ ಸರಾಫ್ ಅಸೋಸಿಯೇಷನ್ ಉಪಾಧ್ಯಕ್ಷ ಅದೀಶ್ ಜೈನ್ ಅವರು, ಪಿಟಿಐಗೆ ತಿಳಿಸಿದ್ದಾರೆ.

'ಅಲ್ಲಿಂದ ಪ್ರಮುಖವಾಗಿ ನೆಕ್ಲೆಸ್, ಉಂಗುರ ಮತ್ತು ಕಿವಿಯೋಲೆ ಆಮದಾಗುತ್ತವೆ. ಇಲ್ಲಿನ ಮಾರುಕಟ್ಟೆಯಲ್ಲಿ ಪ್ರತಿದಿನ ಮಾರಾಟವಾಗುವ 20 ನೆಕ್ಲೆಸ್‌ಗಳ ಪೈಕಿ 5 ಟರ್ಕಿ ನೆಕ್ಲೆಸ್‌ಗಳಿರುತ್ತವೆ' ಎಂದು ವಿವರಿಸಿದ್ದಾರೆ.

'ಟರ್ಕಿಯಿಂದ ವಿನ್ಯಾಸಗೊಂಡು ಬರುತ್ತಿದ್ದ ಆಭರಣಗಳ ಮಾರಾಟಕ್ಕೆ ಹೆಚ್ಚು ಒತ್ತು ನೀಡುತ್ತಿದ್ದೆವು. ಸದ್ಯ ಸಂಪೂರ್ಣವಾಗಿ ಸ್ಥಗಿತಗೊಳಿಸಲು ಮುಂದಾಗಿದ್ದೇವೆ' ಎಂದು ಲಖನೌ ಮಹಾನಗರದ ಸರಾಫ್ ಅಸೋಸಿಯೇಷನ್ ಅಧ್ಯಕ್ಷ ಮನೀಶ್ ಕುಮಾರ್ ವರ್ಮಾ ತಿಳಿಸಿದ್ದಾರೆ.

ಸೇಬು ಮಾರಾಟ ಸ್ಥಗಿತ

ಜೈಪುರ (ಪಿಟಿಐ): ರಾಜಸ್ಥಾನದ ಆಳ್ವಾರ್ ಹಣ್ಣಿನ ಮಾರುಕಟ್ಟೆಯಲ್ಲಿ ವರ್ತಕರು, ಟರ್ಕಿ ಸೇಬುಗಳ ಮಾರಾಟವನ್ನು ಸ್ಥಗಿತಗೊಳಿಸಿದ್ದಾರೆ.

ಈ ಮೊದಲು ಅಜ್ಮೀರ್‌ನ ವರ್ತಕರು ಟರ್ಕಿಯ ಅಮೃತಶಿಲೆಗಳ ಮಾರಾಟವನ್ನು ಬಹಿಷ್ಕರಿಸಿದ್ದರು.

ಗ್ರಾಹಕರ ನಿಲುವಿಗೆ ನಾವು ಮನ್ನಣೆ ನೀಡಬೇಕಿದೆ. ಅಲ್ಲಿಂದ ಪೂರೈಕೆಯಾಗುವ ಸರಕುಗಳಿಗೆ ಬಹಿಷ್ಕಾರ ಹೇರಿ ಆ ದೇಶದ ಆರ್ಥಿಕತೆಗೆ ಪೆಟ್ಟು ನೀಡುವುದು ನಮ್ಮ ಗುರಿಯಾಗಿದೆ. ಹಾಗಾಗಿ, ಆಳ್ವಾರ್‌ನ ಹಣ್ಣಿನ ಮಾರುಕಟ್ಟೆ ಸಂಘವು ಈ ನಿರ್ಧಾರ ಕೈಗೊಂಡಿದೆ ಎಂದು ವರ್ತಕರು ತಿಳಿಸಿದ್ದಾರೆ.

'ಮಾರ್ಚ್‌ನಿಂದ ಜೂನ್‌ವರೆಗೆ ಇಲ್ಲಿನ ಮಾರುಕಟ್ಟೆಗೆ ಪ್ರತಿ ದಿನ 15 ಟನ್‌ನಷ್ಟು ಟರ್ಕಿ ಸೇಬುಗಳು ಇಲ್ಲಿನ ಮಾರುಕಟ್ಟೆಗೆ ಆವಕವಾಗುತ್ತವೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸೌರಭ್ ಕಲ್ರಾ ತಿಳಿಸಿದ್ದಾರೆ.

'ಶುಕ್ರವಾರದಿಂದಲೇ ಅಂಗಡಿಗಳ ಮುಂದೆ ಟರ್ಕಿ ಸೇಬಿಗೆ ಬಹಿಷ್ಕಾರದ ಫಲಕಗಳನ್ನು ಪ್ರದರ್ಶಿಸಿದ್ದೇವೆ. ಈ ಮೂಲಕ ಗ್ರಾಹಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದ್ದಾರೆ.

'ಟರ್ಕಿ ಸೇಬುಗಳ ಮಾರಾಟ ಸ್ಥಗಿತದಿಂದ ಮಾರುಕಟ್ಟೆಯಲ್ಲಿ ಆಗುವ ಕೊರತೆ ನೀಗಿಸಲು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ದಕ್ಷಿಣ ಆಫ್ರಿಕಾದ ಸೇಬುಗಳ ಮಾರಾಟಕ್ಕೆ ಮುಂದಾಗಿದ್ದೇವೆ. ಶೈತ್ಯಾಗಾರಗಳಲ್ಲಿ ಈ ಸೇಬುಗಳ ದಾಸ್ತಾನು ಸಾಕಷ್ಟಿದೆ' ಎಂದು ಸಂಘದ ಕಾರ್ಯದರ್ಶಿ ಪಂಕಜ್ ಸೈನಿ ತಿಳಿಸಿದ್ದಾರೆ.

ಜಿಜೆಸಿ, ಸಿಎಐಟಿ ಬೆಂಬಲ

ಮುಂಬೈ (ಪಿಟಿಐ): ಕೇಂದ್ರ ಸರ್ಕಾರವು ಟರ್ಕಿ ಮತ್ತು ಅಜರ್‌ಬೈಜಾನ್ ಜತೆಗಿನ ಎಲ್ಲಾ ವ್ಯಾಪಾರ ಒಪ್ಪಂದಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕಿದೆ ಎಂದು ಅಖಿಲ ಭಾರತ ಹರಳು ಮತ್ತು ಆಭರಣ ಮಂಡಳಿ (ಜಿಜೆಸಿ) ಆಗ್ರಹಿಸಿದೆ.

'ನಮಗೆ ರಾಷ್ಟ್ರದ ಹಿತಾಸಕ್ತಿ ಮುಖ್ಯವಾಗಿದೆ. ಹಾಗಾಗಿ, ಈ ಎರಡು ದೇಶಗಳ ಜೊತೆಗಿನ ಎಲ್ಲಾ ವಹಿವಾಟುಗಳನ್ನು ಸ್ಥಗಿತಗೊಳಿಸಲು ಆಭರಣ ಮಾರಾಟಗಾರರು, ತಯಾರಕರು, ವರ್ತಕರು ಮತ್ತು ಸಗಟು ಮಾರಾಟಗಾರರಿಗೆ ಸೂಚಿಸಲಾಗಿದೆ' ಎಂದು ಮಂಡಳಿ ಅಧ್ಯಕ್ಷ ರಾಜೇಶ್ ರೋಕ್ಡೆ ತಿಳಿಸಿದ್ದಾರೆ.

ಎರಡು ದೇಶಗಳ ಜೊತೆಗಿನ ವ್ಯಾಪಾರ ವಹಿವಾಟಿಗೆ ನಿರ್ಬಂಧ ಹೇರಬೇಕು ಎಂದು ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ಕೂಡ ಒತ್ತಾಯಿಸಿದೆ.

ಕುಲಪತಿ ಹುದ್ದೆ: ವಿ.ವಿ, ಖಾಸಗಿ ಕಾಲೇಜುಗಳ ಅಧ್ಯಾಪಕರಿಗಷ್ಟೇ ಮಣೆ

ಪದವಿ ಕಾಲೇಜು ಅಧ್ಯಾಪಕರ ಕಡೆಗಣನೆ

ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ವಿಶ್ವವಿದ್ಯಾಲಯಗಳ ಕುಲಪತಿ ಸ್ಥಾನಕ್ಕೆ ತಮ್ಮನ್ನು ಪರಿಗಣಿಸದ ಸರ್ಕಾರ ಹಾಗೂ ಶೋಧನಾ ಸಮಿತಿಗಳ ವಿರುದ್ಧ ಆಂದೋಲನ ರೂಪಿಸಲು ಪದವಿ ಕಾಲೇಜುಗಳ ಅಧ್ಯಾಪಕ ವೃಂದ ಮುಂದಾಗಿದೆ.

ರಾಯಚೂರು, ಗುಲ್ಬರ್ಗಾ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯಗಳ ಕುಲಪತಿ ನೇಮಕಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರಚಿಸಲಾಗಿದ್ದ ಶೋಧನಾ ಸಮಿತಿಗಳು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರನ್ನಷ್ಟೇ ಪರಿಗಣಿಸಿ, ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ಅರ್ಜಿಗಳನ್ನು ತಿರಸ್ಕರಿಸಿರುವುದು ವಿವಾದಕ್ಕೆ ನಾಂದಿ ಹಾಡಿದೆ.

ರಾಜ್ಯದಲ್ಲಿ 41 ಸರ್ಕಾರಿ ವಿಶ್ವವಿದ್ಯಾಲಯಗಳಿವೆ. ಕುಲಪತಿಗಳ ಅಧಿಕಾರದ ಅವಧಿ ನಾಲ್ಕು ವರ್ಷಗಳಿದ್ದು, ಆಯಾ ವಿಶ್ವವಿದ್ಯಾಲಯಗಳಿಗೆ ನೇಮಕವಾದ ಕುಲಪತಿಗಳ ಅವಧಿ ಮುಗಿಯುವ ಮೂರು ತಿಂಗಳ ಮೊದಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕಾರ ಕುಲಪತಿಗಳ ನೇಮಕಾತಿಗೆ ಮೂವರು ಸದಸ್ಯರನ್ನು ಒಳಗೊಂಡ ಶೋಧನಾ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸುತ್ತದೆ.

ಆಯಾ ವಿಶ್ವವಿದ್ಯಾಲಯದ ಸಿಂಡಿಕೇಟ್, ವಿಶ್ವವಿದ್ಯಾಲಯ ಅನುದಾನ ಆಯೋಗ ಹಾಗೂ ರಾಜ್ಯಪಾಲರು ತಲಾ ಒಬ್ಬರನ್ನು ಶೋಧನಾ ಸಮಿತಿಗೆ ನೇಮಕ ಮಾಡುವ ಅಧಿಕಾರ ಹೊಂದಿದ್ದಾರೆ. ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡುವ ಸದಸ್ಯ ಸಮಿತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ. ಶೋಧನಾ ಸಮಿತಿ ಅಂತಿಮಗೊಳಿಸಿದ ಮೂವರ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುತ್ತದೆ. ನಂತರ ಪಟ್ಟಿಯನ್ನು ಸರ್ಕಾರ ರಾಜ್ಯಪಾಲರಿಗೆ ಕಳುಹಿಸುತ್ತದೆ. ರಾಜ್ಯಪಾಲರು ಸರ್ಕಾರದ ಮುಖ್ಯಸ್ಥರ ಜತೆ ಚರ್ಚಿಸಿ, ಒಬ್ಬರನ್ನು ನೇಮಕ ಮಾಡುತ್ತಾರೆ. ಐದು ವಿಶ್ವವಿದ್ಯಾಲಯಗಳಿಗೆ ನೇಮಕ ಮಾಡಿದ ಶೋಧನಾ ಸಮಿತಿಗಳು ವಿಶ್ವವಿದ್ಯಾಲಯಗಳಲ್ಲಿ 10 ವರ್ಷ ಹಾಗೂ ಅದಕ್ಕಿಂತ ಹೆಚ್ಚು ಕೆಲಸ ಮಾಡಿದ ಅನುಭವ ಇರುವ ತಲಾ ಮೂವರು ಪ್ರಾಧ್ಯಾಪಕರ ಹೆಸರನ್ನು ಅಂತಿಮಗೊಳಿಸಿ, ಸರ್ಕಾರಕ್ಕೆ ಸಲ್ಲಿಸಿವೆ.

'ನಿಯಮಗಳು ಎಲ್ಲ ವಿಶ್ವವಿದ್ಯಾಲಯಗಳಿಗೂ, ಎಲ್ಲರಿಗೂ ಒಂದೇ ಇರಬೇಕು. ಆದರೆ, ಶೋಧನಾ ಸಮಿತಿಗಳು ತಮಗೆ ಬೇಕಾದ ಹಾಗೆ ನಿಯಮಗಳನ್ನು ಬಳಸಿಕೊಂಡು ಕುಲಪತಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿವೆ' ಎಂದು ಪ್ರಶ್ನಿಸುತ್ತಾರೆ ಕುಲಪತಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಆಕಾಂಕ್ಷಿಗಳು

4ನೇ ಪುಟ ನೋಡಿ

ಮುಚ್ಚಲೂ ಇಲ್ಲ, ಕುಲಪತಿ ನೇಮಿಸಲೂ ಇಲ್ಲ

ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ಸಂಶೋಧನಾ ಚಟುವಟಿಕೆಗಳಿಗಾಗಿ ಅಸ್ತಿತ್ವಕ್ಕೆ ಬಂದ ಮಹಾರಾಣಿ ಕ್ಲಸ್ಟರ್ ಹಾಗೂ ನೃಪತುಂಗ ವಿಶ್ವವಿದ್ಯಾಲಯಗಳ ಪ್ರಥಮ ಕುಲಪತಿಗಳ ಅವಧಿ ಮುಗಿದು ಆರು ತಿಂಗಳಾದರೂ ಸರ್ಕಾರ ಶೋಧನಾ ಸಮಿತಿ ರಚನೆ ಮಾಡಿಲ್ಲ.ಈ ಎರಡೂ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಕುರಿತು ಸರ್ಕಾರದ ಹಂತದಲ್ಲಿ ಸಾಕಷ್ಟು ಚರ್ಚೆಯಾಗಿತ್ತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ರಚನೆಯಾದ ಸಂಪುಟ ಉಪಸಮಿತಿಯೂ ಈ ಕುರಿತು ಚರ್ಚೆ ನಡೆಸಿದೆ. ಆದರೆ, ಮುಚ್ಚುವ ಅಥವಾ ಕುಲಪತಿ ನೇಮಿಸುವ ಕುರಿತು ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

ವಿಶ್ವವಿದ್ಯಾಲಯ	ಶೋಧನಾ ಸಮಿತಿ ಅಧ್ಯಕ್ಷರು
ರಾಯಚೂರು	ಸಬಿಹಾ ಭೂಮಿಗೌಡ
ಗುಲ್ಬರ್ಗಾ	ಎಸ್. ಜಾಫೆಟ್
ಧಾರವಾಡ	ಎ.ಎಚ್. ರಾಜಾಸಾಬ್
ವಿಜಯಪುರ	ಮಲ್ಲಿಕಾ ಘಂಟಿ
ಗಂಗೂಬಾಯಿ ಹಾನಗಲ್	ಮಲ್ಲಿಕಾ ಘಂಟಿ
ಬೆಂಗಳೂರು ನಗರ	ಎಸ್. ಜಾಫೆಟ್

ವಿವಾದದ ನಂತರ ಅರ್ಜಿ ಬದಲಾವಣೆ

ಕರ್ನಾಟಕ ವಿಶ್ವವಿದ್ಯಾಲಯ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಸೇರಿದಂತೆ ಐದು ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದಾಗ ಮೂರು ಅರ್ಹತೆ ನಗದಿ ಮಾಡಲಾಗಿತ್ತು.

'ಶಿಕ್ಷಣ ತಜ್ಞರಾಗಿರಬೇಕು. ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕನಿಷ್ಠ ಹತ್ತು ವರ್ಷಗಳ ಬೋಧನೆ, ಸಂಶೋಧನಾ ಅನುಭವ ಇರಬೇಕು. ಯಾವುದೇ ಶೈಕ್ಷಣಿಕ ಆಡಳಿತ ಸಂಸ್ಥೆಯಲ್ಲಿ ಹತ್ತು ವರ್ಷಗಳ ಅನುಭವ ಹಾಗೂ ಶೈಕ್ಷಣಿಕ ನಾಯಕತ್ವ ವಹಿಸಿದವರು ಅರ್ಜಿ ಸಲ್ಲಿಸಬಹುದು' ಎಂದು ಅಧಿಸೂಚನೆಯಲ್ಲಿ ಹೇಳಲಾಗಿತ್ತು. ಆದರೆ, ಶೋಧನಾ ಸಮಿತಿಗಳು ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ಮಾತ್ರ ಪರಿಗಣಿಸಿದ್ದು ವಿವಾದವಾಗುತ್ತಿದ್ದಂತೆಯೇ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಆಹ್ವಾನಿಸಿದ ಅರ್ಜಿಯಲ್ಲಿ ಈ ನಿಯಮಗಳನ್ನು ಬದಲಾಯಿಸಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಅನುಭವವನ್ನು ಕಡ್ಡಾಯಗೊಳಿಸಲಾಗಿದೆ.

ಯುಜಿಸಿ ನಿಯಮಗಳಲ್ಲಿ ವಿಶ್ವವಿದ್ಯಾಲಯ, ಪದವಿ ಕಾಲೇಜು ಪ್ರಾಧ್ಯಾಪಕರು ಎಂಬ ವರ್ಗೀಕರಣ ಇಲ್ಲ. ಕರ್ನಾಟಕದಲ್ಲಿ ಮಾತ್ರ ಇಂತಹ ವ್ಯತ್ಯಾಸವಿದೆ

ಟಿ.ಎಂ.ಮಂಜುನಾಥ್, ಅಧ್ಯಕ್ಷ, ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ

ಬ್ಯೂಟಿ ಪಾರ್ಲರ್ ಆರಂಭಿಸಲು ಹಣ ತಂದಿದ್ದ ಯುವತಿ

ಕಾನ್‌ಸ್ಟೆಬಲ್‌ನಿಂದಲೇ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯೂಟಿ ಪಾರ್ಲರ್ ಆರಂಭಿಸಲು ಶಿವಮೊಗ್ಗದಿಂದ ನಗರಕ್ಕೆ ಬಂದಿದ್ದ ಯುವತಿ ಬಳಿಯಿದ್ದ ಚಿನ್ನಾಭರಣ ಹಾಗೂ ನಗದನ್ನು ದರೋಡೆ ನಡೆಸಿದ ಆರೋಪದಡಿ ಹೆಡ್ ಕಾನ್‌ಸ್ಟೆಬಲ್ ಒಬ್ಬರ ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗಿರಿಜೇಶ್

ಎಂ.ಎಸ್. ಪಾಳ್ಯದ ನಿವಾಸಿ ಸಿಂಚನಾ ಅವರು ನೀಡಿದ ದೂರಿನ ಆಧಾರದಲ್ಲಿ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಗಿರಿಜೇಶ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಗಿರಿಜೇಶ್‌ಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಸಂಗ್ರಹಿಸಲಾಗುತ್ತಿದೆ. ದರೋಡೆ ನಡೆಸಿದ್ದಕ್ಕೆ ಸಾಕ್ಷ್ಯಗಳು ಲಭಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

'ಶಿವಮೊಗ್ಗದ ಸಿಂಚನಾ ಅವರು ನಗರದ ಎಂ.ಎಸ್. ಪಾಳ್ಯದಲ್ಲಿ ನೆಲಸಿದ್ದರು. ಆರಂಭದಲ್ಲಿ ಶಿವಮೊಗ್ಗದಲ್ಲೇ ಬ್ಯೂಟೀಷಿಯನ್ ಕೆಲಸ ಮಾಡುತ್ತಿದ್ದರು. ಐದು ತಿಂಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಅವರು, ಕೊಡಿಗೆಹಳ್ಳಿಯ 'ರಾಯಲ್ ಲೈಫ್'ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. 15 ದಿನಗಳ ಹಿಂದೆ ಊರಿಗೆ ತೆರಳಿದ್ದ ಅವರು ಸ್ವಂತವಾಗಿ ಬ್ಯೂಟಿ ಪಾರ್ಲರ್ ಆರಂಭಿಸುವ ಉದ್ದೇಶದಿಂದ ತಾಯಿಯಿಂದ ₹2.50 ಲಕ್ಷ ನಗದು ಪಡೆದುಕೊಂಡಿದ್ದರು. ಅಲ್ಲದೇ ಅಡಮಾನ ಇಟ್ಟು ಸಾಲ ಪಡೆದುಕೊಳ್ಳಲು ತಾಯಿ ಬಳಿಯಿದ್ದ ಚಿನ್ನದ ಸರವನ್ನೂ ತೆಗೆದುಕೊಂಡು, ಮೇ 13ರ ಸಂಜೆ 6ರ ಸುಮಾರಿಗೆ ಶಿವಮೊಗ್ಗದಿಂದ ಬೆಂಗಳೂರಿಗೆ ಪ್ರಯಾಣ ಆರಂಭಿಸಿದ್ದರು. ಕೆಎಸ್‌ಆರ್‌ಟಿಸಿ ಬಸ್ ತಡರಾತ್ರಿ 1.30ರ ಸುಮಾರಿಗೆ ತುಮಕೂರು ರಸ್ತೆಯ ಎಂಟನೇ ಮೈಲಿ ತಲುಪಿತ್ತು. ಅಲ್ಲಿ ಇಳಿದಿದ್ದ ಸಿಂಚನಾ ಅವರು, ಮೊಬೈಲ್ ಚಾರ್ಜ್ ಮಾಡಿಕೊಳ್ಳಲು ಜಂಕ್ಷನ್ ಬಳಿಯ ಪ್ರಕ್ರಿಯಾ ಆಸ್ಪತ್ರೆ ಬಳಿಗೆ ಹೋಗಿದ್ದರು' ಎಂದು ಪೊಲೀಸರು ಹೇಳಿದರು.

ಡ್ರಾಪ್ ಕೊಡುವ ನೆಪದಲ್ಲಿ ದರೋಡೆ: 'ತಡರಾತ್ರಿ ಪೊಲೀಸ್ ಜೀಪಿನಲ್ಲಿ ಬಂದಿದ್ದ ಆರೋಪಿ ಕಾನ್‌ಸ್ಟೆಬಲ್, ಯಾಕೆ ಇಲ್ಲಿ ನಿಂತಿದ್ದೀಯಾ? ಎಲ್ಲಿಗೆ ಹೋಗಬೇಕು ಎಂದು ಪ್ರಶ್ನೆ ಮಾಡಿದ್ದರು. ಆಗ ಪೇಯಿಂಗ್ ಗೆಸ್ಟ್‌ಗೆ (ಪಿ.ಜಿ) ಹೋಗಬೇಕೆಂದು ಸಿಂಚನಾ ಪ್ರತಿಕ್ರಿಯಿಸಿದ್ದರು. ಜೀಪ್‌ನಲ್ಲೇ ಕರೆದುಕೊಂಡು ಹೋಗಿ ಬಿಡುತ್ತೇನೆ ಎಂಬುದಾಗಿ ಕಾನ್‌ಸ್ಟೆಬಲ್ ಹೇಳಿದ್ದರು. ಯುವತಿ ನಿರಾಕರಿಸಿದ್ದರು. ಆಕೆಗೆ ಗದರಿಸಿ ಜೀಪ್‌ಗೆ ಹತ್ತಿಸಿಕೊಂಡಿದ್ದರು. ಪಿ.ಜಿ ಕಡೆಗೆ ಹೋಗುವ ಬದಲಿಗೆ ವಾಹನವನ್ನು ನೆಲಮಂಗಲದ ಕಡೆಗೆ ತಿರುಗಿಸಿದ್ದರು. ನೆಲಮಂಗಲ ಪೊಲೀಸ್ ಠಾಣೆ ಸಮೀಪಕ್ಕೆ ಕರೆದೊಯ್ದು ಬ್ಯಾಗ್ ಅನ್ನು ಪರಿಶೀಲನೆ ನಡೆಸಿದ್ದರು. ಬ್ಯಾಗ್‌ನಲ್ಲಿದ್ದ ₹2.50 ಲಕ್ಷ ನಗದು ಹಾಗೂ ಚಿನ್ನದ ಸರವನ್ನು ಕಸಿದುಕೊಂಡರು. ವಿರೋಧ ವ್ಯಕ್ತಪಡಿಸಿದ್ದಕ್ಕೆ ಯುವತಿ ಮೇಲೆ ಹಲ್ಲೆ ನಡೆಸಲಾಗಿದೆ' ಎಂದು ಮೂಲಗಳು ಹೇಳಿವೆ.

ತಪ್ಪಿಸಿಕೊಂಡು ಬಂದ ಯುವತಿ

'ಜೀಪ್‌ನ ಬಾಗಿಲು ತೆಗೆದು ತುಮಕೂರು ರಸ್ತೆಗೆ ಓಡಿಬಂದಿದ್ದ ಯುವತಿ ದ್ವಿಚಕ್ರ ವಾಹನ ಸವಾರನನ್ನು ಕೇಳಿಕೊಂಡು ಎಂಟನೇ ಮೈಲಿಗೆ ಡ್ರಾಪ್ ಪಡೆದುಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಎಂಟನೇ ಮೈಲಿಗೆ ತಲುಪಿದಾಗ ಮುಂಜಾನೆ ನಾಲ್ಕು ಗಂಟೆ ಆಗಿತ್ತು. ನಂತರ, ಬಿಎಂಟಿಸಿ ಬಸ್‌ನಲ್ಲಿ ಪಿ.ಜಿಗೆ ತೆರಳಿದ್ದೆ. ಹಣ ಹಾಗೂ ಚಿನ್ನಾಭರಣ ದರೋಡೆ ನಡೆಸಿದ್ದ ವ್ಯಕ್ತಿ ಖಾಕಿ ಸಮವಸ್ತ್ರ ಧರಿಸಿದ್ದರು' ಎಂದು ಸಿಂಚನಾ ಅವರು ದೂರಿನಲ್ಲಿ ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನನ್ನಿಂದ ಇದು ಸಾಧ್ಯವಿಲ್ಲ ಎಂದುಕೊಳ್ಳಬೇಡಿ. ನಾನಿದನ್ನು ಮಾಡಬಲ್ಲೆ ಎಂಬ ಆತ್ಮವಿಶ್ವಾಸವೇ ನಿಮ್ಮನ್ನು ಮುನ್ನಡೆಸಬಲ್ಲದು.

–ಸ್ವಾಮಿ ವಿವೇಕಾನಂದ

ನಿಯಂತ್ರಣಕ್ಕೆ ಬಂದ ಹಣದುಬ್ಬರ ಪ್ರಗತಿಗೆ ಒತ್ತು ನೀಡಲು ಸಕಾಲ

ಸಗಟು ಮತ್ತು ಚಿಲ್ಲರೆ ಹಣದುಬ್ಬರ ದರ ಇಳಿಕೆಯ ಹಾದಿಯಲ್ಲಿರುವುದು ಸ್ವಾಗತಾರ್ಹ ಬೆಳವಣಿಗೆ. ಕೆಲವು ತಿಂಗಳಿಂದ ಇದ್ದ ಈ ಪ್ರವೃತ್ತಿ ಏಪ್ರಿಲ್ ತಿಂಗಳಲ್ಲಿಯೂ ಮುಂದುವರಿದಿದೆ. ಸಗಟು ದರ ಸೂಚ್ಯಂಕ ಆಧಾರದಲ್ಲಿ ಲೆಕ್ಕ ಹಾಕಲಾಗುವ ಸಗಟು ಹಣದುಬ್ಬರ ದರವು ಕಳೆದ ತಿಂಗಳು ಅತ್ಯಲ್ಪ ಅಂದರೆ, ಶೇಕಡ 0.85ರಷ್ಟು ಇತ್ತು. ಇದು, 14 ತಿಂಗಳಲ್ಲಿಯೇ ಅತ್ಯಂತ ಕಡಿಮೆ ದರ. ಸಗಟು ಹಣದುಬ್ಬರ ದರವು ಎರಡು ವರ್ಷಗಳಿಂದಲೂ ಕಡಿಮೆ ಪ್ರಮಾಣದಲ್ಲಿಯೇ ಇದೆ ಅಥವಾ ಕೆಲವೊಮ್ಮೆ ಋಣಾತ್ಮಕ ಮಟ್ಟಕ್ಕೆ ಹೋಗಿದ್ದೂ ಉಂಟು. ಹಾಗಾಗಿ, ಕಳೆದ ತಿಂಗಳ ದರವು ಅಚ್ಚರಿದಾಯಕವೇನೂ ಅಲ್ಲ. ಚಿಲ್ಲರೆ ಹಣದುಬ್ಬರವು ಗ್ರಾಹಕರು, ನೀತಿ ನಿರೂಪಕರಿಗೆ ಹೆಚ್ಚು ಮುಖ್ಯವಾದದ್ದು. ಏಪ್ರಿಲ್‌ನಲ್ಲಿ ಈ ದರ ಶೇ 3.2ರಷ್ಟು ಇತ್ತು, ಆರು ವರ್ಷಗಳಲ್ಲಿ ಇದು ಅತ್ಯಂತ ಕಡಿಮೆ ದರ. ಈ ದರ ಮಾರ್ಚ್ ತಿಂಗಳಲ್ಲಿ ಶೇ 3.3ರಷ್ಟು ಇತ್ತು.

ಕಳೆದ ಕೆಲವು ವಾರಗಳಲ್ಲಿ ತರಕಾರಿ ದರಗಳಲ್ಲಿ ಆಗಿರುವ ಕುಸಿತವು ಹಣದುಬ್ಬರ ದರ ಇಳಿಕೆಗೆ ಮುಖ್ಯ ಕಾರಣ. ತರಕಾರಿ ದರ ಶೇ 11ರಷ್ಟು ಕುಸಿದರೆ, ಧಾನ್ಯಗಳ ದರಗಳಲ್ಲಿ ಶೇ 5ರಷ್ಟು ಕುಸಿತವಾಗಿದೆ. ಈ ಎರಡಕ್ಕೂ ಆಹಾರ ಪದಾರ್ಥಗಳಲ್ಲಿ ಪ್ರಮುಖ ಸ್ಥಾನವಿದೆ. ಹವಾಮಾನ ಮತ್ತು ಇತರ ಅಂಶಗಳಿಂದಾಗಿ ತರಕಾರಿ ಮತ್ತು ಧಾನ್ಯಗಳ ಪೂರೈಕೆ ಸಮೃದ್ಧವಾಗಿತ್ತು. ಪೂರೈಕೆ ಉತ್ತಮವಾಗಿದ್ದ ಕಾರಣಕ್ಕೆ ದರಗಳು ಕುಸಿದು ಹಣದುಬ್ಬರ ಇಳಿಕೆಯಾಗಲು ನೆರವಾಗಿದೆ. ಸರ್ಕಾರ ಕೈಗೊಂಡ ಕೆಲವು ಕ್ರಮಗಳು ಕೂಡ ಹಣದುಬ್ಬರ ಇಳಿಕೆಗೆ ಸಹಾಯ ಮಾಡಿವೆ. ಸರ್ಕಾರವು ಮೀಸಲು ದಾಸ್ತಾನನ್ನು ಹೆಚ್ಚಿಸಿ, ಮಾರುಕಟ್ಟೆಗೂ ಸರಕುಗಳನ್ನು ಪೂರೈಸಲಾಗಿದೆ. ಜೊತೆಗೆ, ಆಮದು ನಿರ್ಬಂಧಗಳನ್ನು ಸಡಿಲಿಸಲಾಗಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ದರಗಳು ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದ್ದವು. ಹಾಗಾಗಿ, ದರ ಕುಸಿತದ ಪ್ರಮಾಣವು ಹೆಚ್ಚು ಇರುವಂತೆ ಕಾಣಿಸುತ್ತಿದೆ. ಕಳೆದ ಕೆಲವು ತಿಂಗಳಲ್ಲಿ ವ್ಯವಸ್ಥೆಯಲ್ಲಿ ನಗದು ಹರಿವು ಕಡಿಮೆ ಇತ್ತು, ಇದು ಕೂಡ ಹಣದುಬ್ಬರ ಕುಸಿತಕ್ಕೆ ಕಾರಣವಾಗಿರಬಹುದು. ಹಣದುಬ್ಬರವು ಇನ್ನಷ್ಟು ಇಳಿಕೆಯಾಗಿ ಈ ವರ್ಷದಲ್ಲಿ ಸರಾಸರಿ ಶೇ 3.5ರಷ್ಟು ದಾಖಲಾಗಬಹುದು ಎಂಬ ಅಂದಾಜು ಇದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಸರಾಸರಿ ದರವು ಶೇ 6ರ ಆಸುಪಾಸಿನಲ್ಲಿಯೇ ಇತ್ತು. ಕಚ್ಚಾ ತೈಲ ದರವು ಇಳಿಕೆಯಾಗಿರುವುದು ಮತ್ತು ವಾಡಿಕೆಗಿಂತ ಉತ್ತಮ ಮುಂಗಾರು ಮಳೆಯಾಗಿ ಕೃಷಿ ಉತ್ಪನ್ನಗಳ ಉತ್ಪಾದನೆ ಹೆಚ್ಚಬಹುದು ಎಂಬುದು ಈ ನಿರೀಕ್ಷೆಗೆ ಕಾರಣ.

ಹಣದುಬ್ಬರ ಇಳಿಕೆಯು ಆರ್‌ಬಿಐನ ಆರ್ಥಿಕ ನೀತಿಯಲ್ಲಿ ಬದಲಾವಣೆಗೆ ಕಾರಣವಾಗಬಹುದು. ಇದು ಪ್ರಗತಿಗೆ ವೇಗ ತುಂಬುವ ನಿರೀಕ್ಷೆಯನ್ನು ಹುಟ್ಟಿಸಿದೆ

ಈ ವರ್ಷದ ಆರಂಭದಿಂದಲೇ ಹಣದುಬ್ಬರವು ಇಳಿಕೆಯ ಹಾದಿಯಲ್ಲಿ ಇತ್ತು, ಬೆಲೆ ಏರಿಕೆಯ ಬಿಸಿ ತಗ್ಗಿರುವುದು ಗ್ರಾಹಕರಿಗೆ ಇದು ತುಸು ನಿರಾಳವೆನಿಸಿದೆ. ಈಗಿನ ಹಣದುಬ್ಬರ ಇಳಿಕೆಯು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀತಿಯ ಮೇಲೆ ಪರಿಣಾಮ ಬೀರಲಿದೆ. ಹಣದುಬ್ಬರವು ನಿಯಂತ್ರಣದಲ್ಲಿರುವಾಗ, ಪ್ರಗತಿಗೆ ವೇಗ ತುಂಬಲು ಆರ್ಥಿಕ ನೀತಿಯಲ್ಲಿ ಆರ್‌ಬಿಐ ಬದಲಾವಣೆಗಳನ್ನು ತರಬಹುದು. ರೆಪೊ ದರವನ್ನು ಶೇ 0.25ರಷ್ಟು ಕಡಿತ ಮಾಡಲು ಏಪ್ರಿಲ್‌ನಲ್ಲಿ ನಡೆದ ಸಭೆಯಲ್ಲಿ ಆರ್‌ಬಿಐ ನಿರ್ಧರಿಸಿದೆ. ಜೂನ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರೆಪೊ ದರ ಇನ್ನಷ್ಟು ಕಡಿತವಾಗುವುದು ಈಗ ಬಹುತೇಕ ಖಚಿತ. ಮುಂದಿನ ತಿಂಗಳು ಮತ್ತು ಆಗಸ್ಟ್‌ನಲ್ಲಿ ನಡೆಯಲಿರುವ ನೀತಿ ಪರಾಮರ್ಶೆ ಸಭೆಯಲ್ಲಿ ರೆಪೊ ದರವನ್ನು ಶೇ 0.50ರಷ್ಟು ಇಳಿಸಬಹುದು ಎಂಬ ನಿರೀಕ್ಷೆ ಇದೆ.

ದಿನದ ಟ್ವೀಟ್

ಆಗಬೇಕಾದ ಕೆಲಸ ಬಹಳಷ್ಟಿದೆ

ಹೆಸರು ಬದಲಾಯಿಸಿದ ಮಾತ್ರಕ್ಕೆ ಏನೂ ಆಗುವುದಿಲ್ಲ. ಮೊದಲು ರಸ್ತೆಗಳು, ಚರಂಡಿ ವ್ಯವಸ್ಥೆ... ಎಲ್ಲವನ್ನೂ ಸರಿಮಾಡಿ. ಆಗ ತಾನೇತಾನಾಗಿ ಹೆಸರು ಬದಲಾಗುತ್ತದೆ.

(ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಆಗಿ ಬದಲಾಗಿರುವುದಕ್ಕೆ ಪ್ರತಿಕ್ರಿಯೆ)

ಕಾರ್ತಿಕ್ ಶೆಟ್ಟಿ

ಕಿಡಿನುಡಿ

ಕ್ವಾರ್ಟರ್ ಎನ್ನಲಿ, ಫುಲ್ ಬೆಂಗಳೂರು ಎಂದಾದರೂ ಹೇಳಲಿ, ತಲೆಕೆಡಿಸಿಕೊಳ್ಳುವುದಿಲ್ಲ. ವಿರೋಧ ಪಕ್ಷದವರಾಗಿ ಅಷ್ಟೂ ವಿರೋಧಿಸದಿದ್ದರೆ ಹೇಗೆ ಹೇಳಿ? ನಿಜವಾಗಲೂ ವಿರೋಧವಿದ್ದಿದ್ದರೆ ವಿಧಾನಮಂಡಲ ಅಧಿವೇಶನದಲ್ಲೇ ಹೇಳಬಹುದಿತ್ತು. ಅಲ್ಲಿ ಬೆಂಬಲಿಸಿ, ಈಗ ಹೀಗೆ ಹೇಳಿದರೆ ಅರ್ಥವಿದೆಯೇ?

(ಬೆಂಗಳೂರನ್ನು ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು ಮಾಡಿದ್ದಾರೆ ಎಂಬ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಟೀಕೆಗೆ ಪ್ರತಿಕ್ರಿಯೆ)

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 17-5-2000

• **ಅಶ್ಲೀಲ ಚಿತ್ರಕ್ಕೆ ತೆರಿಗೆ ವಿನಾಯಿತಿ ಇಲ್ಲ**

ಬೆಂಗಳೂರು, ಮೇ 16– ಮಹಿಳೆಯರ ಬಗ್ಗೆ ಅಗೌರವ ತೋರುವ, ಅಪಹಾಸ್ಯ- ಅವಹೇಳನ ಮಾಡುವ, ವಿಪರೀತ ಹಿಂಸಾಚಾರ ಹಾಗೂ ಲೈಂಗಿಕತೆಗೆ ಪ್ರಚೋದನೆ ನೀಡುವ ಅಶ್ಲೀಲ ಕನ್ನಡ ಚಲನಚಿತ್ರಗಳಿಗೆ ಇನ್ನು ಮುಂದೆ ತೆರಿಗೆ ವಿನಾಯಿತಿ ನೀಡದಿರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಯಾವುದೇ ಕನ್ನಡ ಚಿತ್ರದ ಬಗ್ಗೆ ಸಾರ್ವಜನಿಕರಿಂದ ಈ ಸಂಬಂಧದಲ್ಲಿ ದೂರುಗಳು ಬಂದಾಗ ಆ ಚಿತ್ರವನ್ನು ವೀಕ್ಷಿಸಿ ತೀರ್ಮಾನ ಕೈಗೊಳ್ಳಲು ಸರ್ಕಾರ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸುವ ನಿಟ್ಟಿನಲ್ಲಿ ಚಿಂತನೆ ನಡೆಸುತ್ತಿದೆ ಎಂದು ವಾರ್ತಾ ಮತ್ತು ಪ್ರಚಾರ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ಇಂದು ಅಲ್ಲಿ ಅವರನ್ನು ಭೇಟಿ ಮಾಡಿದ ಸುದ್ದಿಗಾರರಿಗೆ ತಿಳಿಸಿದರು.

• **ಮುಷ್ಕರ ಅಂತ್ಯ; ಎಸ್ಮಾ ಹಿಂದಕ್ಕೆ**

ಬೆಂಗಳೂರು, ಮೇ 16– ಮೌಲ್ಯಮಾಪನ ಬಹಿಷ್ಕರಿಸಿದ್ದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ತಮ್ಮ ಮುಷ್ಕರವನ್ನು ಇಂದು ಸಂಜೆ ಹಿಂತೆಗೆದುಕೊಂಡು ನಾಳೆಯಿಂದ ಮೌಲ್ಯಮಾಪನಕ್ಕೆ ಹಾಜರಾಗುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ 'ಎಸ್ಮಾ' ಜಾರಿಯನ್ನು ಹಿಂತೆಗೆದುಕೊಂಡಿದೆ.

ಪಿಯುಸಿ ಮೌಲ್ಯಮಾಪನ ಬಹಿಷ್ಕರಿಸಿದ್ದ ಉಪನ್ಯಾಸಕರು ಮತ್ತು ಸರ್ಕಾರದ ನಡುವೆ ಇಂದು ಸಂಜೆ ನಡೆದ ಮಾತುಕತೆ ಫಲಪ್ರದವಾಗಿದ್ದು, ಬಹಿಷ್ಕಾರವನ್ನು ತಕ್ಷಣದಿಂದ ಹಿಂತೆಗೆದುಕೊಳ್ಳಲು ರಾಜ್ಯ ಪದವಿ ಪೂರ್ವ ಶಿಕ್ಷಣ ಅಧಿಕಾರಿಗಳ, ಪ್ರಾಚಾರ್ಯರ, ಉಪನ್ಯಾಸಕರ ಮತ್ತು ಬೋಧಕೇತರರ ಒಕ್ಕೂಟ ಸಮ್ಮತಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 17-5-1975

• **ಗೆದ್ದ ಸ್ಪರ್ಧಿ ದಾರಿ ತಪ್ಪಿದರೆ ಶಾಸ್ತಿ ಜೆ.ಪಿ. ಸಿದ್ಧಾಂತ**

ಬೆಂಗಳೂರು, ಮೇ 16– ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿ ದಾರಿ ತಪ್ಪಿದಾಗ ವಾಪಸು ಕರೆಸಿಕೊಳ್ಳಲು ಅವಕಾಶವಿರಬೇಕೆಂಬ ಸಿದ್ಧಾಂತವನ್ನು ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಅವರು ಇಂದು ಇಲ್ಲಿ ಪುನಃ ಪ್ರತಿಪಾದಿಸಿದರು.

ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಅದಕ್ಕೆ ಅವಕಾಶವಿಲ್ಲ. ಆದರೆ ಅವರು ಪ್ರತಿಪಾದಿಸಿದ ಮತದಾರರ ಮಂಡಳಿ ಅಥವಾ ಜನತಾ ಮಂಡಳಿಗಳ ರೀತ್ಯ ಅದಕ್ಕೆ ಅವಕಾಶವಿದೆ.

ಗಾಂಧಿ ಭವನದಲ್ಲಿ ಸಮಾವೇಶಗೊಂಡಿದ್ದ ವಿದ್ಯಾರ್ಥಿ ಯುವಜನರನ್ನು ಉದ್ದೇಶಿಸಿ ಗುಜರಾತ್ ಮತ್ತು ಬಿಹಾರ ಚಳವಳಿಗಳನ್ನು ವಿವರಿಸಿದ ಅವರು 'ಇತರ ಸಂಘ, ಸಂಸ್ಥೆಗಳ ಸಂಬಂಧ ತ್ಯಜಿಸಿ ಎಲ್ಲರೂ ಹೋರಾಟ ಸಮಿತಿಯಲ್ಲಿ ಒಗ್ಗೂಡಲು' ಕರೆಯಿತ್ತರು.

ಚುನಾವಣೆಗಳ ಪೂರ್ವ ಆಗಬೇಕಾಗಿರುವ ಕಾರ್ಯಗಳನ್ನು ಅವರು ಪ್ರಸ್ತಾಪಿಸಿ, ಗುಜರಾತ್ ಯುವಜನರಿಗೂ ಜನತಾ ಮಂಡಳಿಗಳ ರಚನೆಗೆ ಸಲಹೆ ನೀಡಿದುದಾಗಿ ತಿಳಿಸಿದರು.

'ನೀವು ಮತದಾರರ ಬಳಿಗೆ ಹೋಗಿ ಸಮ್ಮೇಳನ ಕರೆಯಿರಿ. ಒಂದು ಸಾವಿರಕ್ಕೆ 200 ಅಥವಾ 300 ಮಂದಿಯಾದರೂ ಬರುವರು. ಅವರಲ್ಲಿ ನಾಲ್ಕೈದು ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಮತದಾರರ ಮಂಡಳಿ ರಚಿಸಿ. ಆ ಮಂಡಳಿ ಬರುವ ಚುನಾವಣೆಯಲ್ಲಿ ಸಂಬಂಧಪಟ್ಟ ಚುನಾವಣೆ ಕ್ಷೇತ್ರದ ಅಭ್ಯರ್ಥಿಯನ್ನು ಆಯ್ಕೆ ಮಾಡಲಿ. ಅಭ್ಯರ್ಥಿಯಾಗುವವನು ವರಮಾನ ಘೋಷಿಸಿಕೊಳ್ಳಬೇಕು ಮತ್ತು ಮತದಾರರ ಮಂಡಳಿ ಕರೆಯಿತ್ತಾಗ ರಾಜೀನಾಮೆ ಕೊಡಲು ಸಿದ್ಧನಾಗಿರಬೇಕೆಂಬ ಷರತ್ತು ಹಾಕಿ' ಎಂದು ಹೇಳಿದರು.

• **ಸಾಂಸ್ಕೃತಿಕ, ಶಿಕ್ಷಣ ಕ್ರಾಂತಿಗೆ ಕರೆ**

ಬೆಂಗಳೂರು, ಮೇ 16– ಚೀನಾದಲ್ಲಿ ಮಾವೊ ತ್ಸೆ ತುಂಗ್ ಅವರು ಪ್ರಾರಂಭಿಸಿದ ಚಳವಳಿಯ ಮಾದರಿಯಲ್ಲಿ ದೇಶದಲ್ಲಿ ಶಿಕ್ಷಣ ಹಾಗೂ ಸಾಂಸ್ಕೃತಿಕ ಕ್ರಾಂತಿಯೊಂದನ್ನು ನಡೆಸಬೇಕೆಂದು ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಅವರು ಇಂದು ಇಲ್ಲಿ ಕರೆಯಿತ್ತರು.

ವಿದ್ಯಾರ್ಥಿಗಳು ಗ್ರಾಮಗಳಿಗೆ ತೆರಳಿ ಜನಸಾಮಾನ್ಯರಿಗೆ ತಿಳಿವಳಿಕೆ ನೀಡಲು ಅನುಕೂಲವಾಗುವಂತೆ ಒಂದೆರಡು ವರ್ಷ ಎಲ್ಲ ಶಾಲಾ- ಕಾಲೇಜುಗಳನ್ನೂ ಮುಚ್ಚಬೇಕೆಂದು ಅವರು ನಗರದಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಹೇಳಿದರು.

ದಿಗ್ಗಜರ ನಿವೃತ್ತಿ: ಯುವ ಆಟಗಾರರಿಗೆ ಸಾಮರ್ಥ್ಯ ತೋರಲು ಸುವರ್ಣಾವಕಾಶ

ನವತಾರೆಗಳ ನಿರೀಕ್ಷೆಯಲ್ಲಿ ಭಾರತ ಕ್ರಿಕೆಟ್

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ರವಿಚಂದ್ರನ್ ಅಶ್ವಿನ್, ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ...

ಐದು ತಿಂಗಳ ಅವಧಿಯಲ್ಲಿ ಈ ಮೂವರು 'ಮೆಗಾಸ್ಟಾರ್'ಗಳು ನಿವೃತ್ತಿ ಘೋಷಿಸಿದ್ದಾರೆ. ಅವರಲ್ಲಿ ಅಶ್ವಿನ್ ಮಾತ್ರ ಅಂತರರಾಷ್ಟ್ರೀಯ ಕ್ರಿಕೆಟ್‌ನ ಮೂರೂ ಮಾದರಿಗಳಿಗೆ ವಿದಾಯ ಹೇಳಿದರು. ರೋಹಿತ್ ಮತ್ತು ವಿರಾಟ್ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಆಟ ಉಳಿಸಿಕೊಂಡಿದ್ದಾರೆ. ನವಯುಗದ ಬಹು ದೊಡ್ಡ ಕ್ರಿಕೆಟ್ ತಾರೆಗಳಾಗಿರುವ ರೋಹಿತ್ ಮತ್ತು ವಿರಾಟ್ ಹಿಂದಿನ ಒಂದು ವಾರದ ಅವಧಿಯಲ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಇದು ಕ್ರಿಕೆಟ್ ವಲಯವನ್ನು ಅಚ್ಚರಿಗೆ ತಳ್ಳಿದೆ.

ಅದೂ ಮುಂದಿನ ತಿಂಗಳು ಭಾರತ ತಂಡವು ಇಂಗ್ಲೆಂಡ್ ಪ್ರವಾಸಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ರೋಹಿತ್–ಕೊಹ್ಲಿ ಅವರ ನಿರ್ಣಯ ಹಲವು ಚರ್ಚೆಗಳನ್ನು ಹುಟ್ಟುಹಾಕಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಾಲ್ಕು ಗೋಡೆಗಳ ನಡುವೆ ಏನೋ ನಡೆದಿದೆ ಎಂಬ ಗುಮಾನಿಯನ್ನೂ ಮೂಡಿಸಿರುವುದು ಸುಳ್ಳಲ್ಲ. ಆದರೆ ಐದು ತಿಂಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ಭಾರತ ತಂಡವು ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಹೀನಾಯವಾಗಿ ಸೋತಾಗ ಇವರಿಬ್ಬರೂ ಹೆಚ್ಚು ಟೀಕೆಗಳಿಗೆ ತುತ್ತಾಗಿದ್ದರು. ಅದಕ್ಕೆ ಕಾರಣ ಅವರ ಕಳಪೆ ಬ್ಯಾಟಿಂಗ್ ಫಾರ್ಮ್. ರೋಹಿತ್ ನಾಯಕತ್ವದ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು. ಅದರಿಂದಾಗಿ ಅವರು ಸಿಡ್ನಿ ಟೆಸ್ಟ್‌ನಲ್ಲಿ ಕಣಕ್ಕಿಳಿಯದೆ ಜಸ್‌ಪ್ರೀತ್ ಬೂಮ್ರಾ ಅವರಿಗೆ ನಾಯಕತ್ವದ ಹೊಣೆ ವಹಿಸಿದ್ದರು. ವಿರಾಟ್ ಅವರು ಆಫ್‌ಸ್ಟಂಪ್ ಹೊರಗೆ ಸಾಗುವ ಎಸೆತಗಳನ್ನು ಕೆಣಕಿ ಪದೇಪದೇ ವಿಕೆಟ್ ಚೆಲ್ಲಿದ್ದರು. ಅದಕ್ಕಾಗಿ ಅಪಾರ ಟೀಕೆಗಳಿಗೆ ಗುರಿಯಾಗಿದ್ದರು. ಆಸ್ಟ್ರೇಲಿಯಾ ಪ್ರವಾಸಕ್ಕೂ ಮುನ್ನ ಭಾರತದಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿಯೂ ತಂಡವು ಹೀನಾಯವಾಗಿ ಸೋಲು ಅನುಭವಿಸಿತ್ತು.

ಈ ಸರಣಿಗಳ ಸಂದರ್ಭದಲ್ಲಿ ಡ್ರೆಸಿಂಗ್ ರೂಮ್ ಒಳಗೆ ನಡೆದಿದ್ದವೆನ್ನಲಾದ ಕೆಲವು ವಿಷಯಗಳು ಚರ್ಚೆಗೆ ಗ್ರಾಸವಾಗಿದ್ದವು. ಅಲ್ಲದೆ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಕೆಲವು ಆಟಗಾರರ ನಡುವೆ ಭಿನ್ನಾಭಿಪ್ರಾಯಗಳಿವೆ ಎಂಬ ಮಾತುಗಳೂ ಕೇಳಿಬಂದಿದ್ದವು. 'ತಂಡದೊಳಗೆ ಸೂಪರ್‌ಸ್ಟಾರ್ ಸಂಸ್ಕೃತಿ ಇದೆ. ಈ ತಾರೆಗಳು ವೈಫಲ್ಯ ಅನುಭವಿಸಿದರೂ ಆಯ್ಕೆಗೆ ಪರಿಗಣಿಸಲಾಗುತ್ತದೆ. ಈ ರೀತಿಯ ಸಂಸ್ಕೃತಿ ಇರಬಾರದು' ಎಂದು ಕೆಲವು ವೀಕ್ಷಕ ವಿವರಣೆಗಾರರೂ ಟೀಕಿಸಿದ್ದರು.

ಅದರ ನಂತರ ರೋಹಿತ್ ನಾಯಕತ್ವದಲ್ಲಿ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ (ಏಕದಿನ ಮಾದರಿ) ಜಯಿಸಿತು. ಆ ಸಡಗರದಲ್ಲಿ ಟೆಸ್ಟ್ ಸರಣಿ ಸೋಲಿನ ಕಹಿನೆನಪು ಮರೆಯಾಯಿತು. ಆದರೆ ಜನ ಮರೆತರೂ ವಿರಾಟ್ ಮತ್ತು ರೋಹಿತ್ ಸರಿಯಾದ ಸಮಯಕ್ಕೆ ಕಾದಿದ್ದರು. ಈಗ ಡಬ್ಲ್ಯುಟಿಸಿ (ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್) ನಾಲ್ಕನೇ ಆವೃತ್ತಿ ಶುರುವಾಗುವ ಹೊತ್ತಿನಲ್ಲಿ ಟೆಸ್ಟ್‌ಗೆ ಗುಡ್‌ಬೈ ಹೇಳಿದ್ದಾರೆ. ಹಾಗಾಗಿಯೇ ಪ್ರೇಕ್ಷಕರ ವಲಯದಿಂದ ಮಿಶ್ರ ಪ್ರತಿಕ್ರಿಯೆಗಳು ಕೇಳಿಬರುತ್ತಿವೆ. ವಿರಾಟ್ ದೈಹಿಕವಾಗಿ ಮತ್ತು ಮಾನಸಿಕವಾಗಿ ಫಿಟ್ ಆಗಿರುವುದರಿಂದ ಇನ್ನೂ ಕೆಲಕಾಲ ಆಡಬಹುದಿತ್ತು ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಇದೆಲ್ಲದರಾಚೆ ಆಧುನಿಕ ಕ್ರಿಕೆಟ್ ಜಗತ್ತಿನ ಈ ದಿಗ್ಗಜರು ಅದ್ಭುತವಾದ ಕೊಡುಗೆಯನ್ನು ನೀಡಿ ಹೋಗಿದ್ದಾರೆ. ಅದರಿಂದಾಗಿಯೇ ಭಾರತ ತಂಡದಲ್ಲಿ ದೊಡ್ಡ ನಿರ್ವಾತ ಸೃಷ್ಟಿಯಾಗಿರುವುದೂ ಸತ್ಯ. ಈ ಪರಿಸ್ಥಿತಿಯನ್ನು ಯುವ ಆಟಗಾರರು ಸಕಾರಾತ್ಮಕವಾಗಿ ಪರಿಗಣಿಸಿದರೆ ಅವರ ಸ್ಥಾನಗಳನ್ನು ತುಂಬುವ ಅವಕಾಶ ಇದೆ. ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ರಿಷಭ್ ಪಂತ್, ದೇವದತ್ತ ಪಡಿಕ್ಕಲ್ ಅವರಂತಹ ಪ್ರತಿಭಾವಂತರಿಗೆ ಸಾಧನೆ ಮಾಡುವ ಸಾಮರ್ಥ್ಯ ಇದೆ. ತಾವೂ ಕ್ರಿಕೆಟ್ ಆಗಸದ ನಕ್ಷತ್ರಗಳಾಗಿ ಹೊಳೆಯುವ ಈ ಸುವರ್ಣಾವಕಾಶವನ್ನು ಅವರು ಎರಡೂ ಕೈಗಳಿಂದ ಬಾಚಿಕೊಳ್ಳಬೇಕು. ಮುಖ್ಯವಾಗಿ ಭಾರತಕ್ಕೆ ವಿಶ್ವ ಟೆಸ್ಟ್ ಕಿರೀಟವನ್ನು ಗೆದ್ದು ತರುವ ಹೊಣೆಗಾರಿಕೆಯೂ ಯುವ ಆಟಗಾರರ ಮುಂದಿದೆ. ವಿರಾಟ್ ಮತ್ತು ರೋಹಿತ್ ನಾಯಕತ್ವದಲ್ಲಿ ಭಾರತವು ಡಬ್ಲ್ಯುಟಿಸಿ ಫೈನಲ್‌ನಲ್ಲಿ ತಲಾ ಒಂದು ಬಾರಿ ರನ್ನರ್ ಅಪ್ ಆಗಿತ್ತು.

ಕರ್ನಲ್ ಸಿ.ಕೆ. ನಾಯ್ಡು ಅವರಿಂದ ಶುರುವಾಗಿ ರೋಹಿತ್ ಶರ್ಮಾ ಅವರವರೆಗೂ ಹಲವು ಆಟಗಾರರು ಟೆಸ್ಟ್ ಮಾದರಿಯ ಉಳಿವಿಗೆ ಅಮೋಘ ಕಾಣಿಕೆ ನೀಡಿದ್ದಾರೆ. ಅದರಲ್ಲೂ ಟಿ20 ಕ್ರಿಕೆಟ್ ಅಬ್ಬರದಲ್ಲಿ ಟೆಸ್ಟ್ ಪಂದ್ಯಗಳನ್ನೂ ಜನ ನೋಡುವಂತೆ ಮಾಡಿದ ಬಹುಪಾಲು ಶ್ರೇಯ ವಿರಾಟ್ ಮತ್ತು ರೋಹಿತ್ ಅವರಿಗೇ ಸಲ್ಲಬೇಕು. ನವಪೀಳಿಗೆಯ ಪ್ರೇಕ್ಷಕರಿಗೆ ರುಚಿಸುವಂತಹ ಆಟವನ್ನು ಬಿಳಿ ದಿರಿಸಿನಲ್ಲಿಯೂ ಉಣಬಡಿಸಿದವರು ವಿರಾಟ್ ಮತ್ತು ರೋಹಿತ್. ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಬಾರಿ ಬಾರ್ಡರ್–ಗಾವಸ್ಕರ್ ಟ್ರೋಫಿ ಜಯಿಸಲು ಸಾಧ್ಯವಾಗಿದ್ದೇ ವಿರಾಟ್ ನಾಯಕತ್ವದಲ್ಲಿ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮತ್ತು ಟಿ20 ಪಂದ್ಯಗಳು ಮನರಂಜನೆಯ ಮೂಲಗಳು ಎಂಬುದು ನಿಜ. ಅವು ಕ್ರಿಕೆಟ್ ಮಂಡಳಿಗೆ ದೊಡ್ಡ ಪ್ರಮಾಣದ ವರಮಾನ ಗಳಿಸಿಕೊಡುತ್ತವೆ ಎಂಬುದೂ ದಿಟ. ಆದರೆ ಕ್ರಿಕೆಟ್‌ನ ತಾಯಿಬೇರು ಟೆಸ್ಟ್ ಮಾದರಿಯ ಸೊಬಗಿಗೆ ಸರಿಸಾಟಿ ಮತ್ತೊಂದಿಲ್ಲ. ಇದನ್ನು ಕ್ರಿಕೆಟ್ ಕಸ್ಟೋಡಿಯನ್ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಕೂಡ ಪ್ರತಿಪಾದಿಸುತ್ತದೆ.

'ಟೆಸ್ಟ್ ಕ್ರಿಕೆಟ್ ನನ್ನ ಹೃದಯಕ್ಕೆ ಹತ್ತಿರವಾದದ್ದು. ಅದು ನೀಡಿರುವ ನೆನಪುಗಳು ನನ್ನ ಪಾಲಿಗೆ ಶಾಶ್ವತ. ಈ ಮಾದರಿಯು ನನ್ನ ಸಾಮರ್ಥ್ಯವನ್ನು ಪ್ರತಿ ಹಂತದಲ್ಲಿಯೂ ಪರೀಕ್ಷೆಗೊಡ್ಡಿದೆ. ತಿದ್ದಿ, ತೀಡಿ ರೂಪಿಸಿದೆ' ಎಂದು ಸ್ವತಃ ವಿರಾಟ್ ತಮ್ಮ ವಿದಾಯಪತ್ರದಲ್ಲಿ ಬರೆದಿದ್ದಾರೆ.

ವೈಟ್‌ಬಾಲ್ ಕ್ರಿಕೆಟ್‌ನ ಪರಿಣತರಲ್ಲಿ ಅಗ್ರಮಾನ್ಯರಾಗಿರುವ ರೋಹಿತ್ ಕೂಡ ಟೆಸ್ಟ್ ಆಟಗಾರರಾಗಿ ಗುರುತಿಸಿಕೊಳ್ಳಲು ತಮ್ಮನ್ನು ಅಗ್ನಿದಿವ್ಯಕ್ಕೆ ಒಡ್ಡಿಕೊಂಡವರು. ಏಕದಿನ ಮಾದರಿಯಲ್ಲಿ ಮೂರು ದ್ವಿಶತಕ ಹೊಡೆದ ಆಟಗಾರ ರೋಹಿತ್ ಅವರು ಟಿ20 ಮತ್ತು ಐಪಿಎಲ್‌ನಲ್ಲಿಯೂ ಚಾರಿತ್ರಿಕ ಸಾಧನೆ ಮಾಡಿದ್ದಾರೆ. ಆದರೆ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಪಂದ್ಯದಲ್ಲಿಯೇ ಬಾರಿಸಿದ ಶತಕವನ್ನು ಕ್ರಿಕೆಟ್‌ಪ್ರೇಮಿಗಳು ಮರೆಯಲಾಗದು. 2013ರಲ್ಲಿ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಪಂದ್ಯದಲ್ಲಿ ರೋಹಿತ್ ಮತ್ತು ಅಶ್ವಿನ್ ಇಬ್ಬರೂ ಶತಕ ಬಾರಿಸಿದ್ದರು. ಇದಷ್ಟೇ ಅಲ್ಲ, 67 ಟೆಸ್ಟ್‌ಗಳಲ್ಲಿ ಅವರು ಹೊಡೆದ ಒಟ್ಟು 12 ಶತಕಗಳಿಗೂ ಒಂದೊಂದು ವೈಶಿಷ್ಟ್ಯವಿದೆ. ಅವೆಲ್ಲವೂ ರೋಹಿತ್ ಅವರು ತಾವು ಟೆಸ್ಟ್‌ಗೂ ಸೈ ಎಂಬುದನ್ನು ಸಾಬೀತುಪಡಿಸಿದ ದಾಖಲೆಗಳಾಗಿವೆ. ಐದು ಮತ್ತು ಆರನೇ ಕ್ರಮಾಂಕಗಳಲ್ಲಿ ಬ್ಯಾಟಿಂಗ್ ಮಾಡುವುದರೊಂದಿಗೆ ಟೆಸ್ಟ್ ಕ್ರಿಕೆಟ್ ಜೀವನ ಆರಂಭಿಸಿದ್ದ ಅವರು, ನಂತರದಲ್ಲಿ ಆರಂಭಿಕ ಬ್ಯಾಟರ್ ಆಗಿ ಬಡ್ತಿ ಪಡೆದು ಯಶಸ್ವಿಯಾದರು.

ವಿರಾಟ್ ಟೆಸ್ಟ್‌ನಲ್ಲಿ ಸಚಿನ್ ನಂತರದ ಸ್ಥಾನ ತುಂಬಿದವರು. ಹೆಚ್ಚಾಗಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದರು. ಅಗ್ರಕ್ರಮಾಂಕದ ಮೂವರು ಬ್ಯಾಟರ್‌ಗಳು ಉತ್ತಮವಾಗಿ ಆಡಿದಾಗ ದೊಡ್ಡ ಮೊತ್ತದತ್ತ ತಂಡವನ್ನು ನಡೆಸುವ ಹೊಣೆ ಈ ಕ್ರಮಾಂಕದ ಬ್ಯಾಟರ್‌ಗಿರುತ್ತದೆ. ಒಂದೊಮ್ಮೆ ಅಗ್ರಕ್ರಮಾಂಕದವರು ಬೇಗನೆ ಔಟಾದಾಗ ಮುಳುಗುವ ಇನಿಂಗ್ಸ್ ರಕ್ಷಿಸುವ ಹೊಣೆ ಕೂಡ ಈ ಬ್ಯಾಟರ್‌ಗಿರುತ್ತದೆ. ಅದಕ್ಕೆ ದೈಹಿಕ ಕ್ಷಮತೆಯ ಜೊತೆಗೆ ಗಟ್ಟಿ ಮನೋಭೂಮಿಕೆಯೂ ಇರಬೇಕು. ಈ ಗುಣಗಳು ಕೊಹ್ಲಿ ಅವರಲ್ಲಿ ಮೇಳೈಸಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಭಾರತದ ಕ್ರಿಕೆಟ್‌ನಲ್ಲಿ ಒಬ್ಬ ತಾರೆಯ ನಿರ್ಗಮನದ ಹೊತ್ತಿನಲ್ಲಿ ಮತ್ತೊಬ್ಬ ಪ್ರತಿಭಾನ್ವಿತನ ಆಗಮನದ ಉದಾಹರಣೆಗಳಿವೆ. ಸುನಿಲ್ ಗಾವಸ್ಕರ್ ಸ್ಥಾನಕ್ಕೆ ಸಚಿನ್, ನಂತರ ಕೊಹ್ಲಿ, ರಾಹುಲ್ ದ್ರಾವಿಡ್ ನಂತರ ಚೇತೇಶ್ವರ ಪೂಜಾರ, ವೀರೇಂದ್ರ ಸೆಹ್ವಾಗ್ ಅವರಿಗೆ ರೋಹಿತ್, ಕಪಿಲ್ ದೇವ್ ಜಾಗಕ್ಕೆ ಜಾವಗಲ್ ಶ್ರೀನಾಥ್ ಹಾಗೂ ಹರಭಜನ್ ಸಿಂಗ್ ಅವರ ಸ್ಥಾನಕ್ಕೆ ಅಶ್ವಿನ್ ಸಿಕ್ಕರು. ಈಗ ಐಪಿಎಲ್‌ನಿಂದಾಗಿ ಯುವಪ್ರತಿಭೆಗಳು ಕಣದಲ್ಲಿದ್ದಾರೆ. ಆದರೆ ರೋಹಿತ್, ಕೊಹ್ಲಿ, ಅಶ್ವಿನ್ ಸ್ಥಾನ ತುಂಬುವವರು ಈ ಗುಂಪಿನಲ್ಲಿ ಇದ್ದಾರೆಯೇ ಎಂಬುದು ಪ್ರಶ್ನೆಯಾಗಿದೆ.

ಚುರುಮುರಿ

ಕಠಿಣವಾಯ್ತೆ ಕನ್ನಡ?

• ಸಿ.ಎನ್.ರಾಜು

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಯ ಹೆಚ್ಚಿನ ಮಕ್ಕಳು ಕನ್ನಡ ವಿಷಯದಲ್ಲಿ ಫೇಲಾಗಿದ್ದರು. ಟೀಚರ್ಸ್ ಮೀಟಿಂಗ್‌ನಲ್ಲಿ ಕನ್ನಡ ಮೇಷ್ಟ್ರು ಅಪ್ಸೆಟ್ ಆಗಿದ್ದರು.

'ಯಾಕ್ರೀ ಹೀಗಾಯ್ತು?' ಹೆಡ್ ಮೇಷ್ಟ್ರು ಕೇಳಿದರು. ಕನ್ನಡ ಮೇಷ್ಟ್ರು ಉತ್ತರಿಸದೆ ನಿರಾಶೆಯ ನಿಟ್ಟುಸಿರುಬಿಟ್ಟರು.

'ಇಂಗ್ಲಿಷ್, ಹಿಂದಿಯಲ್ಲಿ ಎಲ್ಲಾ ಮಕ್ಕಳು ಪಾಸಾಗಿದ್ದಾರೆ. ಕನ್ನಡ ಮಕ್ಕಳಿಗೆ ಮದರ್ ಟಂಗ್‌ಗಿಂತ ಅದರ್ ಟಂಗ್ ಮೋಹ ಜಾಸ್ತಿಯಾಯ್ತೆ? ಸವಿಗನ್ನಡ 'ಹೆವಿಗನ್ನಡ' ಆಯ್ತೆ?' ಹೆಡ್ ಮೇಷ್ಟ್ರಿಗೆ ಚಿಂತೆಯಾಗಿತ್ತು.

'ಪಾಠ ಹೇಳುವ ವಿಚಾರದಲ್ಲಿ ಕನ್ನಡ ಮೇಷ್ಟ್ರು ಫೇಲಾಗಿದ್ದಾರೆ' ಇಂಗ್ಲಿಷ್ ಟೀಚರ್ ಕಿಚಾಯಿಸಿದರು.

'ಸುಮ್ನೆ ಕೂತ್ಕೊಳ್ರೀ, ಇಂಗ್ಲಿಷ್‌ನಲ್ಲಿ ಇರೋದು 26 ಅಕ್ಷರ. ಇಂಗ್ಲಿಷಿನಲ್ಲಿ ಸ್ವರ, ವ್ಯಂಜನವಿಲ್ಲ, ಹ್ರಸ್ವ ಸ್ವರ, ದೀರ್ಘ ಸ್ವರ, ಒತ್ತಕ್ಷರ ಇಲ್ಲ, ಯಾವ ಅಕ್ಷರಕ್ಕೂ ತಲೆಕಟ್ಟು, ದೀರ್ಘ, ಕೊಂಬು, ಒಟ್ರುಸುಳಿ, ಐತ್ವ, ಐತ್ವಂದೀರ್ಘ, ಓತ್ವ, ಐತ್ವ ಇಲ್ಲ, ಸಂಧಿ, ಸಮಾಸ, ಛಂದಸ್ಸು ಇಲ್ಲ. ಎ ಫಾರ್ ಆ್ಯಪಲ್, ಪಿ ಫಾರ್ ಪೀಪಲ್ ಅನ್ನುವಷ್ಟು ಸರಳವಲ್ಲಾರೀ ಕನ್ನಡ...' ಕನ್ನಡ ಮೇಷ್ಟ್ರು ಸಿಟ್ಟಾಗೇ ಹೇಳಿದರು.

'ಏನೇ ಆಗಲಿ ಮಕ್ಕಳು ಕನ್ನಡದಲ್ಲಿ ಪಾಸಾಗಲೇಬೇಕು, ಇಲ್ಲಾಂದ್ರೆ ಶಾಲೆಯೇ ಫೇಲಾಗಿಬಿಡುತ್ತದೆ' ಎಚ್ಚರಿಸಿದರು ಎಚ್ಚೆಂ.

'ಕನ್ನಡ ಕಬ್ಬಿಣದ ಕಡಲೆ ಆಗಬಾರದು. ಕನ್ನಡ ಸಿಲೆಬಸ್ ಅನ್ನು ಸರಳಗೊಳಿಸಬೇಕು, ಕನ್ನಡಕ್ಕೆ ಕೃಪಾಂಕ ಕೊಟ್ಟು ಕನ್ನಡ ಮಕ್ಕಳನ್ನು ಕಾಪಾಡಬೇಕು ಅಂತ ಇಲಾಖೆಗೆ ಮನವಿ ಮಾಡೋಣ' ಸೈನ್ಸ್ ಟೀಚರ್ ಸಲಹೆ.

'ಮಕ್ಕಳ ಜೊತೆಗೆ ಟೀಚರ್‌ಗಳೂ ಕನ್ನಡ ಅಧ್ಯಯನ ಮಾಡಬೇಕು. ಸಮಾಜ ಮೇಷ್ಟ್ರು 'ಸಾಮ್ರಾಜ್ಯ'ವನ್ನು ತಪ್ಪಾಗಿ 'ಸಾಂಬ್ರಾಜ್ಯ' ಎಂದು ಬರೆದಿದ್ದು, ಶಾಲೆಗೆ ವಿಸಿಟ್ ಬಂದ ಇಲಾಖೆ ಅಧಿಕಾರಿ 'ಸಾಂಬ್ರಾಜ್ಯ'ಕ್ಕೆ ರೆಡ್ ಇಂಕ್‌ನಲ್ಲಿ ರೌಂಡ್ ಮಾರ್ಕ್ ಹಾಕಿದ್ರು' ಎಂದು ಹೇಳಿ ಎಚ್ಚೆಂ ಸಭೆ ಮುಗಿಸಿದರು.

ಸಂಗತ

ಪರಿವರ್ತನೆಗಿದೆ ಸೌಹಾರ್ದ ಮಾರ್ಗ

ದನಿ ಇಲ್ಲದವರ ಪರವಾಗಿ ಯೋಚಿಸುವ ಹಾಗೂ ಅವರ ಬಗ್ಗೆ ಕಾಳಜಿ ತೋರುವ ಮಾತೃಪ್ರಜ್ಞೆಯನ್ನು ಸಮಾಜ ಬೆಳೆಸಿಕೊಳ್ಳಬೇಕಾಗಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಪತ್ರಕರ್ತರೊಬ್ಬರು ಬಿ.ಆರ್.ಅಂಬೇಡ್ಕರ್ ಅವರಿಗೆ 'ನೀವು ಯಾಕೆ ಪಾಶ್ಚಾತ್ಯರ ಹಾಗೆ ಬಟ್ಟೆ ಧರಿಸುತ್ತೀರಿ? ಸೂಟು, ಬೂಟು, ಹ್ಯಾಟು ಯಾಕೆ ಬೇಕು? ಬಡವರು, ದಲಿತರ ಪರವಾಗಿ ಹೋರಾಡುವ ನೀವು ಬೆಲೆಬಾಳುವ ಉಡುಪು ಧರಿಸುವ ಅಗತ್ಯವಿದೆಯೇ? ಅದೇ ಗಾಂಧೀಜಿಯನ್ನು ನೋಡಿ, ಎಷ್ಟು ಸರಳವಾಗಿ ಇರುತ್ತಾರೆ' ಎಂದು ತುಸು ಜೋರಾಗಿಯೇ ಕೇಳಿದರು.

ಅಂಬೇಡ್ಕರ್ ಅವರು ಸಣ್ಣಗೆ ನಕ್ಕು, 'ಅಯ್ಯಾ, ನಾನು ಹೀಗೆ ಇರುವುದು ಸರಿ, ಗಾಂಧೀಜಿ ಹಾಗೆ ಇರುವುದೇ ಸರಿ. ಆತ್ಮವಿಶ್ವಾಸವೇ ಕುಗ್ಗಿಹೋಗಿರುವ ದಲಿತರಲ್ಲಿ ಆತ್ಮವಿಶ್ವಾಸ ಮೂಡಿಸುವ ಸಲುವಾಗಿಯಾದರೂ ನಾನು ಇಂಥ ಬಟ್ಟೆ ಧರಿಸಬೇಕು. ನಮ್ಮ ಮುಂದಿನ ದಿನಗಳು ಆಶಾದಾಯಕವಾಗಿ ಇರಲಿವೆ ಎನ್ನುವುದನ್ನು ನನ್ನ ಬಟ್ಟೆ ತೋರಿಸುತ್ತದೆ. ಗಾಂಧೀಜಿ ಸರಳವಾಗಿರುವುದು ಅಗತ್ಯ. ಅವರು ಮೇಲ್ವರ್ಗದಿಂದ ಬಂದವರು. ವರ್ಗ, ಜಾತಿಗಳ ಅಹಂಕಾರವನ್ನು ಕಳಚಬೇಕಾಗಿರುವುದರ ಪ್ರತೀಕವಾಗಿ ಗಾಂಧಿ ಹಾಗೆ ಇದ್ದಾರೆ' ಎಂದು ಅವರು ಮಾರ್ಮಿಕವಾಗಿ ಉತ್ತರ ನೀಡಿದ್ದರು.

ಉತ್ತಮ ಉಡುಪು ಸಾಮಾಜಿಕ ಪರಿವರ್ತನೆಗೆ ನೆರವಾಗುತ್ತದೆ. ದಲಿತರು ತಮ್ಮನ್ನು ತಾವೇ ಉನ್ನತೀಕರಿಸಿಕೊಳ್ಳಲು ಉತ್ತಮ ಉಡುಪು ಧರಿಸುವುದು ಅವಶ್ಯ ಎಂದು ಅಂಬೇಡ್ಕರ್ ಹೇಳುತ್ತಿದ್ದರು. ಅವರು ಧರಿಸುತ್ತಿದ್ದ ವಸ್ತ್ರ ಕೂಡ ಹೋರಾಟದ ಅಸ್ತ್ರವಾಗಿತ್ತು.

ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಬಲಿಷ್ಠರು, ಉಳ್ಳವರು, ಅಧಿಕಾರದಲ್ಲಿ ಇರುವವರು ದಲಿತರೊಂದಿಗೆ, ಬಡವರೊಂದಿಗೆ ಉದಾರವಾಗಿ ವರ್ತಿಸಬೇಕಾದ ಅಗತ್ಯವಿದೆ. ದನಿ ಇಲ್ಲದವರ ಪರವಾಗಿ ಯೋಚಿಸುವ, ಕಾಳಜಿ ತೋರುವ ಮಾತೃಪ್ರಜ್ಞೆ ಬೆಳೆಸಿಕೊಳ್ಳುವ ಅಗತ್ಯವೂ ಇದೆ. ಸಮಾಜದ ಹಿರಿಯರು, ಸಾಹಿತಿಗಳು, ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಜನಪ್ರತಿನಿಧಿಗಳು ತಾವೇ ಮುಂದಾಗಿ ಸ್ನೇಹ, ಸೌಜನ್ಯದಿಂದ ಅಸ್ಪೃಶ್ಯತೆಯ ಆಚರಣೆಗಳನ್ನು ತಡೆಯಲು ಸೂಚಿಸಬೇಕು. ಸದ್ದುಗದ್ದಲವಿಲ್ಲದೆ ನಿರಂತರವಾಗಿ ನಡೆಯುವ ಈ ಕ್ರಿಯೆ ಕ್ರಮೇಣ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ.

ಶ್ರೀರಂಗ ಅವರು ರಚಿಸಿದ 'ಹರಿಜನ್ವಾರ' ನಾಟಕದ ಒಂದು ಸನ್ನಿವೇಶ ನೆನಪಾಗುತ್ತಿದೆ. ಪರಿಶಿಷ್ಟ ಸಮುದಾಯಕ್ಕೆ ಸೇರಿದ ಮಗುವೊಂದು ಆಡುತ್ತಿದ್ದಾಗ, ಆಕಸ್ಮಿಕವಾಗಿ ಗಟಾರಕ್ಕೆ ಬಿದ್ದುಬಿಡುತ್ತದೆ. ಮಡಿ ಮೈಲಿಗೆಯನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದ, ಮೇಲ್ವರ್ಗಕ್ಕೆ ಸೇರಿದ ವೇಣಮ್ಮ ಎಂಬ ಮಹಿಳೆ ಆ ಮಗುವನ್ನು ಎತ್ತಿ ರಕ್ಷಿಸುತ್ತಾಳೆ. 'ಮಗುವಿನ ಆಕ್ರಂದನಕ್ಕೆ ನಾನು ಕರಗಿಹೋದೆ' ಎಂದು ಹೇಳುವ ವೇಣಮ್ಮನ ಧ್ವನಿ ಎಲ್ಲರ ಧ್ವನಿ ಆಗಬೇಕು.

ಗದಗ ಜಿಲ್ಲೆಯ ನಾಯಕನೂರು ಗ್ರಾಮದಲ್ಲಿ 2009ರಲ್ಲಿ ಅಲ್ಲಿಯ ದಲಿತರಿಗೆ ಸವರ್ಣೀಯರು ಸಾಮೂಹಿಕ ಬಹಿಷ್ಕಾರ ಹಾಕಿದ್ದರು. ಗದಗ ತೋಂಟದಾರ್ಯ ಮಠದ ಪೀಠಾಧಿಪತಿಯಾಗಿದ್ದ ಸಿದ್ಧಲಿಂಗ ಸ್ವಾಮೀಜಿ ಪಾದಯಾತ್ರೆಯ ಮೂಲಕ ನಾಯಕನೂರು ಗ್ರಾಮಕ್ಕೆ ತೆರಳಿ, ಶರಣರ ವಚನಗಳನ್ನು ಹೇಳಿ ಸವರ್ಣೀಯರ ಮನಃಪರಿವರ್ತನೆ ಮಾಡಿದ್ದರು. ತಾನು ಶ್ರೇಷ್ಠ ಕುಲದವನು ಎಂದು ಹೇಳಿಕೊಳ್ಳುವುದು ಮಾನವ ಕುಲಕ್ಕೆ ಮಾಡುವ ಅಪಮಾನ ಎಂಬ ಮಾತನ್ನು ಅವರು ಈ ಸಂದರ್ಭದಲ್ಲಿ ಹೇಳಿದ್ದರು.

ಮಾನವರೆಲ್ಲರೂ ಸಮಾನರು ಎಂಬುದನ್ನು ಸೂಚಿಸುವುದು ಮಾನವ ಹಕ್ಕುಗಳ ಮೂಲ ಉದ್ದೇಶವಾಗಿದೆ. ವಾಕ್ ಸ್ವಾತಂತ್ರ್ಯ, ಆಹಾರ ಪದ್ಧತಿ, ಸಾಮಾಜಿಕ ಭದ್ರತೆ, ಶಿಕ್ಷಣ, ಸಂಘಟನೆ, ರಾಷ್ಟ್ರೀಯತೆ, ರಕ್ಷಣೆ, ಆರೋಗ್ಯ, ಧಾರ್ಮಿಕ ಸ್ವಾತಂತ್ರ್ಯದ ಜೊತೆಗೆ ದೌರ್ಜನ್ಯ, ಶೋಷಣೆಯ ವಿರುದ್ಧ ಧ್ವನಿ ಎತ್ತುವ ಹಕ್ಕುಗಳು ಮಾನವ ಹಕ್ಕುಗಳ ವ್ಯಾಪ್ತಿಯಲ್ಲಿ ಬರುತ್ತವೆ. ಸಂವಿಧಾನದತ್ತವಾದ ಹಕ್ಕುಗಳು ಎಲ್ಲರಿಗೂ ಸಮಾನವಾಗಿ ಸಿಗುವಂತೆ ನೋಡಿಕೊಳ್ಳುವುದು ಸಾಮೂಹಿಕ ಹೊಣೆಗಾರಿಕೆ ಆಗಿದೆ ಎಂಬುದನ್ನು ಮರೆಯಬಾರದು.

ಹಳ್ಳಿಗಳಲ್ಲಿ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿರುತ್ತವೆ. ಬಹಳಷ್ಟು ಪ್ರಕರಣಗಳು ದಾಖಲಾಗುವುದೇ ಇಲ್ಲ. ಪ್ರತಿಭಟನೆಯ ಧ್ವನಿ ಕೇಳಿಬಂದರೆ ಹಣ ಕೊಟ್ಟು ಅಥವಾ ಹೆದರಿಸಿ ಬಾಯಿ ಮುಚ್ಚಿಸಲಾಗುತ್ತದೆ ಎಂಬ ಆರೋಪ ಇದೆ. ಇಂಥ ಪ್ರಕರಣಗಳನ್ನು ದಬ್ಬಾಳಿಕೆಯಿಂದ ಮುಚ್ಚಿಹಾಕುವುದಕ್ಕೆ ಬದಲಾಗಿ ಸೌಹಾರ್ದದಿಂದ ಪರಿಹರಿಸಬೇಕು. ಇದರ ಪರಿಣಾಮ ಶಾಶ್ವತವಾಗಿ ಉಳಿಯುತ್ತದೆ.



ಎಲ್ಲರಿಗೂ ಪ್ರವೇಶವಿಲ್ಲದ ಮಂದಿರಗಳಿಗೆ ಗಾಂಧೀಜಿ ಹೋಗುತ್ತಿರಲಿಲ್ಲ. ಅಂತರ್ಜಾತಿಯ ವಿವಾಹ ಸಮಾರಂಭಗಳಲ್ಲಿ ಮಾತ್ರ ಭಾಗವಹಿಸುತ್ತಿದ್ದರು. ಅವರು ದಂಡಿಯಾತ್ರೆಯ ಸಂದರ್ಭದಲ್ಲಿ ದಾರಿಯುದ್ದಕ್ಕೂ ಪರಿಶಿಷ್ಟರ ವಸತಿ ಪ್ರದೇಶಗಳಲ್ಲಿಯೇ ವಾಸ್ತವ್ಯ ಮಾಡಿದ್ದು ಒಂದು ದೊಡ್ಡ ಸಂದೇಶವಾಗಿತ್ತು.

ಸ್ಥಳೀಯ ಸಂಸ್ಥೆಗಳಿಗೆ ಸದಸ್ಯರಾಗಿ ಆಯ್ಕೆಯಾಗಿ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸದಸ್ಯರಿಗೆ ಅವರ ಹಕ್ಕುಗಳನ್ನು ಚಲಾಯಿಸುವುದಕ್ಕೆ ಬಹಳಷ್ಟು ಸಂದರ್ಭಗಳಲ್ಲಿ ಅವಕಾಶ ಕೊಡುವುದಿಲ್ಲ. ಅಲ್ಲಿಯ ಬಲಿಷ್ಠರು, ಉಳ್ಳವರು ಹೇಳಿದಂತೆ ಅವರು ನಡೆದುಕೊಳ್ಳುತ್ತಾರೆ. ದಲಿತ ಸದಸ್ಯರು ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಮುಂದಡಿ ಇಡಬೇಕು.

1960ರ ದಶಕದಲ್ಲಿ ಮಧ್ಯಪ್ರದೇಶದ ಗ್ವಾಲಿಯರ್ ಮತಕ್ಷೇತ್ರದ ಲೋಕಸಭಾ ಚುನಾವಣೆಯಲ್ಲಿ ರಾಜವಂಶಸ್ಥೆ ವಿಜಯರಾಜೇ ಸಿಂಧಿಯಾ ಅವರ ವಿರುದ್ಧ ಜಾಡಮಾಲಿ ಸಮುದಾಯಕ್ಕೆ ಸೇರಿದ ಮಹಿಳೆಯೊಬ್ಬರನ್ನು ರಾಮಮನೋಹರ್ ಲೋಹಿಯಾ ಸ್ಪರ್ಧೆಗೆ ನಿಲ್ಲಿಸಿದ್ದರು. 'ಪ್ರಜಾಪ್ರಭುತ್ವದಲ್ಲಿ ಮಹಾರಾಣಿ ಮತ್ತು ಜಾಡಮಾಲಿ ಸಮಾನ ಸ್ಥಾನಮಾನ ಉಳ್ಳವರು' ಎಂಬುದನ್ನು ತೋರಿಸುವುದು ಈ ಸ್ಪರ್ಧೆಯ ಉದ್ದೇಶ ಎಂದು ಲೋಹಿಯಾ ಹೇಳಿದ್ದರು.

ಸಂಘರ್ಷಕ್ಕಿಂತ ಸೌಹಾರ್ದದ ಮಾರ್ಗ ಹೆಚ್ಚು ಪರಿಣಾಮಕಾರಿಯಾದದ್ದು. ತಾರತಮ್ಯ ನಿವಾರಣೆಗೆ ಸೌಹಾರ್ದವು ದಿವ್ಯ ಔಷಧಿಯಾಗಬೇಕಾಗಿದೆ.

ವಾಚಕರ ವಾಣಿ

ಚುನಾವಣೆ ನಡೆಸದೆ ವಿಕೇಂದ್ರೀಕರಣದ ಮಾತೇಕೆ?

ಗ್ರಾಮ ಮಟ್ಟಕ್ಕೆ ಅಧಿಕಾರ ವಿಕೇಂದ್ರೀಕರಣ ಆಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಚೆಗೆ ಹೇಳಿರುವುದು ವರದಿಯಾಗಿದೆ. ಆದರೆ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಅಧಿಕಾರಾವಧಿ ಮುಗಿದು ಬಹಳ ಕಾಲವಾಯಿತು. ಆದರೂ ಚುನಾವಣೆ ನಡೆಸಲು ಸರ್ಕಾರ ಮುಂದಾಗಿಲ್ಲ. ಹೀಗೆ ಮಾಡಿದರೆ ಅಧಿಕಾರ ವಿಕೇಂದ್ರೀಕರಣ ಹೇಗೆ ಸಾಧ್ಯ ಎಂಬುದು ಮುಖ್ಯಮಂತ್ರಿಗೆ ನಮ್ಮ ಪ್ರಶ್ನೆ.

ಗುರು ಜಗಳೂರು, ಹರಿಹರ

ದ್ವಿಭಾಷಾ ನೀತಿಯಿಂದ ಮಕ್ಕಳಿಗೆ ವಂಚನೆ

ಸಂಸ್ಕೃತದ ಹೊಡೆತ ತಪ್ಪಿಸಿ ಮಾತೃಭಾಷೆಯನ್ನು ಬೆಳೆಸಬೇಕು ಎಂಬ ಅಭಿಪ್ರಾಯ ಹಂಪ ನಾಗರಾಜಯ್ಯ ಅವರ ಲೇಖನದಲ್ಲಿ (ಪ್ರ.ವಾ., ಮೇ 15) ವ್ಯಕ್ತವಾಗಿದೆ. ಮಾತೃಭಾಷೆ ಗಟ್ಟಿಯಾಗಿ ನಿಲ್ಲಬೇಕಾದರೆ ಸಂಸ್ಕೃತ ಜ್ಞಾನ ಅಗತ್ಯ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕುವೆಂಪು, ದ.ರಾ.ಬೇಂದ್ರೆ, ಡಿ.ವಿ.ಜಿ ಅಂತಹವರ ಸಂಸ್ಕೃತ ಜ್ಞಾನ ಆಳವಾಗಿತ್ತು.

ಇಂದಿನ ವಿಜ್ಞಾನ ಯುಗದಲ್ಲಿ ಭಾಷೆ ಹಾಗೂ ಮಾನವಿಕ ವಿಚಾರಗಳನ್ನು ಕಡೆಗಣಿಸುತ್ತಿರುವ ಕಾರಣದಿಂದ ಅನೇಕ ದುಷ್ಪರಿಣಾಮಗಳು ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಯುವಜನರಲ್ಲಿ ಭಾರತೀಯತೆಯ ಕುರಿತಾದ ಜ್ಞಾನ ಹಂತ ಹಂತವಾಗಿ ಕಡಿಮೆಯಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಭಾಷೆಯ ಕಡೆಗಣನೆ. ಇಂತಹ ಕಾಲದಲ್ಲಿ ದ್ವಿಭಾಷಾ ನೀತಿಯ ಜಾರಿ ಎಂಬುದು ತೂಕಡಿಸುತ್ತಿದ್ದವನನ್ನು ಹಾಸಿಗೆಗೆ ದೂಡಿದಂತೆ ಆಗುತ್ತದೆ. ಜ್ಞಾನದ ದೃಷ್ಟಿಯಿಂದ ನೋಡಿದರೆ, ನಾನಾ ಭಾಷೆಗಳು ಅನ್ಯೋನ್ಯ ಸಹಾಯಕಗಳಾಗಿರುತ್ತವೆ. ಪ್ರತಿಯೊಬ್ಬರೂ ಆದಷ್ಟೂ ಹೆಚ್ಚು ಭಾಷೆಗಳನ್ನು ಕಲಿಯುವುದು ಶ್ರೇಯಸ್ಕರ ಎಂಬ ಮಾತಿದೆ. ಬೆರಳೆಣಿಕೆಯ ಕೆಲವರು ಭಾಷೆಯನ್ನು ಸ್ವಸಾಮರ್ಥ್ಯದಿಂದ ಕಲಿಯಬಹುದು. ಆದರೆ ಅನೇಕರಿಗೆ ಶಾಲೆಯ ಕಲಿಕೆ ಅನಿವಾರ್ಯ. ಯಾವುದೇ ಭಾಷೆಯ ಕಲಿಕೆಯಲ್ಲಿ ಆರಂಭಿಕ ಆಸಕ್ತಿಯನ್ನು ಹುಟ್ಟಿಸಲು ಶಾಲಾ ಶಿಕ್ಷಣ ಸಹಕಾರಿಯಾಗುತ್ತದೆ. ಹೀಗಿರುವಾಗ ದ್ವಿಭಾಷಾ ನೀತಿಯನ್ನು ಜಾರಿಗೆ ತರುವುದು ನಮ್ಮ ಮಕ್ಕಳಿಗೆ ಮಾಡುವ ವಂಚನೆ.

ಸೂರ್ಯ ಹೆಬ್ಬಾರ, ಅಂಡಿಂಜೆ, ಬೆಳ್ತಂಗಡಿ

ಬೈ–ಲಾ ತಿದ್ದುಪಡಿ ಪ್ರಶ್ನಾತೀತವೇ?

'ಕನ್ನಡ ಸಾಹಿತ್ಯ ಪರಿಷತ್ತಿನ ವಿಚಾರದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ನೀಡುವುದಿಲ್ಲ' ಎಂಬ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಹೇಳಿಕೆ (ಪ್ರ.ವಾ., ಮೇ 16) ಸ್ವಾಗತಾರ್ಹ. ಆದರೆ, ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಯಲ್ಲಿ ಸ್ವತಃ ಜೋಶಿಯವರೇ ರಾಜಕೀಯ ಪಕ್ಷದ ಕಚೇರಿಗೆ ತೆರಳಿ ಪ್ರಚಾರ ಮಾಡಿದ್ದಕ್ಕೆ ಮತ್ತು ಮೊದಲ ಬಾರಿಗೆ ರಾಜಕೀಯ ಪಕ್ಷವೊಂದರ ಕಾರ್ಯಕರ್ತರೇ ಬಹಿರಂಗವಾಗಿ ಜೋಶಿ ಅವರ ಪರ ಪ್ರಚಾರ ನಡೆಸಿದ್ದಕ್ಕೆ ಏನನ್ನಬೇಕು? ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಪರಿಷತ್ತಿನ ವಿಶೇಷ ಆಹ್ವಾನಿತರಿಗೆ ಇಲ್ಲದ ಸವಲತ್ತನ್ನು ರಾಜಕೀಯ ಪಕ್ಷವೊಂದರ ಜತೆ ನಂಟು ಹೊಂದಿರುವ ಸಂಘದ ಕಾರ್ಯಕರ್ತರಿಗೆ ಕಲ್ಪಿಸಿಕೊಟ್ಟಿದ್ದರೆಂಬ ಆರೋಪಕ್ಕೆ ಅವರು ಏನು ಹೇಳುತ್ತಾರೆ? ರಾಜಕೀಯ ಹಸ್ತಕ್ಷೇಪ ಬೇಡ ಎನ್ನುವ ಅವರು ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸಚಿವ ದರ್ಜೆಯ ಸ್ಥಾನಮಾನ ಪಡೆಯಲು ಪ್ರಯತ್ನಿಸಿದ್ದೇಕೆ?

ಭಿನ್ನಾಭಿಪ್ರಾಯಗಳಿದ್ದರೆ ಚರ್ಚೆಗೆ ಅವಕಾಶ ನೀಡುವುದಾಗಿ ಈಗ ಹೇಳುವ ಅವರು, ಎಂದಾದರೂ ಕಾರ್ಯಕಾರಿ ಸಮಿತಿಯಲ್ಲಾಗಲಿ, ಸರ್ವ ಸದಸ್ಯರ ಸಭೆಯಲ್ಲಾಗಲಿ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶ ಕಲ್ಪಿಸಿದ್ದಾರೆಯೇ? ತಮ್ಮಿಚ್ಛೆಯ ಅನುಸಾರ ಅವರು ಬೈ–ಲಾಗೆ ತಿದ್ದುಪಡಿ ತಂದಿದ್ದಾರೆ ಎಂಬ ಟೀಕೆಗಳು ವ್ಯಕ್ತವಾಗಿವೆ. ಆದರೆ ನಿವೃತ್ತ ನ್ಯಾಯಮೂರ್ತಿಯವರ ಅಧ್ಯಕ್ಷತೆಯ ತಿದ್ದುಪಡಿ ಸಲಹಾ ಉಪಸಮಿತಿಯ ಶಿಫಾರಸಿನ ಅನುಸಾರ ಬೈ–ಲಾಗೆ ತಿದ್ದುಪಡಿ ತಂದಿದ್ದಾಗಿ ಜೋಶಿ ಹೇಳುತ್ತಾರೆ. ಒಂದುವೇಳೆ ನಿವೃತ್ತ ನ್ಯಾಯಮೂರ್ತಿಯವರ ಸಲಹೆಯ ಅನುಸಾರವೇ ತಿದ್ದುಪಡಿ ತಂದಿದ್ದರೂ ಅಂತಹ ಬೈ–ಲಾ ಪ್ರಶ್ನಾತೀತವೇ?

ಹಂ.ಗು.ರಾಜೇಶ್, ಬೆಂಗಳೂರು

ಸ್ವದೇಶಿ ಚಳವಳಿ ಪುನರುಜ್ಜೀವನಕ್ಕೆ ಸಕಾಲ

ಆ್ಯಪಲ್ ಐಫೋನ್ ಭಾರತದಲ್ಲಿ ತಯಾರಾಗಿ ಅಮೆರಿಕಕ್ಕೆ ದಾಖಲೆ ಮಟ್ಟದಲ್ಲಿ ರಫ್ತಾಗಿದ್ದ ವಿಷಯ ಭಾರತೀಯರಿಗೆ ಅತ್ಯಂತ ಅಭಿಮಾನದ ಸುದ್ದಿ. ಆದರೆ ಭಾರತದಲ್ಲಿ ಐಫೋನ್ ತಯಾರಿಸದೆ ಅಮೆರಿಕದಲ್ಲಿ ತಯಾರಿಸಲು ಆ್ಯಪಲ್ ಸಂಸ್ಥೆಯ ಮುಖ್ಯಸ್ಥರಿಗೆ ಮನವಿ ಮಾಡಿರುವುದಾಗಿ ಹೇಳಿರುವ ಟ್ರಂಪ್ ಅವರ ಹೇಳಿಕೆ ನಿಜಕ್ಕೂ ಕಳವಳಕಾರಿ. ಪ್ರತಿಷ್ಠಿತ ಕಂಪನಿಗಳು ಭಾರತದಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಲು ಮುಂದಾಗಿರುವಾಗ, ಇವುಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೆಲಸ ಮಾಡುತ್ತಿರುವ ಲಕ್ಷಾಂತರ ಉದ್ಯೋಗಿಗಳಿಗೆ ಈ ಸುದ್ದಿ ದುಃಸ್ವಪ್ನವಾಗುವುದು ಸಹಜ. ನಮ್ಮ ದೇಶದಲ್ಲಿ ತಯಾರಾದ ಉತ್ಪನ್ನಗಳನ್ನು ಮಾತ್ರವೇ ಉಪಯೋಗಿಸುವ ಪಣವನ್ನು ಭಾರತೀಯರು ತೊಡಬೇಕು. ಆಗ ಮಾತ್ರ ಈ ವಿಧದ ಆಕ್ರಮಣಕಾರಿ ತಂತ್ರಗಳನ್ನು ನಿಯಂತ್ರಣದಲ್ಲಿಟ್ಟು ಮೇಕ್ ಇನ್ ಇಂಡಿಯಾ ಕನಸನ್ನು ನನಸಾಗಿಸಲು ಸಾಧ್ಯ.

ಮಾಹಿತಿ ತಂತ್ರಜ್ಞಾನ, ಅಂತರಿಕ್ಷ ಸಂಶೋಧನೆ, ಆಹಾರ ಉತ್ಪಾದನೆ, ಔಷಧ ಕ್ಷೇತ್ರಗಳಲ್ಲಿ ಭಾರತ ಸ್ವಾವಲಂಬನೆ ಸಾಧಿಸುತ್ತಿದೆ. ಐಫೋನಿಗೂ ಮೀರಿದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಹುಮ್ಮಸ್ಸು ದೇಶಕ್ಕಿದೆ. ಸ್ವದೇಶಿ ಉತ್ಪನ್ನಗಳು, ಸ್ವದೇಶಿ ಪ್ರವಾಸಿ ತಾಣಗಳು, ದೇಶದ ನಾಗರಿಕ ಸುರಕ್ಷಾ ತರಬೇತಿಯ ವಿಷಯದಲ್ಲಿ ಹೆಚ್ಚೆಚ್ಚು ಜನರಲ್ಲಿ ಆಸಕ್ತಿ ಮೂಡಿಸಿ ಸ್ವದೇಶಿ ಚಳವಳಿಯನ್ನು ಇನ್ನೊಮ್ಮೆ ಪುನರುಜ್ಜೀವನಗೊಳಿಸುವುದಕ್ಕೆ ಇದೊಂದು ಸುಸಂದರ್ಭ.

ಮಂಜುನಾಥ ಶೇಟ, ಶಿರಸಿ

ವಿಕೃತಿ ಮೆರೆದವರಿಗೆ ಕಠಿಣ ಶಿಕ್ಷೆಯಾಗಲಿ

ರಾಮನಗರ ಜಿಲ್ಲೆಯ ಭದ್ರಾಪುರದಲ್ಲಿ ಮಾತು ಬಾರದ, ಕಿವಿ ಕೇಳದ ಹದಿನಾಲ್ಕು ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಬಳಿಕ ಚಿತ್ರಹಿಂಸೆ ನೀಡಿ ಕ್ರೂರವಾಗಿ ಹತ್ಯೆ ಮಾಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ. ಇದು ನಿಜಕ್ಕೂ ನಾಗರಿಕ ಸಮಾಜ ತಲೆತಗ್ಗಿಸುವಂತಹ ವಿಷಯ. ಇಂತಹ ಅಮಾನವೀಯ ಕೃತ್ಯಗಳು ಒಂದರ ಮೇಲೊಂದು ನಡೆಯುತ್ತಲೇ ಇರುವುದು ಕಳವಳದ ಸಂಗತಿ. ಆ ಪುಟ್ಟ ಬಾಲಕಿಯ ಮೇಲೆ ಅತ್ಯಾಚಾರವೆಸಗಿ ವಿಕೃತಿ ಮೆರೆದಿರುವ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ನಮ್ಮ ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳಬೇಕು. ಆ ಮಗುವಿನ ಕುಟುಂಬಕ್ಕೆ ನ್ಯಾಯ ಒದಗಿಸಬೇಕು.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ, ಚಾಮರಾಜನಗರ

ಎಸ್‌ಎಸ್‌ಎಲ್‌ಸಿ: ಕನ್ನಡ ಮಾಧ್ಯಮ ಮತ್ತು ಕನ್ನಡ ಭಾಷಾ ವಿಷಯದಲ್ಲಿ ಹೆಚ್ಚು ಮಕ್ಕಳು ಅನುತ್ತೀರ್ಣ ಕುರಿತು ಎರಡು ಅಭಿಪ್ರಾಯಗಳು

ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಕುಸಿತಕ್ಕೆ ವಾಸ್ತವ ಕಾರಣಗಳೇನು?

• ಶ್ರೀದೇವಿ ಕೆರೆಮನೆ

ಹತ್ತನೇ ತರಗತಿಯ ಫಲಿತಾಂಶ ಪ್ರಕಟವಾದಾಗಿನಿಂದ ಫಲಿತಾಂಶ ವಿಶ್ಲೇಷಣೆ ಅತಿಯಾಗಿ ಸದ್ದು ಮಾಡುತ್ತಿದೆ. ಸರ್ಕಾರಿ ಶಾಲೆಗಳ ಫಲಿತಾಂಶದಲ್ಲಿ ಕುಸಿತವಾಗಿದೆ ಎಂಬುದು ಒಂದು ಅಂಶವಾದರೆ, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಅನುತ್ತೀರ್ಣ ಪ್ರಮಾಣ ಹೆಚ್ಚಾಗಿರುವುದು ಇನ್ನೊಂದು ಅಂಶ. ಇದರ ಜೊತೆಗೆ ಕನ್ನಡ ಭಾಷೆಯಲ್ಲಿ ವಿದ್ಯಾರ್ಥಿಗಳ ಅಂಕ ಗಳಿಕೆ ಹಾಗೂ ಉತ್ತೀರ್ಣ ಪ್ರಮಾಣ ಕಡಿಮೆಯಾಗಿರುವುದು ಮೂರನೆಯ ಅಂಶ. ಹಾಗೆ ನೋಡಿದರೆ, ಹಿಂದಿಯನ್ನು ಹೊರತುಪಡಿಸಿ ಇಂಗ್ಲಿಷ್ ಭಾಷೆಯಾದಿಯಾಗಿ ಉಳಿದೆಲ್ಲ ವಿಷಯಗಳ ತೇರ್ಗಡೆಯ ಶೇಕಡವಾರು ಫಲಿತಾಂಶ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂಬುದು ನಿಜಕ್ಕೂ ಕಳವಳ ಹುಟ್ಟಿಸುವ ಅಂಶವಾಗಿದೆ. ಸರ್ಕಾರಿ ಶಾಲೆಯ ಇಂಗ್ಲಿಷ್ ಭಾಷಾ ಶಿಕ್ಷಕಿಯಾಗಿ ಇದು ವೈಯಕ್ತಿಕವಾಗಿ ನನಗೆ ದಿಗಿಲು ಹುಟ್ಟಿಸಿದೆ.

ಈ ವರ್ಷ ಶೇ 100 ಫಲಿತಾಂಶ ಕಂಡ ಕೆಲವೇ ಕೆಲವು ಸರ್ಕಾರಿ ಶಾಲೆಗಳಲ್ಲಿ ನಮ್ಮದೂ ಒಂದು. ಆದರೆ ಆ ಫಲಿತಾಂಶದ ಹಾದಿ ಅಷ್ಟು ಸುಲಭವಾದುದಲ್ಲ. ಕೆಲವು ಉದಾಹರಣೆಗಳನ್ನು ಹೇಳಿದರೆ ಸರ್ಕಾರಿ ಹಾಗೂ ಕನ್ನಡ ಮಾಧ್ಯಮದ ಶಾಲೆಗಳು ಫಲಿತಾಂಶದಲ್ಲಿ ಕುಸಿತ ಕಾಣಲು ಕಾರಣವೇನು ಎಂಬುದು ಮನವರಿಕೆಯಾಗಬಹುದು.

ಮಾರ್ಚ್ ಮಧ್ಯದಲ್ಲಿ ನಾವು ಶಿಕ್ಷಕರು ಮನೆ ಭೇಟಿಗೆ ಹೊರಡುತ್ತೇವೆ. ಒಂದು ರೀತಿಯಲ್ಲಿ ಇದು ಮಕ್ಕಳ ಬೇಟೆಯೂ ಹೌದು. ಸರ್ಕಾರಿ ಶಾಲೆಯ ಶಿಕ್ಷಕರಷ್ಟೇ ಅಲ್ಲ; ನಮ್ಮ ಸುತ್ತಲಿನ ಸುಮಾರು ನಾಲ್ಕೈದು ಕಿ.ಮೀ ವ್ಯಾಪ್ತಿಯಲ್ಲಿ ಬರುವ ಐದು ಕನ್ನಡ ಮಾಧ್ಯಮ ಶಾಲೆಗಳ ಶಿಕ್ಷಕರೂ ಈ ಕೆಲಸದಲ್ಲಿ ನಿರತರಾಗುತ್ತಾರೆ. ಮಕ್ಕಳು ಕಡಿಮೆ ಇರುವ ಪ್ರದೇಶವಾದ್ದರಿಂದ ಶಾಲೆಯ ಅಸ್ತಿತ್ವ ಉಳಿಸಿಕೊಳ್ಳಲು ಇದು ಅನಿವಾರ್ಯ. ನಮ್ಮ ಶಾಲೆಗೆ ಬಂದ ಹುಡುಗಿಯ ತಮ್ಮನನ್ನು ನಮ್ಮ ಶಾಲೆಗೆ ಕಳುಹಿಸಿಕೊಡಲು ಹೇಳಿದರೆ, 'ಗಂಡು ಮಗಾ ಅಲ್ಲಾ? ಗನಾತ್ನಾಗಿ ಓದಿ ನೌಕರಿ ಹಿಡೀಲಿ ಅಂದ್ಕುಂಡು ಇಂಗ್ಲಿಷ್ ಮೀಡಿಯಂಗೆ ಹಾಕ್ದೆ. ಮೀನ್ ಹಿಡಿಯೂ ಕೆಲ್ಸಾ ನಮ್ಗೇ ಸಾಕ್' ಎಂದರು ತಂದೆ. ನಾವು ಮರುಮಾತನಾಡುವಂತಿರಲಿಲ್ಲ. ಮಗನ ವಿದ್ಯಾಭ್ಯಾಸಕ್ಕೆ ಬೇಕಷ್ಟು ಹಣ ಸುರಿಯುವ ಪಾಲಕರು ಇಂದಿಗೂ ಮಗಳ ವಿದ್ಯಾಭ್ಯಾಸ ಅಷ್ಟೊಂದು ಮುಖ್ಯ ಎಂದು ಭಾವಿಸುವುದಿಲ್ಲ. ಬುದ್ಧಿವಂತ ಹುಡುಗಿಯರಾದರೂ ಪರೀಕ್ಷಾ ಸಮಯದಲ್ಲೂ ಮನೆಗೆಲಸ ತಪ್ಪಿದ್ದಲ್ಲ. ಹೀಗಾಗಿ ಅಂಕಗಳಿಕೆ ಕಷ್ಟ.

> ಸರ್ಕಾರಿ ಶಾಲೆಗಳಿಗೆ ಯಾವುದೇ ವಿದ್ಯಾರ್ಥಿ ಬಂದರೂ ದಾಖಲಾತಿ ತಿರಸ್ಕರಿಸುವಂತಿಲ್ಲ. ಶಿಕ್ಷಣ ಮಗುವಿನ ಹಕ್ಕು ಎಂದು ಪರಿಗಣಿಸಲ್ಪಟ್ಟಿದೆ. ಖಾಸಗಿ ಶಾಲೆಗಳು ಶೇ 95ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಕ್ಕಳನ್ನಷ್ಟೇ ದಾಖಲು ಮಾಡಿಕೊಳ್ಳುತ್ತವೆ. 9ನೇ ತರಗತಿಯಲ್ಲಿ ಶೇ 85ಕ್ಕಿಂತ ಕಡಿಮೆ ಪಡೆದ ಮಕ್ಕಳನ್ನು ಟಿ.ಸಿ. ಕೊಟ್ಟು ಕಳಿಸಲಾಗುತ್ತದೆ. ಅಲ್ಲಿಂದ ಹೊರಗೆ ಬಿದ್ದ ಮಕ್ಕಳಲ್ಲಿ ಶೇ 70ಕ್ಕೂ ಹೆಚ್ಚಿನ ಅಂಕ ಪಡೆದವರು ಅನುದಾನಿತ ಶಾಲೆಗಳಲ್ಲಿ ದಾಖಲಾದರೆ, ಕಡಿಮೆ ಅಂಕ ಗಳಿಸಿದವರು ಸರ್ಕಾರಿ ಶಾಲೆಗಳಿಗೆ ಸೇರುತ್ತಾರೆ

'ದೊಡ್ಡವಳು ಇವಳಿಗಿಂತ ಜಾಣೆ. ಅದಕ್ಕೇ ಅವಳನ್ನು ಸಿಬಿಎಸ್‌ಇಗೆ ಹಾಕಿದ್ವಿ. ಇವಳು ಅವಳಷ್ಟು ಜಾಣೆ ಅಲ್ಲ. ಹೀಗಾಗಿ ಇಲ್ಲಿ ಎಡ್ಮಿಷನ್ ಮಾಡುತ್ತಿದ್ದೇವೆ...' ತಾಯಿಯೊಬ್ಬಳು ಜೂನ್‌ನಲ್ಲಿ ಮಗಳ ದಾಖಲಾತಿಗಾಗಿ ಬಂದಾಗ ಹೇಳಿದ ಮಾತಿದು. ಜಾಣ ವಿದ್ಯಾರ್ಥಿಯಾಗಿದ್ದರೆ, ಅದು ಹೆಣ್ಣಿರಲಿ ಗಂಡಿರಲಿ ಅವರು ಇಂಗ್ಲಿಷ್ ಮಾಧ್ಯಮಕ್ಕೋ ಸೆಂಟ್ರಲ್/ ಇಂಟರ್‌ನ್ಯಾಷನಲ್ ಸಿಲಬಸ್ ಇರುವ ಶಾಲೆಗಳಿಗೋ ಹಾಕಿದರೆ ಓದಲು ಅಷ್ಟೇನೂ ಬುದ್ಧಿವಂತನಲ್ಲದ ಮಗು ಸರ್ಕಾರಿ ಶಾಲೆಗೆ ಎಂಬುದು ಹಿಂದಿನಿಂದಲೂ ನಡೆದು ಬಂದ ರೂಢಿ. ಇನ್ನು, ರಾಜ್ಯದ ಇತರೆಡೆಗೆ ಇಲ್ಲದ ಸಮಸ್ಯೆಯೊಂದು ನಮ್ಮ ಶಾಲೆಯ ಸುತ್ತಮುತ್ತಲಿದೆ. ಗೋವಾದ ಖಾಸಗಿ ಶಾಲೆಯ ವಾಹನವೊಂದು ಪ್ರತಿನಿತ್ಯ ಮಕ್ಕಳನ್ನು ಕರೆದೊಯ್ಯಲು ಬರುತ್ತದೆ. ಪಾಲಕರ ಬಳಿ ವಿಚಾರಿಸಿದಾಗ 'ಅಲ್ಲಿದು ಶಾಲೆಗೆ ಹಾಕಿದ್ರೆ, ಗೋವಾದಲ್ಲಿ ಐಟಿಐ, ಡಿಪ್ಲೊಮಾ ಕಾಲೇಜಿಗೆ ಬೇಗ ಸೀಟ್ ಸಿಗ್ತದೆ. ಅಲ್ಲೇ ಮಾಡಿದ್ರೆ ಗೋವಾದಲ್ಲಿ ಬೇಗ ನೌಕರಿ ಸಿಗ್ತದೆ' ಎನ್ನುತ್ತಾರೆ.

ಮೇಲೆ ಹೇಳಿದ ಉದಾಹರಣೆಗಳು ಕೇವಲ ಸರ್ಕಾರಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಸ್ಯಾಂಪಲ್ ಅಷ್ಟೆ. ಹಾಗೆ ನೋಡಿದರೆ, ಸರ್ಕಾರಿ ಶಾಲೆಗಳು ಉಳಿದೆಲ್ಲ ಶಾಲೆಗಳಿಗಿಂತ ತಾಂತ್ರಿಕವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರಿದಿರುತ್ತವೆ. ನಮ್ಮ ಸುತ್ತಲಿನ ಯಾವ ಖಾಸಗಿ ಶಾಲೆಗಳೂ ಅಳವಡಿಸಿಕೊಳ್ಳದ ಸ್ಮಾರ್ಟ್‌ಕ್ಲಾಸ್‌ಗಳು ನಮ್ಮ ಸರ್ಕಾರಿ ಶಾಲೆಗಳಲ್ಲಿವೆ. ಸರ್ಕಾರಿ ಶಾಲೆಗಳ ಶಿಕ್ಷಕರು ಟಿಇಟಿ, ಸಿಇಟಿ ಪರೀಕ್ಷೆ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಆಯ್ಕೆಯಾದವರು. ಆದರೂ ಶೈಕ್ಷಣಿಕ ಪ್ರಗತಿ ಹಾಗೂ ಫಲಿತಾಂಶ ಯಾಕೆ ಕುಂಠಿತಗೊಳ್ಳುತ್ತಿದೆಯೆಂದು ಕೂಲಂಕಷವಾಗಿ ಅಧ್ಯಯನ ನಡೆಸಿದಾಗ ಇಂತಹ ಅದೆಷ್ಟೋ ಕಾರಣಗಳು ದೊರೆಯುತ್ತವೆ. ಹಾಗಾದರೆ, ಕನ್ನಡ ಮಾಧ್ಯಮಗಳಲ್ಲಿ ಓದಿದ ವಿದ್ಯಾರ್ಥಿಗಳಿಗೆ ಭವಿಷ್ಯವೇ ಇಲ್ಲವೇ? ಕನ್ನಡ ಮಾಧ್ಯಮದ ಶಾಲೆಗಳು ಯಾಕೆ ಶೈಕ್ಷಣಿಕ ಪ್ರಗತಿ ಕಾಣುತ್ತಿಲ್ಲವೆಂದು ಪ್ರಶ್ನೆ ಹಾಕಿಕೊಂಡರೆ ಇದಕ್ಕಿರುವ ಹಲವಾರು ಆಯಾಮಗಳು ಗೋಚರಿಸುತ್ತವೆ.

ಸರ್ಕಾರಿ ಶಾಲೆಗಳಿಗೆ ಯಾವುದೇ ವಿದ್ಯಾರ್ಥಿ ಬಂದರೂ ದಾಖಲಾತಿಯನ್ನು ತಿರಸ್ಕರಿಸುವಂತಿಲ್ಲ. ಶಿಕ್ಷಣ ಮಗುವಿನ ಹಕ್ಕು ಎಂದು ಪರಿಗಣಿಸಲ್ಪಟ್ಟಿದೆ. ಅನುದಾನ ರಹಿತ (ಖಾಸಗಿ) ಶಾಲೆಗಳು ಶೇ 95ಕ್ಕಿಂತ ಮೇಲೆ ಬಂದ ಮಕ್ಕಳನ್ನಷ್ಟೇ ತಮ್ಮ ಶಾಲೆಗಾಗಿ ಆಯ್ಕೆ ಮಾಡಿಕೊಳ್ಳುತ್ತವೆ. ಒಂಬತ್ತನೇ ತರಗತಿಯಲ್ಲಿ ಶೇ 85ಕ್ಕಿಂತ ಕಡಿಮೆ ಅಂಕ ಪಡೆದ ಮಕ್ಕಳನ್ನು ಯಾವ ಮುಲಾಜಿಗೂ ಒಳಗಾಗದೆ ಟಿ.ಸಿ ಕೊಟ್ಟು ಕಳಿಸಲಾಗುತ್ತದೆ. ಅಲ್ಲಿಂದ ಹೊರಗೆ ಬಿದ್ದ ಮಕ್ಕಳಲ್ಲಿ ಶೇ 70ಕ್ಕೂ ಹೆಚ್ಚಿನ ಅಂಕ ಪಡೆದವರು ಸಮೀಪದ ಅನುದಾನಿತ ಶಾಲೆಗಳಲ್ಲಿ ದಾಖಲಾತಿ ಮಾಡಿಕೊಂಡರೆ ಶೇ 50ಕ್ಕೂ ಹೆಚ್ಚಿನ ಅಂಕ ಗಳಿಸಬಹುದಾದ ವಿದ್ಯಾರ್ಥಿಗಳು ಅನುದಾನಿತ ಕನ್ನಡ ಮಾಧ್ಯಮ ಶಾಲೆಗಳಿಗೆ ದಾಖಲಾಗುತ್ತಾರೆ. ನಂತರ ಉಳಿದ ಅನುತ್ತೀರ್ಣಗೊಳ್ಳಬಹುದಾದ ಅಥವಾ ಕಡಿಮೆ ಅಂಕ ಗಳಿಸುವ ಮಕ್ಕಳು ಸರ್ಕಾರಿ ಶಾಲೆಗಳತ್ತ ಮುಖ ಮಾಡುತ್ತಾರೆ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ ಮಗುವಿಗೆ ಸರ್ಕಾರಿ ಶಾಲೆಯ ಕಡ್ಡಾಯ ಹಾಜರಾತಿ ಹಾಗೂ ವೈಯಕ್ತಿಕ ಗಮನ ಕೂಡ ಕಿರಿಕಿರಿ ಎನ್ನಿಸುತ್ತದೆ ಎಂದು ಇತ್ತೀಚೆಗೆ ಪದೇ ಪದೇ ಶಾಲೆ ತಪ್ಪಿಸುವ ಹುಡುಗನೊಬ್ಬ ಹೇಳುತ್ತಿದ್ದ. ಒಮ್ಮೆಲೇ ಇಷ್ಟು ವರ್ಷ ತಾನು ಓದಿದ್ದ ಶಾಲೆಯನ್ನು ಬಿಟ್ಟು ಕೊನೆಯ ವರ್ಷಕ್ಕೆ ಬೇರೆ ಶಾಲೆಗೆ ಬಂದ ಮಗುವಿನ ಮಾನಸಿಕ ಸ್ಥಿತಿ ಕೂಡ ಸೂಕ್ಷ್ಮವಾಗಿರುತ್ತದೆ. ಹೊಸ ಶಾಲೆಯ ವಾತಾವರಣಕ್ಕೆ ಹೊಂದಿಕೊಳ್ಳಲಾಗದಿರುವುದು, ಮಾಧ್ಯಮದಲ್ಲಿ ಆದ ಬದಲಾವಣೆ ಮಗುವಿಗೆ ತೀರಾ ಹಿನ್ನಡೆಯನ್ನು ಉಂಟುಮಾಡುತ್ತವೆ ಎಂಬುದನ್ನು ಗಮನಿಸಬೇಕಾಗಿದೆ. ಪ್ರಾಥಮಿಕ ಹಂತದಲ್ಲಿ ಒಂದು ಶಾಲೆಯಲ್ಲಿದ್ದು ಎಂಟು ಹಾಗೂ ಒಂಬತ್ತನೆ ತರಗತಿಗೆ ವರ್ಗಾವಣೆ ಪತ್ರವನ್ನು ನೀಡಿ ಕೈತೊಳೆದುಕೊಳ್ಳುವ ಖಾಸಗಿ ಶಾಲೆಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡರೆ ಮಕ್ಕಳ ಮಾನಸಿಕ ಚಂಚಲತೆ ಕಡಿಮೆಯಾಗಬಹುದು. ಹೀಗೆ ಶಾಲೆಗೆ ಹೊಂದಿಕೊಳ್ಳಲಾಗದೆ ಪದೇ ಪದೇ ಶಾಲೆ ತಪ್ಪಿಸುವ ಮಗುವಿನಿಂದ ಯಾವ ಫಲಿತಾಂಶ ನಿರೀಕ್ಷಿಸಲು ಸಾಧ್ಯ?

ಹಳ್ಳಿಗಳಲ್ಲಿರುವ ಕನ್ನಡ ಮಾಧ್ಯಮದ ಅನುದಾನಿತ ಶಾಲೆಗಳಂತೂ ಅಡಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡ ಅಡಿಕೆಯ ಚೂರಂತಾಗಿವೆ. ಎಂಟನೇ ತರಗತಿಗೆ ಕಡ್ಡಾಯವಾಗಿ 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಬೇಕು. ಇಲ್ಲವೆಂದಾದಲ್ಲಿ ಶಿಕ್ಷಕರ ಸಂಬಳವನ್ನು ನಿಲ್ಲಿಸುವುದಾಗಿ ಇಲಾಖೆ ತಿಳಿಸಿದೆ. ಪ್ರತಿವರ್ಷ ಮಾನ್ಯತೆ ನವೀಕರಣ ಮಾಡುವಾಗ ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಮೇಲಧಿಕಾರಿಗಳಿಗೆ ಸಾವಿರದ ಲೆಕ್ಕದಲ್ಲಲ್ಲ ಲಕ್ಷಗಳ ಲೆಕ್ಕದಲ್ಲಿ ಸಂತೃಪ್ತಿಪಡಿಸಬೇಕಾದ ಅನಿವಾರ್ಯ ಇರುತ್ತದೆ. ಈಗಂತೂ ಒಂದು ಚಿಕ್ಕ ಪಟ್ಟಣ ಎನ್ನಿಸಿಕೊಳ್ಳಬಹುದಾದ ಊರಲ್ಲೂ ಒಂದೆರಡು ಕಿ.ಮೀ ವ್ಯಾಪ್ತಿಯಲ್ಲಿ ನಾಲ್ಕಾರು ಇಂಗ್ಲಿಷ್ ಮಾಧ್ಯಮದ ಶಾಲೆಗಳಿದ್ದು, ಸುತ್ತಲಿನ ಮಕ್ಕಳು ಸಮೀಪದ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಹೋಗುವುದರಿಂದ ಕನ್ನಡ ಮಾಧ್ಯಮ ಶಾಲೆಗಳು ದೂರದ ಊರುಗಳಿಂದ ಮಕ್ಕಳನ್ನು ಕರೆತರುವ ಅಥವಾ ಅಂಗವಿಕಲ ಮಕ್ಕಳನ್ನು ದಾಖಲಿಸಿಕೊಳ್ಳುವ ಇಲ್ಲವೇ ಖಾಸಗಿಯಾಗಿ ಶಿಕ್ಷಕರೇ ಹಣ ನೀಡಿ ಹಾಸ್ಟೆಲ್ ನಡೆಸುವ ಅನಿವಾರ್ಯದಲ್ಲಿ ಸಿಲುಕಿದ್ದಾರೆ. ದೂರದ ಊರುಗಳಿಂದ ಬರುವ ಮಕ್ಕಳು ಪದೇ ಪದೇ ಗೈರಾಗುವುದರಿಂದ ಫಲಿತಾಂಶ ಇಳಿಮುಖವಾಗುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ನಮ್ಮಂತಹ ಗಡಿಭಾಗದ ಶಾಲೆಗಳಿರುವ ಊರುಗಳಲ್ಲಿ ಕನ್ನಡವು ಸಂವಹನ ಭಾಷೆಯೂ ಆಗಿರುವುದಿಲ್ಲ. ಹೀಗಾಗಿ ಕನ್ನಡದಲ್ಲಿ ವಾಕ್ಯ ರಚನೆ ಹಾಗೂ ವಿಷಯದ ವಿವರಣೆ ಮಕ್ಕಳಿಗೆ ಕಷ್ಟ. ಇಂತಹ ಕೆಲವು ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾದಿಯಾಗಿ ಹೆಚ್ಚಿನ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ಅಲ್ಲಿಯ ಸ್ಥಳೀಯ ಭಾಷೆಯಲ್ಲಿಯೇ ವ್ಯವಹರಿಸುವುದರಿಂದ ಮಕ್ಕಳಿಗೆ ಕನ್ನಡದ ಕಲಿಕೆ ಕಬ್ಬಿಣದ ಕಡಲೆಯಾಗಿ ಪರಿಣಮಿಸಿಬಿಡುತ್ತದೆ. ಹೀಗಾಗಿ ಕನ್ನಡ ಮಾಧ್ಯಮದ ಮಕ್ಕಳಿಗೆ ವಿಷಯದ ಕಲ್ಪನೆ, ನಿಖರತೆ ಇದ್ದೂ ವಿಷಯವನ್ನು ನಿರೂಪಿಸಲಾಗದ ಕಾರಣದಿಂದಾಗಿ ಅಂಕಗಳಿಕೆ ಕಡಿಮೆಯಾಗುತ್ತದೆ.

ಶಿಕ್ಷಕರಿಗೆ ಬೋಧನೆ ಹೊರತಾದ ಕಾರ್ಯಗಳು ಮಾಡಿ ಮುಗಿಸುವಂತಹುದ್ದಲ್ಲ. ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಇಲಾಖೆಯೇತರ ಕೆಲಸಗಳ ಹೊರೆಯೇ ಬಿದ್ದಿರುತ್ತದೆ. ಇದಲ್ಲದೆ ಬಿಸಿಯೂಟ, ಎಂಡಿಎಂ, ಎಸ್‌ಎಟಿಎಸ್‌ನಲ್ಲಿ ಹಾಕಬೇಕಾದ ಹಾಜರಿ, ಯುಡೈಸ್ ವಿವರಣೆಗಳು, ಪಠ್ಯಪುಸ್ತಕಗಳ ಆನ್‌ಲೈನ್ ಎಂಟ್ರಿ ಹೀಗೆ ಶಾಲೆಗೆ ಸಂಬಂಧಿಸಿದ ಹಲವು ಕೆಲಸಗಳೂ ಮುಗಿಬಿದ್ದಿರುತ್ತವೆ. ನಮ್ಮಂತಹ ಹಳ್ಳಿಗಳಲ್ಲಿ ಇರುವ ಶಾಲೆಗಳಿಗೆ ನೆಟ್‌ವರ್ಕ್ ಸಮಸ್ಯೆಯಿರುವುದರಿಂದ ಮಕ್ಕಳಿಗೆ ಬೋಧಿಸುವ ಸಮಯಕ್ಕಿಂತ ಎಲ್ಲಿ ನೆಟ್ ಸಿಗುತ್ತದೆ ಎಂದು ಹುಡುಕುತ್ತಾ ಓಡಾಡಬೇಕಾಗುತ್ತದೆ. ಈ ವರ್ಷ ಮಕ್ಕಳ ಫೋಟೊ ಹಾಜರಾತಿಯನ್ನೂ ಜಾರಿಗೆ ತರುವುದಾಗಿ ಇಲಾಖೆ ಹೇಳುತ್ತಿದೆ. ಇಂತಹ ಹೊಸಯೋಜನೆಗಳ ಜೊತೆಯಲ್ಲಿ ತಕ್ಷಣ ಕಳಿಸಬೇಕಾದ ಇಲಾಖೆಯ ಹಾಗೂ ಇಲಾಖೆಯೇತರ ತುರ್ತು ಮಾಹಿತಿಗಳು ಶಿಕ್ಷಕರ ಬೋಧನಾ ಅವಧಿಯನ್ನು ಕಸಿಯುತ್ತವೆ. ಇದೆಲ್ಲದರ ಜೊತೆ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಶಾಲೆ ಪ್ರಾರಂಭವಾಗಲೆಂದೇ ಕಾದು ಕುಳಿತಿರುತ್ತವೆ. ಇದು ಮಕ್ಕಳ ಓದು ಹಾಗೂ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ. ಪ್ರಾಥಮಿಕ ಹಂತದಲ್ಲಿ ಕಲಿಕಾ ಬುನಾದಿ ಸರಿಯಾಗದಿದ್ದರೆ ಮುಂದೆ ಏನೇ ಮಾಡಿದರೂ ಮಗು ಕಲಿಕಾಲೋಪವುಳ್ಳ ಮಗುವಾಗಿಯೇ ಉಳಿದುಬಿಡುತ್ತದೆ.

ಶಿಕ್ಷಣ ಇಲಾಖೆಯನ್ನು ರಜಾರಹಿತ ಇಲಾಖೆಯನ್ನಾಗಿ ಪರಿವರ್ತಿಸಿ ಈಗಿನ ರಜಾದಿನಗಳನ್ನು ಶಿಕ್ಷಕರ ತರಬೇತಿಗೆಂದು ಮೀಸಲಿಡುವುದು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಮಾಡುವುದು, ಚುನಾವಣಾ ಕರ್ತವ್ಯಕ್ಕೆ ನಿಯೋಜಿಸುವುದು, ಜಾತಿಗಣತಿ, ಜನಗಣತಿಗಳ ಕಾರ್ಯ ವಹಿಸುವುದನ್ನು ಮಾಡಿ ನಂತರದ ದಿನಗಳಲ್ಲಿ ಬೋಧನಾ ಅವಧಿ ವ್ಯರ್ಥವಾಗದಂತೆ ನೋಡಿಕೊಳ್ಳಬಹುದು. ಅಂತರ್ಜಾಲದ ಮೂಲಕ ಕಾರ್ಯನಿರ್ವಹಿಸಬೇಕಾದಲ್ಲಿ ಉಚಿತ ವೈಫೈ ಸೇವೆಯನ್ನಾದರೂ ನೀಡಿದಲ್ಲಿ ಅದಕ್ಕಾಗಿ ಬೋಧನಾ ಅವಧಿಯನ್ನು ಬಳಸಿಕೊಳ್ಳುವುದನ್ನು ತಡೆಗಟ್ಟಬಹುದು. ಮಕ್ಕಳ ಕುರಿತಾದ ವೈಯಕ್ತಿಕ ಕಾಳಜಿ ಹಾಗೂ ಇರುವ ಬೋಧನಾ ಅವಧಿಗಳನ್ನು ಶಿಕ್ಷಕರು ಸಮರ್ಪಕವಾಗಿ ಬಳಸಿಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟರೆ ಫಲಿತಾಂಶವು ಖಂಡಿತವಾಗಿಯೂ ಊರ್ಧ್ವಮುಖಿಯಾಗುವುದರಲ್ಲಿ ಸಂಶಯವಿಲ್ಲ.

ಲೇಖಕಿ: ಪ್ರೌಢಶಾಲಾ ಶಿಕ್ಷಕಿ, ಕವಯಿತ್ರಿ

ಗುಣಮಟ್ಟದ ಶಿಕ್ಷಣ ನೀಡುವುದು ರಾಜ್ಯ ಸರ್ಕಾರದ ಜವಾಬ್ದಾರಿ

• ಎಸ್.ಜಿ. ಸಿದ್ಧರಾಮಯ್ಯ

ಈ ಸಲದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದಿದ ಮಕ್ಕಳು ಕನ್ನಡ ಭಾಷೆಯಲ್ಲಿ ಹೆಚ್ಚು ನಪಾಸಾಗಿರುವುದು ಸುದ್ದಿಯಾಗಿದೆ. ಇದು ನೇರವಾಗಿ ಸರ್ಕಾರದ ಕಡೆಗೆ ಬೆರಳು ಮಾಡಿ ಪ್ರಶ್ನಿಸುವ ಸುದ್ದಿಯಾಗಿದೆ. ಹಾಗೆಯೇ ಸರ್ಕಾರ ಆತ್ಮವಿಮರ್ಶೆ ಮಾಡಿಕೊಂಡಂತೆ ಶೈಕ್ಷಣಿಕ ಸುಧಾರಣೆಗೆ ಆದ್ಯ ಗಮನಕೊಡಬೇಕಾದ ಉರಿಯುವ ಸಂಗತಿಯಾಗಿದೆ.

ಕನ್ನಡ ಬೋಧನೆಯ ಗುಣಮಟ್ಟ ಸರ್ಕಾರಿ ಶಾಲೆಗಳಲ್ಲಿ ಈ ಮಟ್ಟಕ್ಕೆ ಕುಸಿಯಲು ಕಾರಣವೇನು? ಈ ಒಂದು ಪ್ರಶ್ನೆಯ ಹಿಂದೆ ಇಡೀ ಸರ್ಕಾರಿ ಶಾಲಾ ಶಿಕ್ಷಣದ ಗುಣಮಟ್ಟ ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಧುತ್ತನೆ ಎದುರಾಗುತ್ತವೆ. ಈ ಸಮಸ್ಯೆಗಳು ಪರಿಹಾರವಾಗದೆ ಗುಣಮಟ್ಟ ಏರುಗತಿಯನ್ನು ಕಾಣುವುದು ಸಾಧ್ಯವಿಲ್ಲ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಬೋಧನೆ ಆಗದ ಹೊರತು ಯಾವ ಪೋಷಕರೂ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಧೈರ್ಯ ಮಾಡುವುದಿಲ್ಲ. ಇದರಿಂದಾಗಿ ಸರ್ಕಾರಿ ಶಾಲೆಗಳ ವಿಲೀನೀಕರಣ ಹಾಗೂ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆಯ ವೇಗಗತಿ ನಿಲ್ಲುವುದಿಲ್ಲ. ಇದನ್ನು ತಪ್ಪಿಸುವುದಕ್ಕಾಗಿ ಇಂಗ್ಲಿಷ್ ಬೋಧನೆಯನ್ನು ಪ್ರಾಥಮಿಕ ಹಂತದಲ್ಲಿಯೇ ಕಡ್ಡಾಯವಾಗಿಸಿದ್ದು, ಒಂದು ಆಮಿಷದ ಪ್ರಯೋಗವಾಯಿತೇ ಹೊರತು ಶೈಕ್ಷಣಿಕ ಗುಣಮಟ್ಟದ ಕುಸಿತ ಇನ್ನೂ ಹೆಚ್ಚಾಯಿತು.



ಪರಿಣಾಮ ಮಕ್ಕಳು ಇತ್ತ ಕನ್ನಡವನ್ನೂ ಕಲಿಯದೆ ಅತ್ತ ಇಂಗ್ಲಿಷನ್ನೂ ಕಲಿಯದೆ ಅನಕ್ಷರಸ್ಥ ಎಡಬಿಡಂಗಿಗಳಾಗಿ ಶಾಲೆ ಬಿಡುವವರ ಸಂಖ್ಯೆ ಹೆಚ್ಚಾಯಿತು. ಸರ್ಕಾರಿ ಶಾಲೆಗಳ ಮುಚ್ಚುವಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಸಾಗಿದೆ. ಇಷ್ಟಾಗಿಯೂ ಸಂಬಂಧಿಸಿದ ಆಡಳಿತ ವ್ಯವಸ್ಥೆ ಇದರ ಬಗ್ಗೆ ಮಾಮೂಲಿ ನಿರ್ಲಕ್ಷ್ಯವನ್ನು ಮುಂದುವರಿಸುವುದು 'ಉಚಿತ ಕಡ್ಡಾಯ ಶಿಕ್ಷಣ' ಯೋಜನೆಯ ದುರಂತವೇ ಸರಿ.

> ಸರ್ಕಾರವು 2016ರ ಜೂನ್ 13ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ, ಸರ್ಕಾರಿ ಶಾಲೆಗಳ ಸಬಲೀಕರಣ ವರದಿಗಾಗಿ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ಇಡೀ ರಾಜ್ಯದ ಒಳನಾಡಿನ ಗಡಿಭಾಗಗಳ ಸರ್ಕಾರಿ ಶಾಲೆಗಳನ್ನು ತನ್ನ ಅಧ್ಯಯನದ ಕಕ್ಷೆಗೆ ಒಳಗು ಮಾಡಿಕೊಂಡು ವರದಿಯನ್ನು ತಯಾರಿಸಿ 2017ರಲ್ಲಿ ಸರ್ಕಾರಕ್ಕೆ ಅದನ್ನು ಒಪ್ಪಿಸಿದೆ. ಅಲ್ಲಿನ ಶಿಫಾರಸುಗಳು ಇಂದಿಗೂ ಹೆಚ್ಚು ಪ್ರಸ್ತುತವಿದ್ದು, ಅವುಗಳನ್ನು ಸಂವಿಧಾನಾತ್ಮಕವಾಗಿ ಜಾರಿಗೆ ತರುವ ಅಗತ್ಯವಿದೆ

ಅನ್ನ, ಶಿಕ್ಷಣ, ಆರೋಗ್ಯ ಇವುಗಳು ಯಾವುದೇ ಜವಾಬ್ದಾರಿಯುತ ಸರ್ಕಾರದ ಸಾಮಾಜಿಕ ಹೊಣೆಗಾರಿಕೆ ಆಗಬೇಕು. ಅನ್ನದ ವಿಚಾರದಲ್ಲಿ ಈಗಿನ ಸರ್ಕಾರದ ನಡೆ ಶ್ಲಾಘನೀಯವಾದುದಾಗಿದೆ. ಆದರೆ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಈ ಮಾತನ್ನು ಹೇಳಲಾಗುವುದಿಲ್ಲ.

ಶಿಕ್ಷಣ ಮತ್ತು ಆರೋಗ್ಯದ ವಿಚಾರದಲ್ಲಿ ಖಾಸಗೀಕರಣದ ವೇಗ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇವೆರಡೂ ವ್ಯಾಪಾರದ ಸರಕಾಗುತ್ತಿವೆ. ಉಳ್ಳವರ ಕೊಳ್ಳುವಿಕೆಯ ಸರಕುಗಳಾಗಿ, ಬಡವರ ಪಾಲಿಗೆ ನನಸಾಗದ ಕನಸುಗಳಾಗುತ್ತಿವೆ. ಶಿಕ್ಷಣದಲ್ಲಿ ಖಾಸಗೀಕರಣ ಹೆಚ್ಚಿದಂತೆ ನೆಲದ ಭಾಷೆಯಾದ ಕನ್ನಡ, ಶಿಕ್ಷಣದಿಂದ ದೂರವಾಗುತ್ತಿದೆ. ಕರ್ನಾಟಕದಲ್ಲಿ ಕನ್ನಡ ತಬ್ಬಲಿಯಾಗುತ್ತಿದೆ. ಶಾಲಾ ಶಿಕ್ಷಣದಲ್ಲಿ ಕನ್ನಡ ಉಳಿಯದೆ, ಬೆಳೆಯದೆ ಹೋದರೆ ಆಡಳಿತ ಭಾಷೆಯಾಗಿ ಕನ್ನಡ ಬೆಳೆಯುವುದಿರಲಿ, ಉಳಿಯದೇ ಹೋಗುವ ಸಾಧ್ಯತೆಯೇ ಹೆಚ್ಚುತ್ತಿದೆ. ಈ ಮಧ್ಯೆ, ತ್ರಿಭಾಷಾ ಸೂತ್ರದ ತ್ರಿಶೂಲ ಕಾರಣದಿಂದಾಗಿ ಹಿಂದಿಯ ಆಧಿಪತ್ಯ ಹೆಚ್ಚುತ್ತಾ ಹೋಗಿ, ಕನ್ನಡದ ಮಕ್ಕಳು ಕನ್ನಡ ಓದಲು, ಬರೆಯಲು ಬಾರದವರಾಗಿ ಅನ್ಯಭಾಷೆಯ ಹಂಗಿನಲ್ಲಿ ಎರಡನೆಯ ದರ್ಜೆಯ ಪ್ರಜೆಗಳಾಗುವ ಅಪಾಯ ಹೆಚ್ಚಾಗುತ್ತಿದೆ.

ಮೇಲಿನ ಎಲ್ಲಾ ಕಾರಣಗಳ ಆತ್ಮಾವಲೋಕನದಲ್ಲಿ ಕರ್ನಾಟಕ ಸರ್ಕಾರ ಹೊಣೆಯರಿತು ಕನ್ನಡದ ಉಳಿವಿಗಾಗಿ, ಬೆಳವಣಿಗೆಗಾಗಿ ಹೆಚ್ಚು ಹೆಚ್ಚು ಕರ್ತವ್ಯಮುಖಿಯಾಗುವ ಅಗತ್ಯವಿದೆ. ಈ ಎಲ್ಲಾ ಸಮಸ್ಯೆಗಳೂ ಇಂದು ನಿನ್ನೆಯಲ್ಲಿ ಆದ ಬೆಳವಣಿಗೆಗಳಲ್ಲ; ದಶಕಗಳಿಂದ ಕ್ರೋಢೀಕೃತಗೊಂಡು ಉಲ್ಬಣಗೊಂಡಿರುವ ಸಮಸ್ಯೆಗಳು; ಇಂದು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಪ್ರತಿಫಲಿತವಾಗಿರುವ ಕೇಡುಗಳು. ಇದನ್ನು ಅರಿತೇ ಇದೇ ಸರ್ಕಾರವು 2016ರ ಜೂನ್ 13ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ, ಸರ್ಕಾರಿ ಶಾಲೆಗಳ ಸಬಲೀಕರಣ ವರದಿಗಾಗಿ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ಇಡೀ ರಾಜ್ಯದ ಒಳನಾಡಿನ ಗಡಿಭಾಗಗಳ ಸರ್ಕಾರಿ ಶಾಲೆಗಳನ್ನು ತನ್ನ ಅಧ್ಯಯನದ ಕಕ್ಷೆಗೆ ಒಳಗು ಮಾಡಿಕೊಂಡು ವರದಿಯನ್ನು ತಯಾರಿಸಿ 2017ರಲ್ಲಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದೆ. ಅಲ್ಲಿನ ಶಿಫಾರಸುಗಳು ಇಂದಿಗೂ ಹೆಚ್ಚು ಪ್ರಸ್ತುತವಿದ್ದು, ಅವುಗಳನ್ನು ಸಂವಿಧಾನಾತ್ಮಕವಾಗಿ ಜಾರಿಗೆ ತರುವ ಅಗತ್ಯವಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಕನ್ನಡ ಭಾಷೆಯನ್ನು ಸರ್ಕಾರಿ ಶಾಲೆಗಳಲ್ಲಿ 'ನಲಿ ಕಲಿ' ಪದ್ಧತಿಯ ಅನುಸಾರ ಕಲಿಸುತ್ತಿದ್ದು, ಇದನ್ನು ಜಾರಿಗೊಳಿಸಿದಂದಿನಿಂದ ಇಂದಿನ ತನಕವೂ ಅದನ್ನು ಪುನರ್ ಪರಿಶೀಲನೆಗೆ ಒಳಗು ಮಾಡಿ ಕಲಿಕೆಯಲ್ಲಿ ಮಾರ್ಪಾಡುಗಳನ್ನು ತರಲಾಗಿಲ್ಲ. ತಂದಿದ್ದರೂ ಅದು ಸಫಲ ಮಾರ್ಗವಲ್ಲ ಎಂಬುದನ್ನು ಈ ಸಾರಿಯ ಫಲಿತಾಂಶ ನಿಚ್ಚಳವಾಗಿ ಮುಖಕ್ಕೆ ಹಿಡಿದು ತೋರಿಸುತ್ತದೆ. ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಬಳಸುತ್ತಿರುವ ಕಾರ್ಡುಗಳ ಬಳಕೆಯ ವಿಧಾನವೂ ವಿಫಲವಾದದ್ದೆಂಬುದು ಇದರಿಂದ ವ್ಯಕ್ತವಾಗಿದೆ. ಪಠ್ಯಪುಸ್ತಕಗಳ ಬಳಕೆಯ ಮಾರ್ಗವೇ ಯಾಕೆ ಹೆಚ್ಚು ಸೂಕ್ತ ಎಂಬುದನ್ನು ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯವಿದೆ.

ಇದರ ಜತೆಗೆ ಸರ್ಕಾರಿ ಶಾಲೆಗಳ ಶಿಕ್ಷಕರನ್ನು ಮಕ್ಕಳ ಕಲಿಕೆಗೆ ಮಾತ್ರ ತೊಡಗಿಸಿಕೊಂಡು, ಪೂರ್ಣ ಪ್ರಮಾಣದ ಶಿಕ್ಷಕರನ್ನಾಗಿ ಮಾಡುವ ಅಗತ್ಯವಿದೆ. ಆಧಾರ್ ನೋಂದಣಿಯಿಂದ ಹಿಡಿದು ಜಾತಿ ಜನಗಣತಿವರೆಗಿನ ಹದಿನಾರು ಬಗೆಯ ಅನ್ಯ ಕಾರ್ಯಗಳಿಗೆ ಅವರನ್ನು ಸರ್ಕಾರ ಬಳಸಿಕೊಳ್ಳುತ್ತಿದೆ. ಶಿಕ್ಷಕರನ್ನು ಶಿಕ್ಷಕರಾಗಿ ಕಾರ್ಯ ನಿರ್ವಹಿಸುವುದಕ್ಕೆ ಬಿಡದೆ ಮಕ್ಕಳ ಕಲಿಯುವ ಸಮಯವನ್ನು ದೋಚುವ ಈ ಬಗೆಯ ದುರ್ಬಳಕೆ ಮಕ್ಕಳ ಶಿಕ್ಷಣದ ಮೇಲೆ ನಡೆಸುವ ಪ್ರಹಾರವೇ ಆಗಿದೆ. ಈ ಬಗೆಯ ದ್ರೋಹ ಕೃತ್ಯವನ್ನು ಸರ್ಕಾರ ಕಾನೂನಾತ್ಮಕವಾಗಿ ನಿಷೇಧಿಸುವ ತುರ್ತು ಇದೆ. ಹಾಗೆಯೇ ಶಿಕ್ಷಕರು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ತಮ್ಮ ವೃತ್ತಿ ನೈಪುಣ್ಯವನ್ನು ಉನ್ನತೀಕರಿಸಿಕೊಳ್ಳಲು ಅವಕಾಶ ನೀಡಬೇಕು. ಅದರಂತೆ ಕಾಲೋಚಿತವಾಗಿ ತರಬೇತಿ ಪಡೆದು ಅನುಪಾಲನೆಗೆ ಪೂರಕವಾಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಕಲಿಕೆಯ ವಿಧಾನವನ್ನು ಬಲವರ್ಧನೆಗೊಳಿಸಬೇಕು. ಈ ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಇದು ತಂತ್ರಜ್ಞಾನದ ಯುಗ. ಆಧುನಿಕ ತಂತ್ರಜ್ಞಾನವನ್ನು ಮರೆತು ಯಾವುದೇ ಶಿಕ್ಷಣವನ್ನು ಬಳಸಲಾಗುವುದಿಲ್ಲ. ಮಾಹಿತಿ ತಂತ್ರಜ್ಞಾನದ ಭಾಗವಾಗಿ ಇ-ಲೈಬ್ರರಿ, ಇ-ಬುಕ್ ಇತ್ಯಾದಿ ಕಾಲೋಚಿತ ತಂತ್ರಜ್ಞಾನವನ್ನು, ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಂಡು ಶಿಕ್ಷಣ ನೀಡುವುದು ಇಂದಿನ ತುರ್ತಾಗಿದೆ. ಅಲ್ಲದೆ ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಸುಧಾರಿಸಲು ಪ್ರತಿ ಶಾಲೆಗೂ ತರಗತಿಗೊಬ್ಬ ಶಿಕ್ಷಕ, ವಿಷಯಕ್ಕೊಬ್ಬ ಶಿಕ್ಷಕ ಎಂಬುದನ್ನು ಕಡ್ಡಾಯವಾಗಿ ಪಾಲಿಸಬೇಕಾದ ಅಗತ್ಯವಿದೆ. ಮಕ್ಕಳ– ಶಿಕ್ಷಕರ ಆದರ್ಶ ಅನುಪಾತವನ್ನು ಮುಟ್ಟುವವರೆಗೂ, ಕನಿಷ್ಠ ವಿಷಯವಾರು ಬೋಧನೆಯ ಶಿಕ್ಷಕರನ್ನು ಒದಗಿಸುವ ಅಗತ್ಯವಿದೆ.

ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ತನ್ನ ಮೂಲಭೂತ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಮಾರ್ಗವಾಗಿ ಸರ್ಕಾರಿ ಶಾಲೆಗಳನ್ನು ದತ್ತು ಯೋಜನೆಗೆ, ಸಾರ್ವಜನಿಕ– ಖಾಸಗಿ ಸಹಭಾಗಿತ್ವಕ್ಕೆ ಕೊಟ್ಟು ಶಾಲೆಗಳ ಮೂಲ ಆಶಯಕ್ಕೆ ಧಕ್ಕೆಯುಂಟು ಮಾಡುತ್ತಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಿಕ್ಷಣ, ಅದರಲ್ಲೂ ಸಮಾನ ಶಿಕ್ಷಣವನ್ನು ಮಕ್ಕಳಿಗೆ ನೀಡುವುದು ಸರ್ಕಾರದ ಕರ್ತವ್ಯ. ಇದನ್ನು ನಿಭಾಯಿಸಲಾಗದೆ ಖಾಸಗಿಯವರ ಹೆಗಲಿಗೆ ಸರ್ಕಾರಿ ಶಾಲೆಗಳನ್ನು ಹೊರಿಸುವುದು ಶಿಕ್ಷಣದ ಹಕ್ಕುಬಾಧ್ಯತೆಗೆ ಎರವಾದ ನಡವಳಿಕೆಯೇ ಸರಿ.

